# ಕೆ.ವಿ. ಸುಬ್ಬಣ್ಣ ಸ್ಮರಣೆ

## ಗಂಗಾಧರ್ ಕಲ್ಲಹಳ್ಳ

*ದಿನಾಂಕ ೧೬ ಜುಲೈ ೨೦೧೩ರಂದು, ದಿ| ಕೆ.ವಿ. ಸುಬ್ಬಣ್ಣನವರು ನಿಧನರಾದ ದಿನ, ಅವರ ಸ್ಮ ರಣಾರ್ಥ ನೀನಾಸಮ್ ಸಂಸ್ಥೆಯು ಒಂದು ವಿಶೇಷೋಪನ್ಯಾಸವನ್ನೂ ಮತ್ತು ನಾಟಕಪ್ರದರ್ಶನವನ್ನೂ ಏರ್ಪಡಿಸಿತ್ತು. ಆ ಉಪನ್ಯಾಸ ಕಾರ್ಯಕ್ರಮದ ಆರಂಭದಲ್ಲಿ, ಸುಬ್ಬಣ್ಣನವರ ಆಪ್ತಮಿತ್ರ ಗಂಗಾಧರ್ ಅವರು ತಮ್ಮ ಸುಬ್ಬಣ್ಣ-ಸ್ಮ ರಣೆಗಳನ್ನು ಹಂಚಿಕೊಂಡರು. ಆ ಮಾತುಗಳ ಲಿಖಿತ ಆವೃತ್ತಿಯನ್ನೀಗ ಇಲ್ಲಿ ಪ್ರಕಟಿಸಲಾಗುತ್ತಿದೆ.*

ಗೆಳೆಯ ಸುಬ್ಬಣ್ಣ ತೀರಿಕೊಂಡು ಎಂಟು ವರ್ಷಗಳಾದವು. ಆದರೆ ನನಗೆ ಹೆಗ್ಗೋಡಿಗೆ ಬಂದಾಗ ಈಗಲೂ ಸುಬ್ಬಣ್ಣ ನಮ್ಮ ಮಧ್ಯದಲ್ಲಿಯೇ ಇದ್ದಾರೆ ಅನ್ನಿಸುತ್ತೆ.

ಕಛೇರಿಯ ಮುಂಭಾಗದ ಅಡಿಕೆಯ ದಬ್ಬೆಯ ಬೆಂಚಿನ ಮೇಲೆ ಕುಳಿತುಕೊಂಡು ತಲೆ ತಗ್ಗಿಸಿ ಎಲೆಅಡಿಕೆ ಚೀಲದೊಳಗೆ ಕೈಹಾಕಿ ಅಡಿಕೆ ಹುಡುಕುತ್ತಿರುವುದನ್ನು ನೋಡುತ್ತೀನಿ. ಉದ್ದನೆಯ ಕಪ್ಪು ಕೋಟುಧರಿಸಿ ಬರುವ ಅತಿಥಿಗಳನ್ನು ನಗುಮೊಗದಿಂದ ಬನ್ನಿ ಬನ್ನಿ ಎಂದು ಆತ್ಮೀಯತೆಯಿಂದ ಕರೆಯುವ ಸುಬ್ಬಣ್ಣ ಕಾಣಿಸುತ್ತಾರೆ. ಕಚೇರಿಯ ಒಳಗೆ ಕುಳಿತು ಎಲೆಅಡಿಕೆ ಹಾಕುತ್ತ ಯಾರೊಡನೆಯೋ ಗಂಭೀರವಾಗಿ ಮಾತನಾಡ್ತಾ ಕುಳಿತಿರುವ ಸುಬ್ಬಣ್ಣ ಕಾಣಿಸ್ತಾರೆ. ಸಭಾಂಗಣದಲ್ಲಿ ಯಾರೋ ಉಪನ್ಯಾಸ ಮಾಡ್ತಿದ್ದಾಗ ಕೊನೆಯ ಬೆಂಚಿನಲ್ಲಿ ಕುಳಿತು ತದೇಕಚಿತ್ತದಿಂದ ಉಪನ್ಯಾಸವನ್ನು ಕೇಳುತ್ತಾ ಕೈಯಲ್ಲಿ ಹೊಗೆಸೊಪ್ಪನ್ನು ತಿಕ್ಕುತ್ತ ಕುಳಿತಿರುವ ಸುಬ್ಬಣ್ಣನನ್ನು ಕಾಣುತ್ತೇನೆ – ಹೀಗೆ ನಾನು ಎಲ್ಲೆಲ್ಲೂ ಸುಬ್ಬಣ್ಣನನ್ನು ಕಾಣುತ್ತೇನೆ.

ನಾನು ಇಂದು ಸುಬ್ಬಣ್ಣನವರ ಸಾಧನೆಗಳನ್ನಾಗಲಿ, ಬರಹಗಳನ್ನಾಗಲಿ ಅಥವ ಚಿಂತನೆಗಳನ್ನಾಗಲಿ ಕುರಿತು ಮಾತನಾಡುವುದಿಲ್ಲ. ಸುಮಾರು ಅರವತ್ತು ವರುಷಗಳ ಹಿಂದಿನ ನನ್ನ ಮತ್ತು ಅವರ ಒಡನಾಟವನ್ನು ಮಾತ್ರ ನಿಮ್ಮೊಂದಿಗೆ ಜ್ಞಾಪಿಸಿಕೊಳ್ಳಲು ಇಚ್ಛಿಸುತ್ತೇನೆ. ಅವರೊಡನೆ ನಾನು ಕಳೆದ ದಿನಗಳು ನನ್ನ ಮನಸ್ಸಿನಲ್ಲಿ ಹಸಿರಾಗಿ ಹೆಪ್ಪುಗಟ್ಟಿ ಕುಳಿತಿದೆ.

೨

ಸುಬ್ಬಣ್ಣ ನನಗೆ ಮೊದಲು ಪರಿಚಯವಾಗಿದ್ದು ಸುಮಾರು ೧೯೫೦–೫೧ ರಲ್ಲಿ. ನಾವು ಇಂಟರ್ಮೀಡಿಯೇಟ್ ಓದಲು ಶಿವಮೊಗ್ಗಕ್ಕೆ ಹೋಗಿದ್ದಾಗ. ಆಗ ಜಿಲ್ಲೆಯಲ್ಲಿ ಇದ್ದುದು ಶಿವಮೊಗ್ಗೆಯ ಇಂಟರಮೀಡಿಯೆಟ್ ಕಾಲೇಜ್ ಒಂದೇ. ಭದ್ರಾವತಿ, ಸಾಗರ, ತೀರ್ಥಹಳ್ಳಿ ಮುಂತಾದ ಕಡೆಗಳಿಂದ ಓದಲು ವಿದ್ಯಾರ್ಥಿಗಳು ಇಲ್ಲಿಗೇ ಬರಬೇಕಾಗಿತ್ತು. ಸಾಗರದಿಂದ ಬಂದ ಸುಬ್ಬಣ್ಣ ಚಿಕ್ಕಬ್ರಾಹ್ಮಣರ ಬೀದಿಯಲ್ಲಿದ್ದ ಸುಬ್ಬರಾವ್ ಎಂಬುವರ ಅಂಗಡಿಯ ಮಹಡಿಯ ಮೇಲಿದ್ದ ರೂಂ ಒಂದರಲ್ಲಿ ಇದ್ದರು. ಊಟ ಕುಪ್ಪಯ್ಯನ ಹೋಟೆಲ್‌ನಲ್ಲಿ. ಆಗ ತೀರ್ಥಹಳ್ಳಿ, ಸಾಗರ ಮೊದಲಾದ ಮಲೆನಾಡಿನ ಬ್ರಾಹ್ಮಣ ಅಡಿಕೆ ಬೆಳೆಗಾರರಿಗೆ ಕುಪ್ಪಯ್ಯನ ಹೋಟೆಲ್ಲು ಅಚ್ಚುಮೆಚ್ಚು. ಅಲ್ಲಿ ಮೇಜು ಕುರ್ಚಿಗಳಿರಲಿಲ್ಲ. ನೆಲದಮೇಲೆಯೇ ಬಾಳೆ ಎಲೆ ಊಟ. ಸಂಧ್ಯಾವಂದನೆ ಮಾಡುವವರಿಗೂ ಅಲ್ಲಿ ವ್ಯವಸ್ಥೆ ಇತ್ತು. ಆಗ ಅಡಿಕೆ ಮಂಡಿಗಳಿದ್ದುದೆಲ್ಲ ಚಿಕ್ಕ ಬ್ರಾಹ್ಮಣರ ಬೀದಿಯಲ್ಲಿಯೇ. ಮಂಡಿಯಿಂದ ಹಣ ತರಲು ಹೋದ ಬೆಳೆಗಾರರು ಕನಿಷ್ಠ ಮೂರು ನಾಲ್ಕು ದಿನ ಕಾಯಲೇಬೇಕು. ಕುಪ್ಪಯ್ಯನ ಹೋಟೇಲ್‌ನಲ್ಲಿ ಕಾಪಿ–ತಿಂಡಿ–ಊಟ. ರಾತ್ರಿ ಮಲಗುವುದು ಮಂಡಿಯಲ್ಲಿ. ಆಗ ನಾನು ಇದ್ದುದು ಅದೇ ಬೀದಿಯಲ್ಲಿದ್ದ ಮೀನಾಕ್ಷಿ ಭವನದ ಮಹಡಿಯ ಮೇಲೆ. ಸುಬ್ಬಣ್ಣ ವಿಜ್ಞಾನದ ವಿದ್ಯಾರ್ಥಿ. ನಾನು ಕಲಾ ವಿದ್ಯಾರ್ಥಿ. ನಮ್ಮ ಪರಿಚಯ ಹೆಚ್ಚು ನಿಕಟವಾಗಿಲ್ಲದಿದ್ದರೂ ತೀರ್ಥಹಳ್ಳಿಯ ನನ್ನ ಸ್ನೇಹಿತ, ಸುಬ್ಬಣ್ಣನ ಸಹಪಾಠಿ ಎನ್.ವಿ.ಸುಬ್ಬರಾವ್ ಎಂಬುವರೊಡನೆ ಒಂದೆರಡು ಬಾರಿ ಅವರ ರೂಮಿಗೂ ಹೋಗಿದ್ದೆ. ಗೋಡೆಯ ಮೇಲೆಲ್ಲಾ ಏನೇನೋ ಗೀಚಿದ ಚಿತ್ರಗಳು, ಬರಹಗಳು. ಮುಖ್ಯವಾಗಿ ನನ್ನ ಗಮನ ಸೆಳೆದದ್ದು ಕುಪ್ಪಯ್ಯನ ಸ್ತುತಿ. "ನೆನೆಯದಿರಣ್ಣ ಶಿವಮೊಗ್ಗೆಯೊಳಿಂ ಪೆರೆತಾರುಮೊನೊಂದೆ ಚಿತ್ತದಿಂ/ ನೆನೆವೊಡೆ ಕುಪ್ಪಯ್ಯನಂನೆನೆಯ. ಕುಪ್ಪಯ್ಯಂಗಾರ್ದೊರ?( ಅವನ ಹೆಂಡತಿ) ಕುಪ್ಪಯ್ಯನುಪ್ಪಿಟ್ಟು ಕುಪ್ಪಯ್ಯನ ದೋಸೆ ಓಂಕಾಯಿ ಕುಪ್ಪಯ್ಯನ....." ಇದರಿಂದಾಗಿ ಅವರು ಕುಪ್ಪಯ್ಯನವರ ಸಿಟ್ಟಿಗೂ ಒಳಗಾಗಬೇಕಾಗಿತ್ತಂತೆ. ಆಗ ಅವರೊಡನೆ ಪಾ.ಸು.ಭಟ್ಟ, ಕಾನಲೆ ಕೃಷ್ಣಮೂರ್ತಿ, ಟಿ.ಎಸ್. ಲಕ್ಷ್ಮೀನಾರಾಯಣ ರಾವ್ ಮುಂತಾದವರು ಅದೇ ಮಹಡಿಯ ರೂಂಗಳಲ್ಲಿ ಇದ್ದರು.

ನನ್ನ ಸುಬ್ಬಣ್ಣ ಅವರ ಸಂಬಂಧ ಹೆಚ್ಚು ನಿಕಟವಾದುದು ಮೈಸೂರು ಮಹಾರಾಜಾ ಕಾಲೇಜು ಸೇರಿದ ಮೇಲೆ. ಅವರು ಕನ್ನಡ ಆನರ್ಸ್ ಸೇರಿದರು. ನಾನು ಬಿ.ಎ. ವಿದ್ಯಾರ್ಥಿಯಾದೆ. ನಮ್ಮಿಬ್ಬರಿಗೂ ಆತ್ಮೀಯನಾದ ಅನಂತಮೂರ್ತಿ ಚಾಮುಂಡಿಪುರದಲ್ಲಿ ಒಂದು ರೂಂನಲ್ಲಿ ಉಳಿದಿದ್ದು ಸಾರ್ವಜನಿಕ ಹಾಸ್ಟೆಲ್‌ನಲ್ಲಿ ಊಟಮಾಡುತ್ತಿದ್ದ. ನಾನು ಮತ್ತು ಸುಬ್ಬಣ್ಣ ಮಹಾರಾಜಾ ಕಾಲೇಜ್ ಹಾಸ್ಟೆಲ್‌ನಲ್ಲಿ ಒಂದೇ ರೂಮಿನಲ್ಲಿದ್ದೆವು. ಮಹಾರಾಜಾ ಕಾಲೇಜು ಹಾಸ್ಟೆಲ್ಲು ಆ ಕಾಲದಲ್ಲಿ

ಒಂದು ಪ್ರತಿಷ್ಠೆಯ ಹಾಸ್ಟೆಲ್ಲು. ಅಲ್ಲಿ ಸ್ನಾತಕ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಮಾತ್ರ ಅವಕಾಶವಿತ್ತು. ಯಾವ ವಿಶೇಷ ನಿರ್ಬಂಧಗಳೂ ಅಲ್ಲಿರಲಿಲ್ಲ. ಹಾಗಾಗಿ ಅನಂತಮೂರ್ತಿ ಹೆಚ್ಚುಕಾಲ ನಮ್ಮ ಜೊತೆಗೇ ಹಾಸ್ಟೆಲ್‌ನಲ್ಲಿ ಕಳೆಯುತ್ತಿದ್ದ. ನಮ್ಮ ರೂಮಿಗೆ ಬಂದಾಗಲೆಲ್ಲ ಸುಬ್ಬಣ್ಣನೊಂದಿಗೆ ಅವನ ವಾಗ್ವಾದ ನಡೆಯುತ್ತಿತ್ತು. ಅದು ಬಟ್ಟೆ ಹಾಕುವುದರಿಂದ ಹಿಡಿದು ಸಾಹಿತ್ಯ ಮತ್ತು ಸಮಾಜವಾದದವರೆಗೂ. ಚರ್ಚೆಯಲ್ಲಿ ನ.ರತ್ನ, ವಿಶ್ವನಾಥ ಮಿರ್ಲೆ, ಗೋಪಾಲಕೃಷ್ಣ, ಪಿ. ಶ್ರೀನಿವಾಸರಾವ್ ಮೊದಲಾದವರೂ ಭಾಗವಹಿಸುತ್ತಿದ್ದರು.

ಸುಬ್ಬಣ್ಣನದು ತುಂಬ ಅವಸರದ ಪ್ರವೃತ್ತಿ. ಏನಾದರೂ ತಲೆಗೆ ಹೊಕ್ಕಿತೆಂದರೆ ಅದನ್ನು ಮಾಡಿ ಮುಗಿಸುವವರೆಗೂ ವಿಶ್ರಾಂತಿಯಿಲ್ಲ. ಪುಸ್ತಕ ಪ್ರಕಟಿಸಬೇಕೆಂಬ ಹಂಬಲದಿಂದ “ಕೈಲಾಸಂ ದರ್ಶನ” ಎಂಬ ಸಂಕಲವೊಂದನ್ನು ಅಚ್ಚುಹಾಕಿಸಿದರು. ಮುಂದೆ ಮಾರಾಟದ ಪ್ರಶ್ನೆ ಬಂದಾಗ ಒಂದು ಹೊಸ ಉಪಾಯ ಯೋಚಿಸಿದರು. ವಯಸ್ಕರ ಶಿಕ್ಷಣ ಮಂಡಲಿಯಿಂದ ರಾಜ್ಯದಲ್ಲಿರುವ ಎಲ್ಲಾ ಮಹಿಳಾ ಸಮಾಜಗಳ ಪಟ್ಟಿ ಪಡೆದು ಎಲ್ಲರಿಗೂ ಒಂದೊಂದು ಪ್ರತಿಯನ್ನು ವಿ.ಪಿ.ಪಿ. ಮೂಲಕ ಕಳುಹಿಸಿದರು. ಮಹಿಳೆಯರು ತಿರಸ್ಕರಿಸುವುದಿಲ್ಲ ಎಂಬುದು ಅವರ ಧೃಢವಾದ ನಂಬಿಕೆಯಾಗಿತ್ತು. ಆದರೆ ಅವರ ನಂಬಿಕೆ ಹುಸಿಯಾಯಿತು. ಹಾಸನದ ಮಹಿಳಾಮಂಡಲಿಯ ಹೊರತು ಉಳಿದವರೆಲ್ಲರೂ ವಿಪಿಪಿಯನ್ನು ತಿರಸ್ಕರಿಸಿದ್ದರು. ಇದರಿಂದಾಗಿ ಮತ್ತಷ್ಟು ಆರ್ಥಿಕ ಹೊರೆಯನ್ನು ಹೊರಬೇಕಾಯಿತು. ಕೆಲವು ದಿನಗಳ ನಂತರ ಗಾಂಧೀಜಿಯವರನ್ನು ಕುರಿತ ಕವನ ಸಂಕಲನ “ಅಮರನಾದ್ಯೆ ತಂದೆ” ಪ್ರಕಟಿಸಿದರು. ಮುಂದೆ ಅವರು ಪ್ರಾರಂಭಿಸಿದ ಅಕ್ಷರ ಪ್ರಕಾಶನಕ್ಕೆ ಬಹುಶ: ಇದೇ ನಾಂದಿ.

ಕಾಲೇಜಿನಲ್ಲಿ ಸುಬ್ಬಣ್ಣ ಎಲ್ಲರ ಗಮನ ಸೆಳೆದ ವಿದ್ಯಾರ್ಥಿ. ಆನರ್ಸ್‌ನ ಮೂರು ವರ್ಷಗಳೂ ಸುಬ್ಬಣ್ಣ ಸಬ್ಜೆಕ್ಟ್ ಸ್ಕಾಲರ್. ಕೆ.ವಿ. ಪುಟ್ಟಪ್ಪ, ಡಿ.ಎಲ್. ನರಸಿಂಹ ಆಚಾರ್, ಕೆ.ವಿ. ರಾಘವಾಚಾರ್, ಅನಂತ ರಂಗಾಚಾರ್, ಎಸ್.ವಿ. ಪರಮೇಶ್ವರ ಭಟ್ಟ, ಮೊದಲಾದವರು ಅವರ ಅಧ್ಯಾಪಕರು. ಡಿ.ಎಲ್. ನರಸಿಂಹಾಚಾರ್ ಅವರು ಆದಿಪುರಾಣದ ಕೆಲವು ಸಂದರ್ಭಗಳನ್ನು ವಿವರಿಸುವಾಗ ಭಾವಪರವಶರಾಗಿ ಗದ್ಗದಿತರಾದದ್ದನ್ನು ರೂಮಿಗೆ ಬಂದು ನನಗೆ ತಿಳಿಸುವಾಗ ಸುಬ್ಬಣ್ಣ ತಾವೂ ಆ ಭಾವನೆಯನ್ನು ಅನುಭವಿಸಿದ್ದು ನನಗೆ ನೆನಪಿದೆ. ಕುವೆಂಪು ಅವರ ಕಾವ್ಯ ಮಿಮಾಂಸೆ, ಕಾ.ವೆಂ.ರಾಘವಾಚಾರ್ಯರ ಭಾಷಾಶಾಸ್ತ್ರ ತರಗತಿಗಳಿಗೆ ಸುಬ್ಬಣ್ಣ ಎಂದೂ ತಪ್ಪಿಸಿಕೊಳ್ಳುತ್ತಿರಲಿಲ್ಲ. ಸುಬ್ಬಣ್ಣ ಎಲ್ಲ ಅಧ್ಯಾಪಕರಿಗೂ ಪ್ರಿಯರಾದ ವಿದ್ಯಾರ್ಥಿ.

ಆಗ ಮಹಾರಾಜಾ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದ, ನಿವೃತ್ತಿಯ ಅಂಚಿನಲ್ಲಿದ್ದ ವಿದ್ವಾಂಸ ಎಸ್.ವಿ.ರಂಗಣ್ಣ ಅವರಿಗೆ ಅಭಿನಂದನಾ ಗ್ರಂಥವೊಂದನ್ನು



ಸಮರ್ಪಿಸಬೇಕೆಂಬ ಯೋಚನೆ ಸುಬ್ಬಣ್ಣನವರ ತಲೆಗೆ ಹೊಕ್ಕಿತು. ತಡಮಾಡದೇ ಯೋಚನೆಯನ್ನು ಹಾಸ್ಟೆಲ್‌ನಲ್ಲಿಯೇ ಇನ್ನೊಂದು ಕೊಠಡಿಯಲ್ಲಿದ್ದ ಹಾ.ಮಾ. ನಾಯಕರಿಗೆ ತಿಳಿಸಿ ಆ ಗ್ರಂಥಕ್ಕೆ “ಬಾಗಿನ” ಎಂಬ ಹೆಸರನ್ನೂ ನಿರ್ಧರಿಸಿ ಕಾರ್ಯೋನ್ಮುಖರಾಗಿಯೇ ಬಿಟ್ಟರು. ಈ ಸಂಗತಿಯನ್ನು ತನ್ನ ಗಮನಕ್ಕೆ ತರಲಿಲ್ಲವೆಂದು ಅನಂತಮೂರ್ತಿಗೆ ಸ್ವಲ್ಪ ಬೇಸರವಾಗಿತ್ತು. ಈ ಗ್ರಂಥಕ್ಕೆ ವಿದ್ವಾಂಸರೆಲ್ಲರಿಂದಲೂ ಲೇಖನಗಳನ್ನು ಆಹ್ವಾನಿಸಿದ್ದರು. ಕುವೆಂಪುರವರ ಮನೆಗೆ ಹೋಗಿ ಲೇಖನವನ್ನು ಕೋರಿದಾಗ ಅವರು ಅವರು ವಿಷಯವನ್ನು ಹೇಳುತ್ತಾ ಹೋಗುವುದಾಗಿಯೂ ಎಚ್ಚರಿಕೆಯಿಂದ ಕೇಳಿಸಿಕೊಂಡು ಲೇಖನವನ್ನು ತಯಾರಿಸಿ ತರಬೇಕಾಗಿಯೂ ತಿಳಿಸಿದ್ದರು. ವಿಷಯ “ಯಶೋಧರ ಚರಿತೆಯಲ್ಲಿ ಕಾಮವಿಕಾರದ ನಿರೂಪಣೆ”. ಒಂದೆರಡು ದಿನಗಳ ನಂತರ ಸುಬ್ಬಣ್ಣ ಲೇಖನ ತಯಾರಿಸಿ ಕುವೆಂಪುರವರಿಗೆ ತೋರಿಸಿದಾಗ ಅವರು ಓದಿನೋಡಿ – ಇಷ್ಟು ಚೆನ್ನಾಗಿ ವಿಷಯವನ್ನು ಹೆಣೆಯಲು ನನಗೇ ಸಾಧ್ಯವಾಗುತ್ತಿರಲಿಲ್ಲ ಎಂದು ಮೆಚ್ಚಿಗೆ ವ್ಯಕ್ತಪಡಿಸಿದ್ದರಂತೆ. ಅದನ್ನು ಸುಬ್ಬಣ್ಣ ರೂಮಿನಲ್ಲಿ ನನ್ನ ಮತ್ತು ಅನಂತಮೂರ್ತಿಯ ಎದುರು ಹೇಳಿಕೊಂಡು ಬೀಗಿದ್ದೇ ಬೀಗಿದ್ದು. ಇದೇ ಸಮಯದಲ್ಲಿ ವಯಸ್ಕರ ಶಿಕ್ಷಣ ಸಮಿತಿಯವರು ಸುಬ್ಬಣ್ಣನವರ “ನಾವು ತಿನ್ನುವ ಅಡಿಕೆ” ಎಂಬ ಪುಸ್ತಕವನ್ನು ಪ್ರಕಟಿಸಿದ್ದರು. ಅನಂತಮೂರ್ತಿ ಹಾಗಾದರೆ ಮುಂದೆ “ನೀವು ತಿನ್ನುವ ಅಡಿಕೆ”, “ಅವರು ತಿನ್ನುವ ಅಡಿಕೆ” ಎಂಬ ಪುಸ್ತಕಗಳು ಬರಬಹುದು ಎಂದು ಹಾಸ್ಯಮಾಡುತ್ತಿದ್ದ.

ಸುಬ್ಬಣ್ಣ ಜಾನಪದ ಗೀತೆಯೊಂದನ್ನು ಆಧರಿಸಿ ರಚಿಸಿದ ರೂಪಕ ಆಕಾಶವಾಣಿಯಲ್ಲಿ ಬಿತ್ತರಗೊಂಡಿತ್ತು. ಆ ದಿನ ನಮ್ಮ ಗುಂಪು ಆಕಾಶವಾಣಿಗೇ ಹೋಗಿ ಅಲ್ಲಿನ ಹುಲ್ಲುಹಾಸಿನ ಮೇಲೆ ಕುಳಿತು ಕೇಳಿದ್ದು ನನಗೆ ನೆನಪಿದೆ. ಆ ಕಾಲದಲ್ಲಿ ಮಹಾರಾಜಾ ಕಾಲೇಜಿನಲ್ಲಿ ಸಾಂಸ್ಕೃತಿಕ ಚಟುವಟಿಕೆ ನಡೆಸುತ್ತಿದ್ದ “ಮಿತ್ರಮೇಳ”ದಲ್ಲಿನ ಸಕ್ರಿಯ ಸದಸ್ಯರಲ್ಲಿ ಸುಬ್ಬಣ್ಣ ಒಬ್ಬರು. ನಾಟಕಗಳಲ್ಲಿ ಸುಬ್ಬಣ್ಣನವರದು ಹೆಚ್ಚಾಗಿ ಸ್ತ್ರೀ ಪಾತ್ರ. ಆದರೆ ಪುಟ್ಟಸ್ವಾಮಯ್ಯ ಅವರ ಷಾಜಹಾನ್ ನಾಟಕದಲ್ಲಿ ಸುಬ್ಬಣ್ಣ ಷಾಜಹಾನ್ ಪಾತ್ರದಲ್ಲಿ ಬಹು ಚೆನ್ನಾಗಿ ಅಭಿನಯಿಸಿದ್ದು ನೆನಪಿನಲ್ಲಿದೆ. ಕುವೆಂಪುರವರ ರಕ್ತಾಕ್ಷಿ ನಾಟಕದಲ್ಲಿ ಸುಬ್ಬಣ್ಣ ರುದ್ರಾಂಬೆ. ಅನಂತಮೂರ್ತಿ ಬಸವಯ್ಯ. ನಾನೂ ಒಂದು ಸಣ್ಣ ಪಾತ್ರ ವಹಿಸಿದ್ದೆ. ಈ ನಾಟಕವನ್ನು ಕಾಲೇಜಿನಲ್ಲಿ ನೋಡಿದ ಮಂಡ್ಯದ ಶಂಕರಲಿಂಗೇಗೌಡರು ತಮ್ಮಲ್ಲಿಗೂ ಬಂದು ಆಡುವಂತೆ ಆಹ್ವಾನಿಸಿದ್ದರು. ಸ್ತ್ರೀ ಪಾತ್ರವನ್ನೇ ಸುಬ್ಬಣ್ಣ ಹೆಚ್ಚುಕಾಲ ಅಭಿನಯಿಸಬಾರದೆಂದೂ, ಇದರಿಂದ ಅವರ ನಡವಳಿಕೆಗಳೇ ವ್ಯತ್ಯಾಸ ವಾಗಬಹುದೆಂದೂ ಅನಂತಮೂರ್ತಿ ತಮಾಷೆ ಮಾಡುತ್ತಿದ್ದ.

“ವಿದೂಷಕ” ಸುಬ್ಬಣ್ಣ ಹೊರಡಿಸುತ್ತಿದ್ದ “ಭಿತ್ರಿಕೆ”(ಭಿತ್ತಿ ಪತ್ರಿಕೆ) ಎರಡು

ವಾರಗಳಿಗೊಮ್ಮೆ ಕಾಲೇಜಿನಲ್ಲಿ ಪ್ರಕಟವಾಗುತ್ತಿತ್ತು. ಒಂದು ಬಿದಿರಿನ ತಟ್ಟಿಯಮೇಲೆ ಅಂಟಿಸುತ್ತಿದ್ದ ಕೈ ಬರಹದ ಪತ್ರಿಕೆ ಇದು. ಕವನ, ಹರಟೆ, ವ್ಯಂಗ್ಯಚಿತ್ರ, ವ್ಯಕ್ತಿ ಚಿತ್ರ ಮೊದಲಾದವುಗಳು ಈ ಪತ್ರಿಕೆಯಲ್ಲಿ ಇರುತ್ತಿದ್ದವು. ಅನೇಕವೇಳೆ ಹಳೆಯ ಪತ್ರಿಕೆಗಳಿಂದ ಲೇಖನಗಳನ್ನೂ, ವ್ಯಂಗ್ಯಚಿತ್ರಗಳನ್ನೂ ಆರಿಸಿ ಹಾಕುತ್ತಿದ್ದೆವು. ಲೇಖನದ ಕೊನೆಯಲ್ಲಿ ಚಿಕ್ಕದಾಗಿ "ಅಡಗಿದೆ ಬುಡ –ಎದ್ದಿದೆ ಗಿಡ" ಎಂಬ ಟಿಪ್ಪಣಿ ಹಾಕಲು ಮರೆಯುತ್ತಿರಲಿಲ್ಲ. ಪರೀಕ್ಷೆ ಸಮೀಪಿಸಿದಾಗ ಪಠ್ಯವಿಷಯಗಳಿಗೆ ಸಂಬಂಧಿಸಿದ ಲೇಖನಗಳನ್ನು ಪ್ರಕಟಿಸಿದಾಗ ವಿದ್ಯಾರ್ಥಿಗಳು ಗುಂಪು ಗುಂಪಾಗಿ ನಿಂತು ಲೇಖನ ನಕಲು ಮಾಡಿಕೊಳ್ಳುತ್ತಿರುವುದನ್ನು ಕಂಡು ಖುಷಿ ಪಡುತ್ತಿದ್ದೆವು. ಒಮ್ಮೆ ಯಾರೋ ವಿದ್ಯಾರ್ಥಿಗಳು ಈ ಭಿತ್ತಿಕೆಯಮೇಲೆ ಏನೋ ಅಸಭ್ಯ ಮಾತುಗಳನ್ನು ಗೀಚಿದ್ದರು. ಮುಂದಿನ ಸಂಚಿಕೆಯಲ್ಲಿ ಸುಬ್ಬಣ್ಣ ಈರೀತಿ ಗೀಚಿದ ವ್ಯಕ್ತಿಗಳ "ಶೀಘ್ರಸ್ಖಲನ ಮನೋಭಾವವನ್ನು" ಖಂಡಿಸಿದ್ದರು. ದೂರು ಪ್ರಿನ್ಸಿಪಾಲರವರೆಗೂ ಹೋಯಿತು. ಆದರೆ ಆ ಮಾತು ತಪ್ಪು ಎಂದು ಹೇಳಲು ಅವರಿಗೂ ಸಾಧ್ಯವಾಗಲಿಲ್ಲ.

ಹಾಸ್ಟೆಲ್ಲಿನಲ್ಲಿ ನಮ್ಮದು ಕೆ.ಎಂ.ಪಿ. ಪಾರ್ಟಿ. ಅದು ಸುಬ್ಬಣ್ಣ ಇಟ್ಟ ಹೆಸರು. ಅಂದರೆ ಕಿಸಾನ್ ಮಜದೂರ್ ಪ್ರಜಾ ಪಾರ್ಟಿ ಅಲ್ಲ. ಕೆನೆ ಮೊಸರು ಪಾರ್ಟಿ. ಬೆಳಿಗ್ಗೆ ಹತ್ತು ಗಂಟೆಗೆ ಸರಿಯಾಗಿ ಊಟಕ್ಕೆ ಹೋದವರಿಗೆ ಬಟ್ಟಲಿನಲ್ಲಿ ಕೆನೆ ಮೊಸರು ದೊರೆಯುತ್ತಿತ್ತು. ಹಾಸ್ಟೆಲ್ಲಿನ ಮೆಸ್‌ನಲ್ಲಿದ್ದ ಪರಿಚಾರಕರಾಗಿದ್ದ ರಾಮರಾವ್ ಎಂಬುವವರಿಗೆ ಸುಬ್ಬಣ್ಣನ ಬಗ್ಗೆ ಬಹಳ ಗೌರವ ಮತ್ತು ಆದರ. ಅದರಿಂದಾಗಿ ನಮಗೆ ಕೆನೆಮೊಸರು ಎಂದೂ ತಪ್ಪುತ್ತಿರಲಿಲ್ಲ.

ಪ್ರತೀ ವರ್ಷದ ಕೊನೆಯಲ್ಲಿ ಹಾಸ್ಟೆಲ್ ಡೇ ಸಂಭ್ರಮದಿಂದ ನಡೆಯುತ್ತಿತ್ತು. ಆಗ ಅನೇಕ ಆಟೋಟ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳು ನಡೆಯುತ್ತಿದ್ದವು. "ಲವ್ ಲೆಟರ್ ರೈಟಿಂಗ್" ಕೂಡ ಆ ಸ್ಪರ್ಧೆಯಲ್ಲಿರುತ್ತಿತ್ತು. ಪ್ರತೀವರ್ಷ ಸುಬ್ಬಣ್ಣನವರಿಗೇ ಬಹುಮಾನ. ಆದರೆ ಅನಂತಮೂರ್ತಿ ಮಾತ್ರ "ಹೇಗೋ ನಿನಗೆ ಬಹುಮಾನ ಬಂತು? ಯಾರಾದರೂ ಹುಡುಗಿ ನಿನ್ನ ಪತ್ರ ಓದಿ ಪ್ರೀತಿಸಿದರೆ ಮಾತ್ರ ಅದು ಬಹುಮಾನಕ್ಕೆ ಯೋಗ್ಯ" ಎಂದು ಛೇಡಿಸುತ್ತಿದ್ದ.

ಕಾಲೇಜಿನಲ್ಲಿದ್ದಾಗ ನಮಗೆ ಸಿಗರೇಟು ಸೇದುವ ಹವ್ಯಾಸ ಅಂಟುಕೊಂಡಿತ್ತು. ಪ್ರತಿನಿತ್ಯ ಒಂದು ಪ್ಯಾಕ್ ಬರ್ಕ್ಲಿ, ಒಂದು ಪ್ಯಾಕ್ ಪ್ಲೇಯರ್ಸ್ ತರುತ್ತಿದ್ದೆವು. ನೂರಡಿ ರಸ್ತೆಯ ಮೇಲ್ಭಾಗದಲ್ಲಿ, ರಾಮಸ್ವಾಮಿ ಸರ್ಕಲ್ ಪಕ್ಕ ಒಬ್ಬ ಉಡುಪಿ ಅಂಗಡಿಯವನನ್ನು ಅನಂತಮೂರ್ತಿ ಗುರ್ತು ಮಾಡಿಸಿ ಕೊಟ್ಟಿದ್ದ. ಅವನಿಂದ ನಾವು ಕಡ ತರುತ್ತಿದ್ದೆವು. ಇದರ ಪಕ್ಕದಲ್ಲಿಯೇ ಮತ್ತೊಂದು ಹೋಟೆಲ್ – ಅದೂ ಉಡುಪಿಯವರದ್ದು – ಅಲ್ಲಿ ಅನಂತಮೂರ್ತಿಗೆ ಸಾಲ ಸಿಗ್ತಾ ಇತ್ತು. ಇದರಿಂದಾಗಿ ನಮ್ಮ ಬಳಿ ದುಡ್ಡು ಇಲ್ಲದಿದ್ದಾಗಲೂ ತಿಂಡಿ–ಕಾಫಿಗೆ ಕೊರತೆಯಾಗುತ್ತಿರಲಿಲ್ಲ. ಕೆಲವು ದಿನಗಳ ನಂತರ ನಮಗೆ ಸಿಗರೇಟು ಸೇದೋದು



ತಪ್ಪು, ಬದಲಾಗಿ ಎಲೆ ಅಡಿಕೆ ಹಾಕೋದೇ ಒಳ್ಳೆಯದು ಅಂತ ಅನ್ನಿಸಿತು. ಎಲೆ –ಅಡಿಕೆ–ಹೊಗೆಸೊಪ್ಪು–ಸುಣ್ಣ ಎಲ್ಲ ತಂದು ಒಂದು ಪೆಟ್ಟಿಗೆಯಲ್ಲಿಡಲು ಪ್ರಾರಂಭಿಸಿದೆವು. ಆದ್ರೆ ಯಾವುದೂ ವ್ಯವಸ್ಥಿತವಾಗಿ ಇರುತ್ತಿರಲಿಲ್ಲ. ಒಂದಿದ್ದರೆ ಮತ್ತೊಂದು ಇರುತ್ತಿರಲಿಲ್ಲ. ಸುಣ್ಣ ಇಲ್ಲದೇ ಇದ್ದಾಗ ಅದಕ್ಕೊಂದು ಉಪಾಯವನ್ನು ಕಂಡುಕೊಂಡಿದ್ವಿ. ಆಗೆಲ್ಲ ಗೋಡೆಗಳಿಗೆ ಸುಣ್ಣ ಬಳಿಯುತ್ತಿದ್ದರು. ಸುಣ್ಣ ಬೇಕಾದಾಗ ಗೋಡೆ ಕೀರಿಕೀರಿ ಸುಣ್ಣ ಪಡೆಯಬಹುದಾಗಿತ್ತು. ರತ್ನ, ವಿಶ್ವನಾಥ ಮಿರ್ಲೆ ಎಲೆ ಅಡಿಕೆಗೆ ನಮ್ಮೊಡನೆ ಸೇರುತ್ತಿದ್ದರು. ನಮ್ಮ ರೂಮು ಹಾಸ್ಟೆಲ್ಲಿನ ಒಂದನೇ ಬ್ಲಾಕಿನ ಮಹಡಿಯ ಮೇಲಿತ್ತು.  ಒಂದು ದಿನ ಎಲೆ ಅಡಿಕೆ ಹಾಕಿಕೊಂಡು ಕೂತಿದ್ದ ಸುಬ್ಬಣ್ಣ ಬಾಯಲ್ಲಿ ತುಂಬಿದ್ದ ತಂಬುಲವನ್ನು ಅವಸರವಾಗಿ ಹೋಗಿ ವರಾಂಡದಿಂದ ಕೆಳಗೆ ಉಗುಳಿದರು. ದುರಾದೃಷ್ಟದಿಂದ ಯಾರೋ ಕೆಳಗೆ ನಿಂತವರ ಮೇಲೆ ಅದು ಬಿತ್ತು. ಸುಬ್ಬಣ್ಣ ಹೆದರಿಕೊಂಡು ಇನ್ನು ಏನೋ ಒಂದು ಕಾದಿದೆ, ಜಗಳಕ್ಕೆ ಆತ ಬರ್ತಾನೆ ಅಂತ ರೂಮಿನೊಳಗೆ ಬಂದು  ಮುಸುಕು ಹಾಕ್ಕೊಂಡು ಮಲಗಿದರು. ಸ್ವಲ್ಪ ಹೊತ್ತಿನ ನಂತರ "ನಾನೇ ಹೋಗಿ ಅವನ ಕ್ಷಮೆ ಕೋರ್ತೀನಿ" ಅಂತ ಕೆಳಗೆ ಓಡಿದ್ರು. ಅಲ್ಲಿ ನೋಡಿದರೆ ಅಸಾಮಿನೇ ನಾಪತ್ತೆ. ಅವನು ಹಾಸ್ಟಲ್ಲಿನವನಲ್ಲ. ಯಾರೋ ಅಪರಿಚಿತ. ಹೀಗಾಗಿ ಒಂದು ಗಂಡಾಂತರದಿಂದ ನಾವು ಪಾರಾದೆವು.

ಸುಬ್ಬಣ್ಣ ತುಂಬಾ ಉದಾರಿ. ಯಾರಾದರೂ ಸಹಾಯ ಅಪೇಕ್ಷಿಸಿದರೆ ಇಲ್ಲ ಅನ್ನುತ್ತಿರಲಿಲ್ಲ. ಯಾವುದಾದರೂ ನಾಟಕ ಅಥವ ಸಿನಿಮಾಕ್ಕೆ ಹೋಗಬೇಕಾದರೆ ಅವರ ಜೊತೆಯಲ್ಲಿ ಒಂದು ಚಿಕ್ಕ ಗುಂಪು ಇರುತ್ತಿತ್ತು. ಹೀಗಾಗಿ ಎಷ್ಟೋ ವೇಳೆ ಅವರಿಗೆ ದುಡ್ಡೇ ಇಲ್ಲದ ಸಂದರ್ಭ ಬರುತ್ತಿತ್ತು. ಒಂದು ಸಾರಿ ಹಣದ ಅವಶ್ಯಕತೆ ಬಂದಾಗ ತಮ್ಮ ವಾಚನ್ನ ನೂರಡಿ ರಸ್ತೆಯಲ್ಲಿದ್ದ ಗಿರವಿ ಅಂಗಡಿ ಗಿರಿಯಪ್ಪನಲ್ಲಿಟ್ಟು ಹಣ ಪಡೆದಿದ್ದರು. ಬಹುಷ: ಅವರು ಹಣವನ್ನು ಹಿಂತಿರುಗಿಸಿ ವಾಚನ್ನು ಪಡೆದದ್ದು ಕಾಲೇಜು ಮುಗಿಸಿ ಮನೆಗೆ ಹೊರಟಾಗಲೇ.

ಒಮ್ಮೆ ಟೌನ್ ಹಾಲ್‌ನಲ್ಲಿ ನೋಡಿದ "ಹೇಮರೆಡ್ಡಿ ಮಲ್ಲಮ್ಮ" ನಾಟಕ ಜ್ಞಾಪಕವಾಗುತ್ತದೆ. ನಾಟಕವನ್ನು ಯತಾರ್ಥ ತೋರಿಸಬೇಕೆಂಬ ಹಂಬಲದಿಂದ ಎತ್ತಿನ ಗಾಡಿಯನ್ನೇ ರಂಗದಮೇಲೆ ತಂದಿದ್ದರು. ಹೇಮರೆಡ್ಡಿ ಮಲ್ಲಮ್ಮ ಅತ್ತೆಯ ಮನೆಗೆ ಹೋಗುವ ದೃಶ್ಯ. ತೆರೆ ಮೇಲಕ್ಕೆ ಸರಿದಂತೆ ಬೆಳಕಿಗೆ ಹೆದರಿ ಎತ್ತುಗಳು ಸ್ಟೇಜಿನ ಮೇಲಿಂದ ಪ್ರೇಕ್ಷಕರ ಮದ್ಯಕ್ಕೇ ಹಾರಿದವು.  ಪ್ರೇಕ್ಷಕರೆಲ್ಲಾ ಚೆಲ್ಲಾಪಿಲ್ಲಿ. ಮುಂದಿನ ಸಾಲಿನಲ್ಲಿ ಕುಳಿತ ನಾವೆಲ್ಲರೂ ಬದುಕಿದೆಯಾ ಬಡಜೀವವೇ ಎಂದು ಹಿಂತಿರುಗಿದ್ದು ಜ್ಞಾಪಕದಲ್ಲಿದೆ. ಹೀಗೆ ಇನ್ನೂ ಅನೇಕ ನಾಟಕಗಳನ್ನು ನಾವು ನೋಡಿದ ನೆನಪಿದೆ.

ಸುಬ್ಬಣ್ಣಂದು ಬಹಳ ನಾಚಿಕೆ ಸ್ವಬಾವ. ಒಮ್ಮೆ ಅಂಚೆಯಲ್ಲಿ ಊರಿನಿಂದ ಅವರಿಗೊಂದು ಪ್ಯಾಕೆಟ್ ಬಂದಿತ್ತು. ಅದು ಹಬ್ಬದಲ್ಲಿ ಮಾಡಿದ ಏನೋ ತಿಂಡಿಯನ್ನು ಕಳುಹಿಸಿದ್ದಾರೆ ಎಂದು ನನಗೆ ಗುಮಾನಿ. ಆದರೆ ಸುಬ್ಬಣ್ಣ ಆ ಪ್ಯಾಕೆಟ್ಟನ್ನು ಕಬೋರ್ಡ್‌ನಲ್ಲಿ ಇಟ್ಟವರು ನಾಲ್ಕಾರು ದಿನ ತೆಗೆಯಲೇ ಇಲ್ಲ. ನನಗೆ ಯಾವಾಗ ಇದನ್ನು ಬಿಚ್ಚುತ್ತಾರೆ ಎಂಬ ಕುತೂಹಲ. ಅನಂತಮೂರ್ತಿಗೆ ಗೊತ್ತಾಗಿದ್ದರೆ ಅವ ಯಾವ ಮುಲಾಜೂ ಇಲ್ಲದೇನೆ ಅದನ್ನು ತೆಗೀತಿದ್ದ. ಕೊನೆಗೆ ನನಗೆ ಆ ಕುತೂಹಲ ತಡೆಯಲಾಗದೇ "ಸುಬ್ಬಣ್ಣ, ಅಂದು ಬಂದ ಆ ಪ್ಯಾಕೆಟ್ ಬಿಚ್ಚಿ ಮಾರಾಯ್ರೇ" ಎಂದು ಒತ್ತಾಯಿಸಿದಾಗ ಅದನ್ನು ತೆಗೆದು ನೋಡಿದ್ರೆ ಅದರೊಳಗಿದ್ದ ಹಬ್ಬದ ಹೋಳಿಗೆ ಹಾಳಾಗಿಹೋಗಿತ್ತು. ಸುಬ್ಬಣ್ಣ "ಸಾರಿ" ಅಂತ ಹೇಳಿ ಆ ಪ್ರಸಂಗವನ್ನು ಮುಕ್ತಾಯಗೊಳಿಸಿದ್ರು.

ನಾವು ಕೆಲವುವ್ಯಕ್ತಿಗಳಿಗೆ ಅಡ್ಡ ಹೆಸರನ್ನು ಇಟ್ಟು ಕರೆಯುತ್ತಿದ್ದೆವು. ರಸ್ತೆಯಲ್ಲಿ ಪ್ರತಿನಿತ್ಯ ನಿಂತು-ನಿಂತು ವಾಕ್ ಮಾಡುತ್ತಿದ್ದ ಹಿರಿಯರೊಬ್ಬರಿಗೆ "ಲಾರ್ಡ್ ನಿಂತ್ ನಿಂತ್ ಗೋ" ಎಂತಲೂ, ಮಾರ್ಕ್ಸ್‌ವಾದಿ ಗೋಪಾಲಕೃಷ್ಣನಿಗೆ "ಕೃಷ್ಣೋ ವಿಚ್ ಗೋಪ್ಸ್ಕಿ" ಎಂತಲೂ, ಕೀರಲು ಧ್ವನಿಯ ಎ.ಕೆ. ರಾಮಾನುಜನ್‌ಗೆ "ಕೀಚಕ" ಎಂತಲೂ, ಇಂಗ್ಲೀಷ್ ಪ್ರಾಧ್ಯಾಪಕ ಕೃಷ್ಣರಾವ್ ಅವರಿಗೆ "ಬರ್ಕ್ಲಿ" ಎಂತಲೂ ಗುಟ್ಟಾಗಿ ಕರೆಯುತ್ತಿದ್ದೆವು. ರತ್ನ, ಸುಬ್ಬಣ್ಣ ಇಂತಹ ವಿಷಯಗಳಲ್ಲಿ ನಿಷ್ಣಾತರು.

ರಾತ್ರಿ ಊಟವಾದನಂತರ ನಮ್ಮ ಗುಂಪು ಓರಿಯಂಟಲ್ ರೀಸರ್ಚ್ ಇನ್ಸಿಟ್ಯೂಟ್ ಹತ್ತಿರ ಹೋಗಿ ಕೆಲವು ಹೊತ್ತು ಹರಟೆ ಹೊಡೆಯುತ್ತಾ ಕುಳಿತುಕೊಳ್ಳುತ್ತಿತ್ತು. ಕೆಲವುವೇಳೆ ಅನಂತಮೂರ್ತಿ ನಮಗೆ ಪಠ್ಯವಾಗಿದ್ದ ಶೇಕ್ಸ್‌ಪಿಯರ್, ಬರ್ನಾಡ್ ಷಾ ಅವರ ನಾಟಕಗಳನ್ನು ಓದಿ ವಿವರಿಸ್ತಿದ್ದ. ಅದರ ಬಗ್ಗೆ ಚರ್ಚೆ ನಡೆಯುತ್ತಿತ್ತು. ನಾವಲ್ಲಿಗೆ ಹೋದಾಗ ನಡೆದ ಕೆಲವು ಘಟನೆಗಳನ್ನು "ಸುರಗಿ"ಯಲ್ಲಿ ಅನಂತಮೂರ್ತಿ ಬರೆದಿದ್ದಾನೆ.

ಸುಬ್ಬಣ್ಣನಿಗೆ ಬಿಯರ್-ವಿಸ್ಕಿ ಇಂಥವುಗಳ ಪರಿಚಯವೇ ಇರಲಿಲ್ಲ. ಒಮ್ಮೆ ನಾನು ನನ್ನ ದೂರದ ಬಂಧು ಮೆಡಿಕಲ್ ಓದುತ್ತಿದ್ದ ರವೀಂದ್ರನಾಥ ಕೊಡ್ಗಿ ಅವರ ರೂಮಿಗೆ ಹೋದಾಗ ಅವರು ಕೊಟ್ಟ ಒಂದು ಗ್ಲಾಸ್ ಬಿಯರ್ ಅನ್ನು ಕುಡಿದು ರೂಮಿಗೆ ಬಂದೆ. ಸ್ವಲ್ಪ ಹೊತ್ತಿನ ನಂತರ ರೂಮಿಗೆ ಬಂದ ಅನಂತಮೂರ್ತಿ ತಕ್ಷಣ ವಾಸನೆಯನ್ನು ಗ್ರಹಿಸಿ "ಏನೋ ಯಾರು ಬೀಯರ್ ಕುಡಿದಿದ್ದೀರಿ" ಅಂತ ಪರೀಕ್ಷಿಸತೊಡಗಿದ. ಪಾಪ,ಸುಬ್ಬಣ್ಣನಿಗೆ ಬಿಯರ್ ವಾಸನೆ ಕೂಡ ಗೊತ್ತಿರಲಿಲ್ಲ. ಅವರು "ಏ ನೀನೇ ಕುಡುಕೊಂಡು ಬಂದಿರಬೇಕು, ಇನ್ನ್ಯಾರು ಕುಡೀತಾರೆ" ಅಂತ ವಾದಿಸಿ ನನ್ನನ್ನು ಬಚಾವ್ ಮಾಡಿದ್ರು. ಆದ್ರೆ ವಾಸನೆಯ ಪರಿಚಯ ಇದ್ದ ಅನಂತಮೂರ್ತಿಗೆ ಇದರಿಂದ ಬೇಜಾರಾಯಿತು. ಕೊನೆಗೆ ನಾನೇ ಗುಟ್ಟಾಗಿ ಅನಂತಮೂರ್ತಿ ಕ್ಷಮೆ ಕೋರಿದೆ.



ಸುಬ್ಬಣ್ಣ ಒಂದುರೀತಿಯ ಸ್ಥಿತಪ್ರಜ್ಞ. ಪರೀಕ್ಷೆಯ ದಿನ ಕೂಡ ಊಟಮಾಡಿಬಂದು "ಒಂದು ಘಂಟೆ ಬಿಟ್ಟು ಎಬ್ಬಿಸು" ಅಂತ ಆರಾಮಾಗಿ ಮಲಗಿ ನಿದ್ರೆ ಮಾಡಿಬಿಡ್ತಿದ್ದರು. ನಂತ್ರ ಎದ್ದು ಯಾವ ಆತಂಕ, ಗಡಿಬಿಡಿ ಇಲ್ದೆ ಪರೀಕ್ಷೆಗೆ ಹೋಗ್ತಿದ್ದರು. ತಿಂಗಳ ಕೊನೆಯಲ್ಲಿ ಖರ್ಚಿಗೆ ಹಣ ಇಲ್ದಿದ್ದಾಗಲೂ ಅಷ್ಟೇ "ಅಯ್ಯೋ, ಎಲ್ಲಾದ್ರೂ ಸಿಗತ್ತೆ" ಅಂತ ನಿಶ್ಚಿಂತೆಯಿಂದ ಇರ್ತಿದ್ದರು. ಸುಬ್ಬಣ್ಣನ ಓದಿನ ವಿಧಾನವೇ ವಿಶಿಷ್ಟ. ಪುಸ್ತಕ ಹಿಡಿದು ಕೂತರೆ ಅದು ಮುಗಿಸೋವರೆಗೆ ಏಳ್ತಾ ಇರ್ಲಿಲ್ಲ. ನಾವೆಲ್ಲ ವಾಕ್ಯಗಳನ್ನು ಓದಿದರೆ ಅವರು ಪುಟಪುಟವನ್ನೇ ಓದುತ್ತಿದ್ದರು. ನಂತರ ಓದಿದ ವಿಷಯವನ್ನು ಬೇರೆಯವರಿಗೆ ತಿಳಿಸಲೇಬೇಕು. ಹೀಗೆ ಸುಬ್ಬಣ್ಣನ ಜೊತೆಯಲ್ಲಿ ಇರುವುದೇ ಒಂದು ಕಲಿಕೆ ಆಗಿರುತ್ತಿತ್ತು.

ಅನಂತಮೂರ್ತಿಯ ಬಗ್ಗೆ ಸುಬ್ಬಣ್ಣನಿಗೆ ಆಗಲೇ ಬಹಳ ಒಳ್ಳೆಯ ಅಭಿಪ್ರಾಯವಿತ್ತು. ರಾಜಕೀಯಕ್ಕೆ ಹೋಗದಿದ್ದರೆ ಈತ ಬಹಳ ದೊಡ್ಡ ಬರಹಗಾರನಾಗ್ತಾನೆ ಅಂತ ಹೇಳಿದ್ದು ನನಗೆ ಜ್ಞಾಪಕವಿದೆ. ಸುಬ್ಬಣ್ಣನ ನಿಲುವಿನ ಬಗ್ಗೆ ಅನಂತಮೂರ್ತಿಗೂ ತುಂಬಾ ಗೌರವವಿತ್ತು. ಮಾರ್ಕ್ಸ್‌ವಾದಿ ಗೋಪಾಲಕೃಷ್ಣನ ಜೊತೆ ಸಮಾಜವಾದಿಗಳಾದ ಸುಬ್ಬಣ್ಣ ಮತ್ತು ಅನಂತಮೂರ್ತಿಯ ಚರ್ಚೆ ಆಗಾಗ್ಗೆ ನಡೆಯುತ್ತಿತ್ತು. ನಮ್ಮ ರೂಮಿಗೆ ಆಗಾಗ್ಗೆ ನಿರಂಜನ ಬರುತ್ತಿದ್ದರು. ಅದು ಅವರ ಮತ್ತು ಡಾ. ಅನುಪಮ ಅವರ ಪ್ರೇಮ ಸಂಬಂಧ ನಡೆಯುತ್ತಿದ್ದ ಕಾಲ. ಗೋಪಾಲಕೃಷ್ಣ ಇದಕ್ಕೆ ಸಹಕರಿಸುತ್ತಿದ್ದ. ನಮ್ಮ ರೂಮಿಗೆ ಬರುತ್ತಿದ್ದ ಅನುಪಮ ಅವರನ್ನು ದೂರದ ಅವರ ಮನೆಗೆ ಕೆಲವುಸಾರಿ ಬಿಟ್ಟುಬರುತ್ತಿದ್ದೆವು. ಕಲಾವಿದ ಆರ್.ಎಸ್. ನಾಯ್ಡು ಅವರಿಗೆ ಸುಬ್ಬಣ್ಣನವರ ಬಗ್ಗೆ ವಿಶೇಷ ಆದರ. ಮೈಸೂರಿಗೆ ಬಂದಾಗ ಇವರನ್ನು ನೋಡದೇ ಹೋಗುತ್ತಿರಲಿಲ್ಲ.

ಹೀಗೆ ಸುಬ್ಬಣ್ಣನ ಮತ್ತು ನನ್ನ ಒಡನಾಟದ ನೆನಪುಗಳು ಸುರಳಿ ಸುರಳಿಯಾಗಿ ಬರುತ್ತವೆ. ಈ ಎಲ್ಲಾ ಜ್ಞಾಪಕಗಳ ಹೊರತಾಗಿ ನನ್ನ ಮನಸ್ಸಿನಲ್ಲಿ ಅಚ್ಚೊತ್ತಿ ಇನ್ನೂ ಉಳಿದಿರುವುದು ಅವರ ನಿರ್ಮಲ ಪ್ರೇಮ, ವಿಶ್ವಾಸ, ಕಾಳಜಿ. ಕಾಲೇಜ್ ದಿನಗಳ ನಂತರ ಅವರ ಕೊನೆಯ ದಿನಗಳವರೆಗೂ ನಾನು ಅದನ್ನು ಪಡೆದಿದ್ದೇನೆ. ನನ್ನ ಅನೇಕ ಸಂಕಷ್ಟದ ಕ್ಷಣಗಳಲ್ಲಿ ಅವರ ನೆರವು ನನಗೆ ದೊರೆತಿದೆ. ನನ್ನ ಒಬ್ಬ ಪ್ರೀತಿಯ ಸೋದರನಂತೆ ಇದ್ದವರು. ತಮ್ಮ ವಿಶಿಷ್ಟ ಕ್ರಿಯಾಶೀಲತೆಯ ಮೂಲಕ ಮಲೆನಾಡು ಪ್ರದೇಶದ ಸಂಸ್ಕೃತಿಯನ್ನೇ ಬದಲಿಸಿದ್ದು ಅವರ ಮಹತ್ವದ ಸಾಧನೆ. ಅಂಥವರ ಒಡನಾಡಿಯಾಗಿದ್ದುದು ನನಗೆ ಹೆಮ್ಮೆ.

"ನೆನೆಯದಿರಣ್ಣ ಹೆಗ್ಗೋಡಿನೋಳಿಂ ಪೆರರಾನುಮನೊಂದೆ ಚಿತ್ತದಿಂ ನೆನೆವೊಡೆ ಸುಬ್ಬಣ್ಣನಂ ನೆನೆಯ" ಎಂಬ ಹಾರೈಕೆಯೊಡನೆ ನನ್ನ ಮಾತನ್ನು ಮುಗಿಸುತ್ತೇನೆ.

# ಸಹಕಾರ ಚಳವಳಿ
# ಹಿಂದೆ-ಇಂದು-ಮುಂದು

ಎಂ.ಎಸ್. ಶ್ರೀರಾಮ್

*ದಿನಾಂಕ ೧೬ ಜುಲೈ ೨೦೧೩ರಂದು, ದಿ| ಕೆ.ವಿ. ಸುಬ್ಬಣ್ಣನವರು ನಿಧನರಾದ ದಿನ, ಅವರ ಸ್ಮರಣಾರ್ಥ ನೀನಾಸಮ್ ಸಂಸ್ಥೆಯು ಒಂದು ವಿಶೇಷೋಪನ್ಯಾಸವನ್ನೂ ಮತ್ತು ನಾಟಕಪ್ರದರ್ಶನವನ್ನೂ ಏರ್ಪಡಿಸಿತ್ತು. ಆ ಉಪನ್ಯಾಸ ಕಾರ್ಯಕ್ರಮವನ್ನು ಎಂ.ಎಸ್. ಶ್ರೀರಾಮ್ ಅವರು ನಡೆಸಿಕೊಟ್ಟರು. ಅಂದು ಅವರು ಮಾಡಿದ ಉಪನ್ಯಾಸದ ಲಿಖಿತ ಮತ್ತು ಪರಿಷ್ಕೃತ ಆವೃತ್ತಿಯನ್ನೀಗ ಇಲ್ಲಿ ಪ್ರಕಟಿಸಲಾಗುತ್ತಿದೆ.*

ಸುಬ್ಬಣ್ಣನವರ ನೆನಪಿಗೆ ಏರ್ಪಡಿಸಿರುವ ಈ ಇಂದಿನ ಸಭೆಗೆ ನನ್ನನ್ನು ಬರಮಾಡಿ ಕೊಂಡಿದ್ದಕ್ಕೆ ನೀನಾಸಮ್ ಸಂಸ್ಥೆಗೆ ನಾನು ಆಭಾರಿಯಾಗಿದ್ದೇನೆ. ಸುಬ್ಬಣ್ಣನವರನ್ನು ನಾನು ಕಂಡದ್ದಿಲ್ಲ. ಆದರೆ ಅವರ ಬರವಣಿಗೆಯನ್ನು ಓದಿದ್ದೇನೆ. ಅವರ ವಿಚಾರಗಳಲ್ಲಿನ ಅಂತಃಕರಣ, ಹೃದಯವೈಶಾಲ್ಯತೆ, ವಿನಮ್ರತೆ ಮತ್ತು ಜೊತೆಜೊತೆಗೇ ಇರುವ ನಿಷ್ಠುರತೆಯಿಂದ ಪ್ರಭಾವಿತನಾಗಿದ್ದೇನೆ... ಯಾವುದೇ ವಿಚಾರದ ಬಗ್ಗೆ ಅವರು ಆಲೋಚಿಸಿ ತೆಗೆದುಕೊಳ್ಳುತ್ತಿದ್ದ ನಿಲುವು ಮತ್ತು ನಿಸ್ಸಂಕೋಚವಾಗಿ ವ್ಯಕ್ತಪಡಿಸುತ್ತಿದ್ದ ಅಭಿಪ್ರಾಯವನ್ನು ಕಂಡಾಗ ನಾವುಗಳು ಎಷ್ಟೋ ವಿಚಾರಗಳ ಬಗೆಗಿನ ಮೌನದ ಸಂಚಿನಲ್ಲಿ ಭಾಗಿಗಳಾಗಿರುತ್ತೇವೆ ಎನ್ನುವ ವಿಚಾರ ನಮ್ಮನ್ನು ತಟ್ಟದಿರುವುದಿಲ್ಲ. ಈ ನಿಟ್ಟಿನಲ್ಲಿ ತಮಗೆ ಲಭ್ಯವಿದ್ದ ಎಲ್ಲ ಮಾಧ್ಯಮಗಳನ್ನೂ ಸುಬ್ಬಣ್ಣನವರು ಬಳಸಿ ಕೊಂಡಿದ್ದರು. ಮುಖ್ಯವಾಗಿ ಅವರ ವಿಚಾರಗಳಿಗೆ ಇಂದು ಉಪಯೋಗ ತಪ್ಪಿದಂತಿರುವ ಕರಪತ್ರಗಳ ಮಾಧ್ಯಮದ ಮಹತ್ವವನ್ನು ನಾವು ಗಮನಿಸಬೇಕಾಗಿದೆ.

ಸಹಕಾರ ಚಳವಳಿಯ ಬಗ್ಗೆ ಮಾತನಾಡಲು ಕೇಳಿರುವುದು ನನಗೆ ನಿಜಕ್ಕೂ ಸಂತೋಷವನ್ನುಂಟುಮಾಡಿದೆ. ಸಹಕಾರ ಸಿದ್ಧಾಂತ ನನ್ನ ಹೃದಯಕ್ಕೆ ಹತ್ತಿರವಾದದ್ದು. ಒಂದು ರೀತಿಯಲ್ಲಿ ನನ್ನ ಮನೋಧರ್ಮಕ್ಕೆ ಒಗ್ಗಿದ್ದು. ಅದು ಎಡಪಂಥೀಯ



ವಿಚಾರಧಾರೆಯೂ ಅಲ್ಲ, ಸಮಾಜವಾದದಿಂದ ಮೂಡಿಬಂದದ್ದೂ ಅಲ್ಲ. ವ್ಯಾಪಾರದಲ್ಲಿ ಅದರ ಮೂಲವಿದ್ದರೂ ವ್ಯಾಪಾರೀ ಸೂತ್ರಗಳನ್ನು ಮಾರುಕಟ್ಟೆಯನ್ನೂ ಪ್ರಶ್ನಿಸುತ್ತ ಬಂದ ಒಂದು ವ್ಯಾಪಾರ ಪದ್ಧತಿ. ನಂಬಿಕೆಗಳ ಐಡಿಯಾಲಜಿಗೂ ವ್ಯಾಪಾರದ ಲೆಕ್ಕಕ್ಕೂ ಬೆಸೆದಿರುವ ಈ ಪದ್ಧತಿ ಸ್ವಾರ್ಥದ ಮೇಲೂ ಆಧಾರಿತವಾಗದೆ, ತ್ಯಾಗದೆಡೆಗೂ ನಡೆಯದೆ ಒಂದು ದಿವ್ಯ ಮಧ್ಯದಾರಿಯಲ್ಲಿ ನಿಂತುಬಿಟ್ಟಿದೆ. ಇದೇ ಸಹಕಾರದ ಆಕರ್ಷಣೆಯೂ ಹೌದು. ಇದೇ ಸಹಕಾರದ ಪರಿಮಿತಿಯೂ ಹೌದು.

ನಾನು ನನ್ನ ಮಾತನ್ನು ಮೂರು ಭಾಗಗಳಲ್ಲಿ ಮಂಡಿಸಲು ಇಷ್ಟಪಡುತ್ತೇನೆ. ಮೊದಲಭಾಗದಲ್ಲಿ ನಾನು ಸಹಕಾರ ಮೂಡಿಬಂದ ರೀತಿ, ಮಾರುಕಟ್ಟೆಯ ಸೂತ್ರಗಳನ್ನು ಪ್ರಶ್ನಿಸಿದ ರೀತಿ, ಸಹಕಾರವು ಸಫಲವಾದ ರಂಗಗಳ/ವಿಫಲವಾದ ಕಾರಣಗಳ ಚಿತ್ರವನ್ನು ನಿಮ್ಮ ಮುಂದೆ ಸ್ಥೂಲವಾಗಿ ಮಂಡಿಸುತ್ತೇನೆ. ಎರಡನೆಯ ಭಾಗದಲ್ಲಿ ಭಾರತದಲ್ಲಿ ಸಹಕಾರ ನಡೆದುಬಂದ ರೀತಿಯ ಅವಲೋಕನವನ್ನು ಮಾಡಲು ಯತ್ನಿಸುತ್ತೇನೆ. ಮೂರನೆಯ ಭಾಗದಲ್ಲಿ ಸಹಕಾರದ ಇಂದಿನ ತಲ್ಲಣಗಳನ್ನೂ, ಭವಿಷ್ಯದ ಸವಾಲುಗಳನ್ನೂ ನಿಮ್ಮ ಮುಂದೆ ಮಂಡಿಸುತ್ತೇನೆ.

## ಭಾಗ ೧

ಸಹಕಾರ ಚಳವಳಿ ಪ್ರಾರಂಭವಾದದ್ದು ಇಂಗ್ಲೆಂಡಿನಲ್ಲಿ ೧೮೪೪ರಲ್ಲಿ. ರಾಶ್‌ಡೇಲ್ ಪಯನಿಯರ್ಸ್ ಮೂಲಕ ನಮಗೆ ಸಹಕಾರದ ಮೂಲಸೂತ್ರಗಳು ದೊರೆತವು. ಆ ಸೂತ್ರಗಳು ಮೂರು ಬಾರಿ ಪರಾಮರ್ಶೆಗೊಂಡಿವೆ. ರಾಶ್‌ಡೇಲ್ ಪಯನಿಯರ್ಸ್ ಸಹಕಾರಿ ಪದ್ಧತಿಯನ್ನು ವಿವರಿಸಲು ಒಂಬತ್ತು ಸೂತ್ರಗಳನ್ನು ನೀಡಿ ಆ ಒಂಬತ್ತು ಸೂತ್ರಗಳ ಬಗ್ಗೆ ವಿವರಣೆ ನೀಡಿದ್ದರು. ಇಂದು, ೧೯೯೫ರಲ್ಲಿ ಪರಾಮರ್ಶೆಗೊಂಡ ನಂತರ ಅವುಗಳಲ್ಲಿ ಏಳು ಸೂತ್ರಗಳು ಸಹಕಾರ ಸಂಸ್ಥೆಗಳಿಗೆ ವರ್ತಿಸುತ್ತವೆ. ನಾನು ಆ ಸೂತ್ರಗಳನ್ನು ವಿವರವಾಗಿ ಚರ್ಚಿಸುವುದಿಲ್ಲವಾದರೂ ಬಂಡವಾಳವೇ ಮೂಲವಾಗಿದ್ದ ವ್ಯಾಪಾರಪದ್ಧತಿಗೂ ಸಹಕಾರಕ್ಕೂ ಇರುವ ವ್ಯತ್ಯಾಸಗಳೊಂದಿಗೆ ಕೆಲವು ಸೂತ್ರಗಳನ್ನು ಚರ್ಚಿಸುತ್ತೇನೆ.

ಸಹಕಾರ ಪ್ರಾರಂಭವಾದದ್ದೇ ಬಂಡವಾಳದ ಮೂಲಭೂತ ಪಾತ್ರವನ್ನು ಪ್ರಶ್ನಿಸುವುದರಲ್ಲಿ. ಇದಕ್ಕೆ ಇದ್ದ ಚಾರಿತ್ರಿಕ ಸಂದರ್ಭವನ್ನೂ ನಾವು ಮರೆಯಬಾರದು. ಒಂದು ವ್ಯಾಪಾರ ನಡೆಯಬೇಕಿದ್ದರೆ, ಅದಕ್ಕೆ ಬಂಡವಾಳ, ಜಾಗ, ಜನ, ಸಂಸ್ಕರಣೆಯ ಸದುಪಾಯ, ದಾಸ್ತಾನು ಸೌಕರ್ಯ ಹಾಗೆ ಅನೇಕ ಸಂಪನ್ಮೂಲಗಳು ಬೇಕಿರುತ್ತವೆ. ಸಾಮಾನ್ಯವಾಗಿ ವ್ಯಾಪಾರ ಉಪಯೋಗಿಸುವ ಎಲ್ಲ ಸಂಪನ್ಮೂಲಗಳಿಗೂ ಒಂದು

ಪೂರ್ವನಿರ್ಧಾರಿತ ಬೆಲೆಯಿರುತ್ತದೆ. ಆ ಬೆಲೆಯನ್ನು ವ್ಯಾಪಾರಿಗಳ ಚರ್ಚೆ/ ಒಪ್ಪಂದಗಳ ಮೂಲಕ ಮಾಡಿಕೊಳ್ಳುತ್ತಾರೆ. ಈ ವ್ಯಾಪಾರದಲ್ಲಿ ಬಂದ ಹಣದಿಂದ ಈ ಎಲ್ಲ ನಿಗದಿತ ಖರ್ಚುಗಳನ್ನು ತೆಗೆದನಂತರ ಉಳಿಯುವ ಮೊತ್ತವಿಡೀ ಬಂಡವಾಳ ಹೂಡಿದವರಿಗೆ ಸಲ್ಲುತ್ತದೆ. ಅಂದರೆ ಬಂಡವಾಳ ಹೂಡಿದವರಿಗೆ ಯಾವ ಪೂರ್ವನಿರ್ಧಾರಿತ 'ಬೆಲೆ' ಇರುವುದಿಲ್ಲ. ಬಂಡವಾಳ ಹೂಡಿದವರು ಮಿಕ್ಕ ಸಂಪನ್ಮೂಲಗಳ ಬೆಲೆಯನ್ನು ಆದಷ್ಟುಮಟ್ಟಿಗೆ ಇಳಿಸಿ, ಅವುಗಳನ್ನು ಉಪಯೋಗಿಸುವದರಲ್ಲಿ ಹೆಚ್ಚಿನ ದಕ್ಷತೆಯನ್ನು ತೋರಿಸಿದಾಕ್ಷಣಕ್ಕೆ ಅವರಿಗೆ ಸಲ್ಲಬಹುದಾದ ಉಳಿದ ಲಾಭಾಂಶ ಬೆಳೆಯುತ್ತದೆ. ಇದೇ ಬಂಡವಾಳವನ್ನು ಮೂಲವಾಗಿಟ್ಟುಕೊಂಡು ನಡೆವ ವ್ಯಾಪಾರದ ಮನೋಧರ್ಮ.

ಸಹಕಾರಿ ಸಂಸ್ಥೆಗಳು ಮೊದಲಿಗೆ ಅವತರಿಸಿದಾಗ ಈ ಮನೋಧರ್ಮವನ್ನು ಪ್ರಶ್ನಿಸಿ, ಬೇರೆ ರೀತಿಯಿಂದ ಅರ್ಥೈಸಿ ಮುಂದುವರೆಯಲು ಪ್ರಯತ್ನಿಸಿದುವು. ಅದೆಂದರೆ ಬಂಡವಾಳದ ಪ್ರಾಥಮಿಕತೆಯನ್ನು ಪ್ರಶ್ನಿಸಿ ಬಂಡವಾಳಕ್ಕೆ ಒಂದು ಪೂರ್ವನಿರ್ಧಾರಿತ 'ಬೆಲೆ'ಯನ್ನು (ಅಥವಾ ಬಡ್ಡಿಯನ್ನು) ನೀಡಿ ಅದನ್ನು ನಿಯಮಿತ ಖರ್ಚು ನೀಡುವ ಸಂಪನ್ಮೂಲವಾಗಿ ಪರಿವರ್ತಿಸಿದರು. ಇದರಿಂದ ವ್ಯಾಪಾರದ ಬೇರಾವ ಪದ್ಧತಿಯನ್ನೂ ಮುರಿಯದೆಯೇ ಮಾರುಕಟ್ಟೆಯ ಧರ್ಮಾನುಸಾರ ವ್ಯಾಪಾರವನ್ನು ಮಾಡುತ್ತಲೇ ಅದರ ಪರಿಭಾಷೆಯನ್ನು ಬದಲಾಯಿಸುವ ಪ್ರಯತ್ನವಾಯಿತು. ಈವರೆಗೆ ವ್ಯಾಪಾರದಲ್ಲಿ ಯಾವುದೇ ರೀತಿಯ ಹೊರಗಿನ ಪ್ರವೇಶ – ಕೇವಲ ಕಾನೂನು, ನೀತಿ-ನಿಯಮ, ಸರಕಾರವು ನಿಗದಿ ಮಾಡುವ ಬೆಲೆ, ಸರಕಾರದ ಖರೀದಿಯ -- ಮೂಲಕ ಆಗಬಹುದಾಗಿದ್ದ ಕ್ರಮವನ್ನು ಮಾರುಕಟ್ಟೆಯ ಪಾಲುದಾರರಾಗಿ ಮಾಡಿದ ಸಹಕಾರ ಪದ್ಧತಿ ವಿಶಿಷ್ಟವಾದದ್ದೆಂದೇ ಹೇಳಬೇಕು.

ಸಹಕಾರಿ ಪದ್ಧತಿ ಬಂಡವಾಳದ ಪ್ರಾಥಮಿಕತೆಯ ಸ್ಥಾನಪಲ್ಲಟಮಾಡಿ, ಅದನ್ನು ಸೇವೆಯ ಉಪಯೋಗದತ್ತ ತಿರುಚಿತು. ಮೊದಲಿಗೆ ಸಹಕಾರ ಉದ್ಭವವಾದದ್ದು ಗ್ರಾಹಕ ಕ್ಷೇತ್ರದಲ್ಲಿ. ಅಂದರೆ ೧೮೪೪ರ ಸಮಯದಲ್ಲಿ ಔದ್ಯೋಗಿಕ ಕ್ರಾಂತಿಯ ಕಾಲದಲ್ಲಿ ಕಾರ್ಮಿಕರು ಕೊಳ್ಳುತ್ತಿದ್ದ ಪ್ರತಿನಿತ್ಯದ ಬಳಕೆಯ ವಸ್ತುಗಳನ್ನು ಮಾರಾಟಮಾಡುತ್ತಿದ್ದ ವರ್ತಕರ ಶೋಷಣೆಯಿಂದ ಮುಕ್ತಿಪಡೆಯಲು ಬಹುಸಂಖ್ಯೆಯಲ್ಲಿದ್ದ ಗ್ರಾಹಕರು ಒಟ್ಟುಗೂಡಿ, ದಿನನಿತ್ಯದ ಬಳಕೆಯ ವಸ್ತುಗಳ ಖರೀದಿಯಾಧಾರದ ಮೇಲೆ ಲಾಭಾಂಶವನ್ನು ತಮ್ಮಲ್ಲೇ ಹಂಚಿಕೊಳ್ಳಬಹುದಾದ ಹೊಸ ವ್ಯವಸ್ಥೆಯನ್ನು ಏರ್ಪಾಟುಮಾಡಿಕೊಂಡರು. ಇದು ಹಿಂದೆಂದೂ ನಡೆದಿರದ, ಮತ್ತು ಈವರೆಗೂ ನಡೆಯದ ಕ್ರಾಂತಿಕಾರಿ ಆಲೋಚನೆಯಾಗಿತ್ತು. ಸಹಕಾರದ ಇತರ



ಸೂತ್ರಗಳೂ ಕಾರ್ಮಿಕ ಸಂಘಗಳ ನಿಕಟ ಒಡನಾಟದಿಂದ ಬಂದವುಗಳಾಗಿದ್ದುವು. ಅದರಲ್ಲಿ ಮುಖ್ಯವಾದ ಸೂತ್ರ ಪ್ರಜಾಪ್ರಭುತ್ವ ಸೂತ್ರಗಳ ಆಧಾರದ ಮೇಲಿನ ನಿರ್ವಹಣೆ ಎನ್ನುವುದೂ ಒಂದಾಗಿತ್ತು.

ಇದರಿಂದ ಎರಡು ಲಕ್ಷಣಗಳು ಸಹಕಾರೀ ಕ್ಷೇತ್ರದಲ್ಲಿ ಕಂಡುಬರಬಹುದು. ಮೊದಲನೆಯದು ಸಹಕಾರೀ ಸಂಸ್ಥೆಗಳು ಬಂಡವಾಳ ಮುಖ್ಯವಲ್ಲದ ಕ್ಷೇತ್ರದಲ್ಲಿ ಹೆಚ್ಚೆಚ್ಚು ಬರಬಹುದು ಎನ್ನುವುದು. ಮತ್ತೊಂದು, ಪ್ರಜಾಪ್ರಭುತ್ವ ಸೂತ್ರಗಳ ಆಧಾರದ ಮೇಲಿನ ನಿರ್ವಹಣೆಯಿರದವರಿಗೆ ಅದೇ ಸೂತ್ರಗಳ ಮೇಲೆ ನಡೆಯುವ ಸರಕಾರೀ ಸಂಸ್ಥೆಯ ಲಕ್ಷಣಗಳು ಸಹಕಾರಕ್ಕೂ ಬರಬಹುದು ಎನ್ನುವ ವಿಚಾರ.

ಅರ್ಥಶಾಸ್ತ್ರದ ಸೂತ್ರಗಳನ್ನು ಹಿಡಿದು ಹೊರಟರೆ ನಮಗೆ ತಿಳಿದು ಬರುವುದು ಒಂದು ಕುತೂಹಲದ ವಿಷಯ. ಮಾರುಕಟ್ಟೆ ಬೆಳೆದು ಪೈಪೋಟಿ ಹೆಚ್ಚಾದಷ್ಟಕ್ಕೂ ಬಂಡವಾಳದ ಮೇಲೆ ಬರಬಹುದಾದ ಅತಿಯಾದ ಲಾಭದಾಯಕತೆ ಕಡಿಮೆಯಾಗುತ್ತದೆ. ಹೀಗಾದಾಗ ಸಹಕಾರ ಸಂಸ್ಥೆಗಳು ಗ್ರಾಹಕರಿಗೆ ನೀಡುವ ಲಾಭಾಂಶದ ಪ್ರತ್ಯೇಕತೆ ಕಡಿಮೆಯಾಗಿಹೋಗಿ ಸಹಕಾರಿ ಸಂಸ್ಥೆಗಳಿಂದ ವಿಶೇಷ ಲಾಭವೇನೂ ಉಂಟಾಗುವುದಿಲ್ಲ. ಹೀಗಾಗಿ ಕಾಲಾಂತರದಲ್ಲಿ ನಾವು ಗ್ರಾಹಕ ಸಹಕಾರ ಸಂಘಗಳ ಅವನತಿಯನ್ನು ಕಂಡಿದ್ದೇವೆ. ಚಿಲ್ಲರೆ ವ್ಯಾಪಾರದಲ್ಲಿ ದೊಡ್ಡ ಪೈಪೋಟಿ ಬರುತ್ತಿದ್ದಂತೆ ಸಹಕಾರದ ಪ್ರತ್ಯೇಕತೆ ಕಡಿಮೆಯಾಗುತ್ತಾ ಹೋಗಿ ಸ್ಕ್ಯಾಂಡಿನೇವಿಯಾ ದಲ್ಲಿ ವಿಶಿಷ್ಟವಾಗಿ ಬೆಳೆದಿದ್ದ ಸಹಕಾರಿ ಸಂಸ್ಥೆಗಳು ನಿಧಾನವಾಗಿ ಮಾಯವಾದವು. ದೊಡ್ಡ ಮಳಿಗೆಗಳಲ್ಲಿ ಖರೀದಿಗನುಸಾರ ಕೊಡುವ ರಿಯಾಯಿತಿ, ಲಾಯಲ್ಟಿ ಕಾರ್ಡುಗಳು ಇವೆಲ್ಲಾ ಮೂಲಭೂತವಾಗಿ ಸಹಕಾರಿ ಸಂಸ್ಥೆಗಳು ತಾವು ಆರ್ಜಿಸುತ್ತಿದ್ದ ಲಾಭವನ್ನು ತಮ್ಮ ಸದಸ್ಯರೊಂದಿಗೆ ಹಂಚಿಕೊಳ್ಳುತ್ತಿದ್ದ ಸೂತ್ರಕ್ಕೆ ಸಮೀಪವಾಗಿದ್ದುವು. ಅಂದರೆ ಈದಿನ ಚಿಲ್ಲರೆ ವ್ಯಾಪಾರದಲ್ಲಿ ಗ್ರಾಹಕರ ಶೋಷಣೆಗೆ ಕಡಿಮೆಯಾಗಿರುವುದರಿಂದ ಸಹಕಾರದ ವೈಶಿಷ್ಟ್ಯವೂ ಕಡಿಮೆಯಾಗಿದೆ.

ಹಾಗೆಂದು ಚಿಲ್ಲರೆ ವ್ಯಾಪಾರದಲ್ಲಿ ಈದಿನಗಳಲ್ಲಿ ಆಗುತ್ತಿರುವ ಚರ್ಚೆ, ವಿದೇಶೀ ಹೂಡಿಕೆ ಬರಬೇಕೋ ಇಲ್ಲವೋ ಅನ್ನುವ ವಿಚಾರಗಳನ್ನು ನಗಣ್ಯ ಮಾಡುವುದಕ್ಕೆ ಆಗುವುದಿಲ್ಲ. ಆದರೆ ಆ ಎಲ್ಲ ಚರ್ಚೆಯೂ ಗ್ರಾಹಕರ ಹಿತದೃಷ್ಟಿಯಿಂದಾಗುತ್ತಿರುವ ಚರ್ಚೆ ಅಲ್ಲವೆಂಬುದನ್ನು ನಾವು ಗುರುತಿಸಬೇಕು. ಈ ಚರ್ಚೆಯ ಮೂಲಬಿಂದು ಆಗಿರುವುದು ಇಂಥ ದೊಡ್ಡ ವ್ಯಾಪಾರಿಗಳಿಗೆ ಮಾಲನ್ನು ಸರಬರಾಜು ಮಾಡುವ ರೈತರ ಹಿತದೃಷ್ಟಿಯಿಂದ ನಡೆಯುತ್ತಿದೆ ಎನ್ನುವುದು.

ಬಂಡವಾಳವೇ ಪ್ರಮುಖವಲ್ಲದ ಕ್ಷೇತ್ರಗಳಲ್ಲಿ ಸಹಕಾರ ಸಫಲವಾಗುವ ಸಾಧ್ಯತೆ

ಹೆಚ್ಚು ಎನ್ನುವ ವಾದಸರಣಿಯಲ್ಲೂ ಹುರುಳಿದ್ದಂತೆ ತೋರುತ್ತಿಲ್ಲ. ಈದಿನ ಸಫಲವಾಗಿ ನಡೆಯುತ್ತಿರುವ ಹೈನುಗಾರಿಕೆ ಮತ್ತು ಸಹಕಾರಿ ಸಕ್ಕರೆ ಕಾರ್ಖಾನೆಗಳನ್ನು ನೋಡಿದರೆ ಅಲ್ಲಿ ಬಂಡವಾಳವು ಪ್ರಮುಖವಾಗಿದ್ದು ಸಹಕಾರ ಸಂಸ್ಥೆಗಳು ಸಫಲವಾಗಿರುವುದನ್ನು ನಾವು ಕಾಣಬಹುದು. ಈ ಬಗ್ಗೆ ನಾನು ಯೋಚಿಸಿದಾಗ ನನಗೆ ಜವಾಬು ಸಿಕ್ಕಿದ್ದು ಶ್ರೀಮತಿ ಇಳಾ ಭಟ್ ಅವರ ಆತ್ಮಚರಿತ್ರೆಯಲ್ಲಿ. ಅವರ ಪುಸ್ತಕದಲ್ಲಿ ಚಿಂದಿ ವ್ಯಾಪಾರ ಮಾಡುವ ಚಂದಾಬೇನ್ ಇಳಾರನ್ನು ಕೇಳುತ್ತಾರೆ – 'ನಮಗೆ ನಮ್ಮದೇ ಒಂದು ಬ್ಯಾಂಕಿದ್ದರೆ ಎಷ್ಟು ಒಳಿತು...' ಅದಕ್ಕೆ ಇಳಾ ಪ್ರತಿಕ್ರಿಯಿಸಿ, 'ಬ್ಯಾಂಕೆಂದರೆ ತಮಾಷೆಯಲ್ಲ, ಬ್ಯಾಂಕನ್ನು ಪ್ರಾರಂಭಿಸಲು ತುಂಬಾ ಬಂಡವಾಳ ಬೇಕು' ಎಂದಾಗ ಚಂದಾಬೇನ್ ಹೇಳುತ್ತಾರೆ, 'ನಾವು ಬಡವರಿರಬಹುದು ಆದರೆ ಎಷ್ಟೊಂದು ಜನ ಇದ್ದೇವೆ ಅದರಿಂದಲೇ ಬಂಡವಾಳ ಹೊಂದುತ್ತದೆ.' ಹೀಗೆ ಈ ಮಾತಿನಿಂದ, ಅನೇಕ ಜನರಿರಬಹುದಾದ ಸಣ್ಣ ಉತ್ಪಾದಕರು, ಹಿಡುವಳಿದಾರರನ್ನು ಒಂದೆಡೆಗೆ ಸೇರಿಸಿ ಯಶಸ್ವೀ ಸಹಕಾರಿ ಸಂಸ್ಥೆಗಳನ್ನು ನಡೆಸಬಹುದೆಂದು ಹೈನುಗಾರಿಕೆ ಮತ್ತು ಸಕ್ಕರೆ ಸಹಕಾರೀ ಕ್ಷೇತ್ರದಲ್ಲಿ ನಾವು ಕಂಡಿದ್ದೇವೆ.

ಬಂಡವಾಳಮೂಲವಾದ ವ್ಯಾಪಾರದಲ್ಲಿ ಕೆಲವು ಅನುಕೂಲತೆಗಳು ಇವೆ. ಆ ಅನುಕೂಲಗಳು ಸಹಕಾರ ಕ್ಷೇತ್ರಕ್ಕೆ ಲಭ್ಯವಿಲ್ಲ. ಬಂಡವಾಳವು ಸಾಮಾನ್ಯವಾಗಿ ದುಡ್ಡಿನ ರೂಪದಲ್ಲಿ ಬರುವುದರಿಂದ ಅದಕ್ಕೊಂದು ಸಾರ್ವತ್ರಿಕತೆಯಿದೆ. ಆದರೆ ಸಹಕಾರವು ವ್ಯಾಪಾರದ ಪರಿಮಾಣದ ಮೇಲೆ ಲಾಭಾಂಶವನ್ನು ಹಂಚುವುದರಿಂದ ಸದಸ್ಯರು ಸಂಸ್ಥೆಯ ಜೊತೆ ವ್ಯಾಪಾರ (ಖರೀದಿ ಅಥವಾ ಮಾರಾಟ) ಮಾಡುವ ಪರಿಸ್ಥಿತಿ ಯಲ್ಲಿರಬೇಕು. ಅಂದರೆ ಸಹಕಾರ ಸಂಸ್ಥೆಯನ್ನು ಯಾತಕ್ಕಾಗಿ ಏರ್ಪಾಟುಮಾಡಿದ್ದೇವೆ ಎನ್ನುವ ಒಂದು ಸ್ಪಷ್ಟ ಪರಿಕಲ್ಪನೆಯಿರಬೇಕು. ಹಾಗಾದಾಗ ಮಾತ್ರ ಜನ ಅದರಲ್ಲಿ ಸದಸ್ಯತ್ವ ಪಡೆಯುವುದಕ್ಕೂ ಸಹಕಾರ ಸಂಸ್ಥೆ ಒದಗಿಸುವ ಸೇವೆಯನ್ನು ಸದುಪಯೋಗ ಪಡಿಸಿಕೊಳ್ಳುವುದಕ್ಕೂ ಸಾಧ್ಯವಿದೆ. ಹೀಗಾಗಿ ನಿಖರವಾಗಿ ಮೂಲ ವ್ಯಾಪಾರವೇನು ಎನ್ನುವುದನ್ನು ವಿವರಿಸುವುದು ಮುಖ್ಯವಾಗುತ್ತದೆ.

ಉದಾಹರಣೆಗೆ ನಾವು ನೇಯ್ಗೆಯ ಸಹಕಾರ ಸಂಘಗಳನ್ನು ತೆಗೆದುಕೊಂಡು ಅದರಲ್ಲಿರಬಹುದಾದ ಸೂಕ್ಷ್ಮ ವ್ಯತ್ಯಾಸಗಳನ್ನು ಪರಿಶೀಲಿಸೋಣ. ನೇಯ್ಗೆಯ ಕ್ಷೇತ್ರಕ್ಕೆ ಬಂದಾಗ ಆ ಸಹಕಾರ ಸಂಸ್ಥೆಗೆ ಎರಡು ಭಿನ್ನ ರೀತಿಯ ಉದ್ದೇಶಗಳು ಇರಬಹುದು: ನೇಕಾರರಿಗೆ ಕೆಲಸವನ್ನು ಹೆಚ್ಚಿಸುವ ಜೀವನೋಪಾಧಿಯನ್ನು ಕಲ್ಪಿಸುವ ಉದ್ದೇಶವಿದ್ದರೆ -ಅದು ಹೆಗ್ಗೋಡಿನಲ್ಲಿರುವ ಚರಕ ಸಂಸ್ಥೆಯು ನಡೆಯುವ ಸೂತ್ರದ ಮೇಲೆ ಆಧಾರಿತವಾಗಿರುತ್ತದೆ. ಅಂದರೆ, ನೇಯ್ಗೆಯನ್ನು ಒಂದು ಕಲೆಯೆಂದು ಪರಿಗಣಿಸದೆ



ಅದು ಜೀವನೋಪಾಯಕ್ಕೊಂದು ಮಾರ್ಗವನ್ನಾಗಿ ಪರಿಗಣಿಸಿದರೆ ಆಗ ಹೆಚ್ಚು ನೇಕಾರರನ್ನು ತರಬೇತಿಮಾಡುವ, ಅವರಿಗೆ ಹೆಚ್ಚು ಕೆಲಸವನ್ನು ನೀಡುವ, ಅವರು ಏನೇ ನೇಯ್ದರೂ ಅದಕ್ಕೊಂದು ಮಾರುಕಟ್ಟೆಯನ್ನು ಕಂಡುಹಿಡಿಯುವ ಕೆಲಸವನ್ನು ಸಂಸ್ಥೆ ಮಾಡಬೇಕಾಗುತ್ತದೆ. ಈ ದೃಷ್ಟಿಯಿಂದ ಈ ಸಂಸ್ಥೆ ಸರಳವಾದ, ಎಲ್ಲರೂ ನೇಯಬಹುದಾದಂತಹ ಬಟ್ಟೆ ಮತ್ತು ಅದರಿಂದ ಸರಳವಾಗಿ ಹೊಲಿದು ಧರಿಸಬಲ್ಲ ವಸ್ತ್ರಗಳನ್ನು ತಯಾರಿಸಿ ಹೆಚ್ಚಿನ ಸಂಖ್ಯೆಯಲ್ಲಿ ಮಾರಾಟಮಾಡುವ ಕೆಲಸಮಾಡುತ್ತದೆ.

ಇದನ್ನು ಭಿನ್ನವಾಗಿ ನೋಡಿ, ನೇಯ್ಗೆಯನ್ನು ಒಂದು ಕಲೆಯನ್ನಾಗಿ, ಒಂದು ವೈಶಿಷ್ಟ್ಯತೆಯಿರುವ, ನೈಪುಣ್ಯತೆ ಇರುವ ಕೆಲಸವಾಗಿ ಕಂಡರೆ, ಆಗ ಹೆಚ್ಚು ನೇಕಾರರನ್ನು ಹುಡುಕಿ ತಯಾರುಮಾಡುವುದಕ್ಕೆ ಬದಲಾಗಿ, ನೈಪುಣ್ಯವುಳ್ಳ ನೇಕಾರರ ಮಾಲಿಗೆ ಬಂದು ಮಾರುಕಟ್ಟೆಯನ್ನು ಹುಡುಕುವ, ಅವರ ಕಲೆಗೆ ಒಳ್ಳೆಯ ಬೆಲೆಯನ್ನು ತಂದುಕೊಡುವ ಕೆಲಸವನ್ನು ಆ ಸಂಸ್ಥೆ ಮಾಡಬೇಕಾಗುತ್ತದೆ. ಇದಕ್ಕೆ ತಕ್ಷಣದಲ್ಲಿ ನಮಗೆ ಸಹಕಾರಿ ಕ್ಷೇತದ ಉದಾಹರಣೆ ಸಿಗುವುದಿಲ್ಲವಾದರೂ ಫ್ಯಾಬ್ ಇಂಡಿಯಾ ಎನ್ನುವ ಖಾಸಗೀ ಸಂಸ್ಥೆ ಮಾಡುತ್ತಿರುವ ಕೆಲಸವನ್ನು ಸಹಕಾರೀ ಕ್ಷೇತ್ರಕ್ಕೆ ಅನ್ವಯಿಸಿದರೆ ಇದರ ಅರ್ಥದ ಮಜಲುಗಳು ನಮಗೆ ಗೋಚರಿಸುತ್ತವೆ. ಫ್ಯಾಬ್ ಇಂಡಿಯಾ ಕೈಮಗ್ಗದ ವಿಶಿಷ್ಟ ವಸ್ತ್ರಗಳನ್ನು ಮಾರಾಟಮಾಡುವ ಒಂದು ಮಳಿಗೆ. ಇಲ್ಲಿ ನಾವು ನೈಪುಣ್ಯವುಳ್ಳ ನೇಕಾರರ ವಸ್ತುಗಳನ್ನಷ್ಟೇ ಕಾಣಬಹುದಾಗಿದೆ.

ಇದೇ ರೀತಿಯಾಗಿ ನಾವು ನಮ್ಮ ಪ್ರದೇಶದಲ್ಲಿರುವ ಕ್ಯಾಂಪ್ಕೋ ಸಂಸ್ಥೆಯನ್ನು ಪರಾಮರ್ಶಿಸಿದಾಗ ಅದು ಕೋಕೋಗಾಗಿ ಏರ್ಪಾಟಾದ ಸಂಘವೋ ಅಡಕೆಗೆ ಆದ ಸಂಘವೋ, ಯಾರ ಹಿತದೃಷ್ಟಿ ಪ್ರಾಥಮಿಕವಾಗಿರಬಹುದು ಎನ್ನುವ ಗೊಂದಲ ಉಂಟಾಗುವ ಸಾಧ್ಯತೆಯನ್ನೂ ಕಾಣಬಹುದಾಗಿದೆ.

ಈ ಭಾಗದ ನನ್ನ ಮಾತನ್ನು ನಾನು ಮತ್ತೊಂದು ಉದಾಹರಣೆಯನ್ನು ಚರ್ಚಿಸಿ ಮುಂದುವರೆಯುತ್ತೇನೆ. ಸಹಕಾರ ಕ್ಷೇತ್ರ ಗ್ರಾಹಕ ವಸ್ತುಗಳ ವ್ಯಾಪಾರದಲ್ಲಿ ಹೆಚ್ಚಿನ ಅರ್ಥವನ್ನು ಈಚಿನ ದಿನಗಳಲ್ಲಿ ಕಂಡುಕೊಳ್ಳುತ್ತಿಲ್ಲ ಎನ್ನುವಾಗಲೇ ಇಂದಿನ ಯಾವುದಾದರೂ ಕ್ಷೇತ್ರ ಸಹಕಾರಕ್ಕೆ ಸಮರ್ಪಕವಾಗಿರಬಹುದೇ ಎನ್ನುವ ಕುತೂಹಲವೂ ನನಗಿದೆ. ಈ ಚರ್ಚೆಗೆ ಬಂದಾಗ ನಾವು ಸಾಫ್ಟ್‌ವೇರ್ ಕ್ಷೇತ್ರವನ್ನು ಪರಿಗಣಿಸಬಹುದು. ಈ ಮಾತನ್ನು ಚರ್ಚಿಸಲು (ಹಾಗೂ ಚರ್ಚೆಗಾಗಿ ಮಾತ್ರವೇ) ಇನ್ಫೋಸಿಸ್‌ನ ಕೆಲವು ಅಂಕಿ ಅಂಶಗಳನ್ನುಪಯೋಗಿಸಿ ನನ್ನ ವಾದವನ್ನು ಪ್ರಸ್ತುತ ಪಡಿಸುತ್ತೇನೆ.

ಇನ್ಫೋಸಿಸ್ ಅಥವಾ ಆ ಕ್ಷೇತ್ರದಲ್ಲಿರುವ ಅಂತಹ ಕಂಪನಿಗಳು ಬಂಡವಾಳ ಹೂಡಿಕೆಯ ಆಧಾರದ ಮೇಲೆ ನಡೆಯುವಂಥವಲ್ಲ. ಅಂಥ ವ್ಯಾಪಾರದಲ್ಲಿ ಉದ್ಯೋಗಿಗಳ ಬುದ್ಧಿಮತ್ತೆ ಮತ್ತು ಅವರ ಕಾರ್ಯಕ್ಷಮತೆ ಹೆಚ್ಚಿದ್ದು, ಉಪಯೋಗಕ್ಕೆಂದು ಭೌತಿಕವಾಗಿ ನಿಲ್ಲುವ ಆಸ್ತಿ ಜಮೀನು ಕಟ್ಟಡ ಯಂತ್ರಗಳು ಉದ್ಯೋಗಿಗಳ ಖರ್ಚಿನ ಮುಂದೆ ಕಡಿಮೆ ಮಹತ್ವದ್ದಾಗಿಯೂ ನಡೆಯುವ ವ್ಯಾಪಾರ. ಇಂಥ ಕ್ಷೇತ್ರದಲ್ಲಿ ಬಂಡವಾಳಕ್ಕೆ ಅಸಹಜವಾದ ಲಾಭಾಂಶ ಬಂದರೆ, ಅದು ಸಹಕಾರಕ್ಕೆ ಹೇಳಿ ಮಾಡಿಸಿದ ಕ್ಷೇತ್ರವಾಗುತ್ತದೆ. ಇನ್ಫೋಸಿಸ್ ಉದ್ಯೋಗಿಗಳ ಸಹಕಾರ ಸಂಸ್ಥೆಯಾಗಿದ್ದರೆ ಅದರ ಆರ್ಥಿಕ ರೂಪುರೇಷೆಯೇ ಭಿನ್ನವಾಗಿರುತ್ತಿತ್ತು. ಇನ್ಫೋಸಿಸ್‌ನ ಮೂಲ ಬಂಡವಾಳ ಅಥವಾ ಷೇರುಧನ ಕೇವಲ ೨೮೧ ಕೋಟಿ ರೂಪಾಯಿಗಳು. ಇಂದಿಗೆ ಆ ಸಂಸ್ಥೆ ಹಂಚದೇ ಉಳಿಸಿಕೊಂಡ ಲಾಭಾಂಶ ಸುಮಾರು ೩೫,೦೦೦ ಕೋಟಿ ರೂಪಾಯಿ. ವ್ಯಾಪಾರದ ಮೇಲೆ ಆ ಸಂಸ್ಥೆ ೯೦೦೦ ಕೋಟಿ ರೂಪಾಯಿಯ ಲಾಭವನ್ನು ಗಳಿಸಿ ಸುಮಾರು ೨೮೦೦ ಕೋಟಿಯ ಲಾಭಾಂಶವನ್ನು ಷೇರುದಾರರಿಗೆ ಹಂಚಿತ್ತು. ಆ ಸಂಸ್ಥೆಯ ಬಂಡವಾಳದಲ್ಲಿ ಸುಮಾರು ೪೪೦೦ ಕೋಟಿ ರೂಪಾಯಿಗಳ ಸ್ಥಿರಚರಾಸ್ಥಿಗಳಿದ್ದರೆ, ಮಿಕ್ಕಂತೆ ಬ್ಯಾಂಕಿನಲ್ಲಿ ಸುಮಾರು ೨೦೦೦೦ ಕೋಟಿ ರೂಪಾಯಿಗಳು ಕುಳಿತಿದ್ದುವು.

ಈ ಸಂಸ್ಥೆಯನ್ನು ಹುಟ್ಟುಹಾಕಿದ ಮೂಲಬಂಡವಾಳವನ್ನು ಹೂಡಿದ ಜನರ ಪಾಲು ಕಂಪನಿಯಲ್ಲಿ ಸುಮಾರು ಶೇ. ೧೬ರಷ್ಟಿತ್ತು. ಈ ಲೆಕ್ಕದ ಪ್ರಕಾರ ಮೂಲದಲ್ಲಿ ಹಣ ಹೂಡಿದ ಏಳೆಂಟು ಜನ ಮತ್ತು ಅವರ ಸಂಬಂಧಿಗಳಿಗೆ ಆ ವರ್ಷದ ಲಾಭದಲ್ಲಿ ಸುಮಾರು ೧೪೦೦ ಕೋಟಿಗಳೂ, ವಿತರಿಸಿದ ಲಾಭಾಂಶದಲ್ಲಿ ಸುಮಾರು ೫೦೦ ಕೋಟಿಗಳೂ ಸಂದಿರುತ್ತವೆ. ಇದನ್ನೇ ಸಹಕಾರಿ ವ್ಯವಸ್ಥೆಯಲ್ಲಿ ಏರ್ಪಾಟುಮಾಡಿದ್ದರೆ ಆ ಕಂಪನಿಯಲ್ಲಿರುವ ೧ ಲಕ್ಷಕ್ಕೂ ಹೆಚ್ಚು ಉದ್ಯೋಗಿಗಳಿಗೆ ತಲಾ ೮ ಲಕ್ಷ ರೂಪಾಯಿಯ ಲಾಭವನ್ನು ಹಂಚಬಹುದಿತ್ತು. ಈ ಉದಾಹರಣೆಯಿಂದ ನಮಗೆ ಬಂಡವಾಳವೇ ಮೂಲವಾದ ಪದ್ಧತಿಯಲ್ಲಿ ಅತೀ ಲಾಭ ಬಂದಾಗ ಅದು ಕೆಲವರಲ್ಲಿಯೇ ಕೇಂದ್ರೀಕೃತವಾದ ಪ್ರಕ್ರಿಯೆಯನ್ನು ಕಾಣಬಹುದು.

ಸಹಕಾರವು ಸಮಾನತೆಯತ್ತ ನಮ್ಮನ್ನು ಒಯ್ಯುತ್ತದೆ ಎಂಬುದು ಅತಿಯಾದ ಮಾತಾಗಬಹುದು. ಆದರೆ ಸಹಕಾರವು ಸಂಪತ್ತಿನ ಕೇಂದ್ರೀಕರಣವನ್ನು ತಪ್ಪಿಸಿ ನಮ್ಮನ್ನು ಸಮತಾವಾದದ ಕಡೆಗೆ ಒಯ್ಯುತ್ತದೆ ಎನ್ನುವುದರಲ್ಲಿ ಅನುಮಾನವಿಲ್ಲ.



## ಭಾಗ ೨

ಈ ಭಾಗದಲ್ಲಿ ನಾನು ಭಾರತದಲ್ಲಿ ಸಹಕಾರ ಬೆಳೆದುಬಂದ ರೀತಿಯನ್ನೂ ನಾವು ಎದುರಿಸುತ್ತಿರುವ ಸವಾಲುಗಳನ್ನೂ ಸರಕಾರೀಕರಣವನ್ನೂ ಚರ್ಚಿಸುತ್ತೇನೆ.

ಚರಿತ್ರೆಯ ಪುಟಗಳನ್ನು ತಿರುವಿಹಾಕಿದರೆ ಸರಕಾರವು ಮೊದಲಿನಿಂದಲೂ ಸಹಕಾರ ರಂಗವನ್ನು ಪ್ರೀತಿಯ ಕಣ್ಣುಗಳಿಂದಲೇ ನೋಡಿದೆ ಎನ್ನುವುದು ವೇದ್ಯವಾಗುತ್ತದೆ. ಹೈನುಗಾರಿಕೆ ಮತ್ತು ಸಕ್ಕರೆ ಕ್ಷೇತ್ರದಲ್ಲಿ ಮೂಲಭೂತವಾಗಿ ಸ್ವಯಂಭೂ ಸಹಕಾರ ಸಂಘಗಳು ಬಂದವು. ಅವುಗಳ ಬೆಳವಣಿಗೆಯೂ ವ್ಯಾಪ್ತಿಯೂ ಹಿಗ್ಗಿದ್ದು ಸರಕಾರದ ಕೃಪೆಯಿಂದಲೇ. ಸಹಕಾರ ಸಿದ್ಧಾಂತದಲ್ಲಿ ಪ್ರಜಾಪ್ರಭುತ್ವದ ಸೂತ್ರಗಳು ಅಡಕವಾಗಿರುವುದರಿಂದ ಅವು ನಿಜಕ್ಕೂ ಸರಕಾರಿ ಯಂತ್ರಾಂಗಕ್ಕೆ ಐಡಿಯಾಲಜಿಯ ವತಿಯಿಂದ ಹತ್ತಿರವಾದವು.

೧೮೫೪ರಲ್ಲಿ ನಿಯಮಿಸಿದ ಅಖಿಲಭಾರತದ ಗ್ರಾಮೀಣ ಋಣ ಸರ್ವೇ ಸಮಿತಿಯ ಶಿಫಾರಸ್ಸಿನಿಂದಲೇ ಸರಕಾರದ ಪಾತ್ರ ಸಹಕಾರಿ ಕ್ಷೇತ್ರದಲ್ಲಿ ಹಿಗ್ಗುತ್ತಾ ಹೋಯಿತು. ವಿತ್ತೀಯ ಕ್ಷೇತ್ರದಲ್ಲಿ ಸರಕಾರ ಸಂಘಗಳು ದೊಡ್ಡ ರೀತಿಯಲ್ಲಿ ಕೆಲಸ ಮಾಡಬೇಕೆಂದು ಆ ವರದಿಯ ಇರಾದೆಯಾಗಿತ್ತು. ಗ್ರಾಮೀಣ ಜನರ ಹೆಚ್ಚಿನ ಋಣಭಾರ ಬಡ್ಡಿವ್ಯಾಪಾರಿಗಳ ಕೈಯಲ್ಲಿ ಸಿಲುಕಿತ್ತಾದ್ದರಿಂದ ಅದಕ್ಕೊಂದು ಸಂಸ್ಥಾಗತ ರೂಪದ ಏರ್ಪಾಟು ಆಗಬೇಕೆಂದು ಆ ಸಮಿತಿಯ ಆಶಯವಾಗಿತ್ತು. ಹೀಗಾಗಿಯೇ ಸಹಕಾರ ಸಂಘಗಳ ಜೊತೆ ಸರಕಾರದ ಭಾಗಸ್ವಾಮ್ಯ ಎನ್ನುವ ವಿಚಾರವನ್ನು ಆ ಸಮಿತಿ ಪ್ರತಿಪಾದಿಸಿತ್ತು. ಆ ಸಮಿತಿಯ ಪ್ರತಿಪಾದನೆಯಲ್ಲಿ ಒಂದು ಅರ್ಥವೂ ಇತ್ತೆನ್ನಿ.

ಬಡವರನ್ನು ಸಂಸ್ಥಾಗತ ಏರ್ಪಾಟಿನಲ್ಲಿ ಒಳಪಡಿಸಬೇಕು. ಅದಕ್ಕೆ ಆ ವ್ಯವಸ್ಥೆ ಪ್ರಾರಂಭವಾಗಲು ತುಸುವಾದರೂ ಮೂಲಧನ ಬಂಡವಾಳ ರೂಪದಲ್ಲಿ ಬೇಕೇಬೇಕು. ಆದರೆ ಬಡವರೇ ತುಂಬಿರಬಹುದಾದ ಸಂಸ್ಥೆಗಳಲ್ಲಿ ಅವರುಗಳು ಮೂಲಧನವನ್ನು/ ಬಂಡವಾಳವನ್ನು ಎಲ್ಲಿಂದ ತಂದಾರು? ಅದು ಕಷ್ಟಸಾಧ್ಯ ಎನ್ನಿಸಿದ್ದರಿಂದ ಸರಕಾರವು ಮೊದಲಿಗೆ ಬಂಡವಾಳವನ್ನು ಪೂರೈಸುವುದೆಂದೂ, ಕಾಲಕ್ರಮೇಣ ಸಹಕಾರ ಸಂಘಗಳು ಸ್ಥಾಪಿತವಾದಾಗ ಆ ಬಂಡವಾಳವನ್ನು ಸಂಸ್ಥೆಗಳ ಲಾಭಾಂಶದಿಂದ ಸರಕಾರಕ್ಕೆ ಮರುಪಾವತಿಮಾಡಿ ಸದಸ್ಯರೇ ಮಾಲೀಕರಾಗುವ ಯೋಜನೆಯನ್ನು ಆ ಸಮಿತಿ ಸೂಚಿಸಿತ್ತು.

ಇದೇ ರೀತಿಯ ಏರ್ಪಾಟನ್ನು ನಂತರ ಮಹಾರಾಷ್ಟ್ರದ ಸಹಕಾರಿ ಸಕ್ಕರೆ ಕಾರ್ಖಾನೆಗಳು ತಮ್ಮದಾಗಿಸಿಕೊಂಡಿದ್ದುವು. ಆದರೆ ಸಕ್ಕರೆ ಕಾರ್ಖಾನೆಗಳು ತುಸು ಲಾಭವನ್ನು ಪಡೆದು ತಮ್ಮ ಕಾಲಮೇಲೆ ತಾವು ನಿಂತಕೂಡಲೇ ಸರಕಾರದ ಹಣವನ್ನು

ಹಿಂದಿರುಗಿಸಿದರಾದರೂ, ವಿತ್ತೀಯ ಸರಕಾರ ಸಂಘಗಳಲ್ಲಿ ಇದು ನಡೆಯಲೇ ಇಲ್ಲ. ಒಂದು ರೀತಿಯಲ್ಲಿ ಸರಕಾರ ಹೂಡಿದ ಬಂಡವಾಳ ಮತ್ತು ಅದು ಅಲ್ಲಿಯೇ ಉಳಿದುಕೊಂಡದ್ದೇ ಸಹಕಾರ ಸಂಘಗಳ ಸರಕಾರೀಕರಣಕ್ಕೆ ಕಾರಣವಾಗಿರಬಹುದು.

ಗುಜರಾತಿನ ಹೈನುಗಾರಿಕೆಯ ಸಹಕಾರ ಸಂಘಗಳಿಗೂ ಸರಕಾರದ ಸಹಾಯ ಬಂದಿತಾದರೂ, ಅದು ದೇಣಿಗೆಯ ರೂಪದಲ್ಲಿ ಬಂದದ್ದರಿಂದ ಅದನ್ನು ಬಂಡವಾಳ ಎಂದು ಕರೆಯುವ ಪ್ರಮೇಯವಾಗಲೀ ಸರಕಾರಕ್ಕೆ ಹಿಂದಿರುಗಿಸುವ ಪ್ರಮೇಯ ವಾಗಲೀ ಉಂಟಾಗಲೇ ಇಲ್ಲ.

ವಿತ್ತೀಯ ಸಹಕಾರ ಸಂಘಗಳು ಸಂಖ್ಯೆಯಲ್ಲಿಯೂ ಹೆಚ್ಚಾಗಿದ್ದು (ಸುಮಾರು ಒಂದು ಲಕ್ಷದ ಆಜುಬಾಜಿನಲ್ಲಿ ಅವುಗಳ ಸಂಖ್ಯೆಯಿತ್ತು) ಅಲ್ಲಿ ಸರಕಾರದ ಹಣವೂ ಇದ್ದದ್ದರಿಂದ ನಮ್ಮ ಸಹಕಾರ ನೀತಿ ಸಾಮಾನ್ಯತಃ ಈ ಕ್ಷೇತ್ರವನ್ನು ಮೂಲವಾಗಿಟ್ಟು ರೂಪಿಸಿದ್ದೇ ಆಗಿತ್ತು.

ಋಣಸರ್ವೇ ಸಮಿತಿ ಕಂಡುಕೊಂಡ ಸಮಸ್ಯೆ ಸಮರ್ಪಕವಾಗಿಯೇ ಇತ್ತು. ಹೆಚ್ಚು ಹೆಚ್ಚು ಋಣ ಸಂಸ್ಥಾಗತ ಮೂಲದಿಂದ ಜನರಿಗೆ, ಮುಖ್ಯವಾಗಿ ಬಡವರಿಗೆ ತಲುಪಬೇಕು ಎನ್ನುವ ಇಂಗಿತ ಮತ್ತು ಅದನ್ನು ಸಹಕಾರ ಸಂಘಗಳ ಮೂಲಕ ತಲುಪಿಸಬೇಕು ಎನ್ನುವ ಯೋಜನೆ ಎರಡೂ ಸರಿಯಾಗಿಯೇ ಇತ್ತು. ೧೯೬೧ರಲ್ಲಿ ಮತ್ತು ೧೯೭೧ರಲ್ಲಿ ನಡೆಯಿಸಿದ ಸರ್ವೆ ಪ್ರಕಾರ ಒಟ್ಟು ಗ್ರಾಮೀಣ ಋಣ ವಿತರಣೆಯಲ್ಲಿ ಅನಿಯೋಜಿತ ವರ್ಗದ (ಬಡ್ಡಿ ವ್ಯಾಪಾರಿಗಳು) ಪಾಲು ಕುಸಿದು ಸಹಕಾರದ ಪಾಲು ಹಿಗ್ಗಿದ್ದನ್ನು ನಾವು ಕಾಣಬಹುದು.

ಈ ದಶಕಗಳ ನಂತರ ವಿತ್ತೀಯ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸರಕಾರದ ಗಮನವು ಬ್ಯಾಂಕುಗಳತ್ತ ಹರಿಯಿತು. ೧೯೬೯ರಲ್ಲಿ ಮತ್ತು ೧೯೮೦ರಲ್ಲಿ ಎರಡು ಕಂತುಗಳಲ್ಲಿ ಬ್ಯಾಂಕುಗಳ ರಾಷ್ಟ್ರೀಕರಣವಾಯಿತು. ಹಾಗೆಯೇ ಕ್ಷೇತ್ರೀಯ ಗ್ರಾಮೀಣ ಬ್ಯಾಂಕುಗಳನ್ನು ಸರಕಾರ ಏರ್ಪಾಟುಮಾಡಿತು. ಆದರೆ ಈ ಯಾವ ನೀತಿಯಿಂದಲೂ ಸಹಕಾರ ಕ್ಷೇತ್ರದ ಮೇಲೆ ವ್ಯತಿರೇಕದ ಪ್ರಭಾವ ಉಂಟಾಗಲಿಲ್ಲ. ವಿತ್ತೀಯ ಸಹಕಾರ ಕ್ಷೇತ್ರ ತನ್ನ ಪಾಡಿಗೆ ತಾನು ಕುಂಟುತ್ತಾ ನಡೆಯುತ್ತಾ ಓಡುತ್ತಾ ಇತ್ತು.

ವಿತ್ತೀಯ ಸಹಕಾರ ಕ್ಷೇತ್ರದ ಮೇಲೆ ಮೊದಲಿಗೆ ದೊಡ್ಡ ಪ್ರಹಾರವಾದದ್ದು ೧೯೯೦ರಲ್ಲಿ. ಆ ಪ್ರಹಾರದ ನಂತರ ನಾವು ನಮ್ಮ ಅತೀ ಮುಖ್ಯ ಕ್ಷೇತ್ರದ ಸಹಕಾರ ಸಂಘಗಳ ಅವನತಿಯನ್ನು ಕಾಣಬಹುದು.

೧೯೯೦ರಲ್ಲಿ ಕೇಂದ್ರ ಸರಕಾರ ಮೊದಲಬಾರಿಗೆ ರಾಷ್ಟ್ರವ್ಯಾಪೀ ಸಾಲಮನ್ನಾ ಕಾರ್ಯಕ್ರಮವನ್ನು ಘೋಷಿಸಿತು. ಘೋಷಣೆಯೇನೋ ಭರ್ಜರಿ ತಾಳಮದ್ದಳೆ



ಗಳೊಂದಿಗೆ ಬಂದಿತಾದರೂ ಅವರಲ್ಲಿದ್ದ ಸಾಲ ಪರಿಮಿತಿ (ರೂ. ೧೦,೦೦೦)ಯ ವಿವರವು ಆ ಗಲಭೆಯಲ್ಲಿ ಸ್ಪಷ್ಟವಾಗಿ ಕೇಳಿಸದೇ ಹೋಯಿತು.

ಇದರ ಜೊತೆಗೆ ಬ್ಯಾಂಕಿಂಗ್ ವ್ಯವಸ್ಥೆ ಕೇಂದ್ರ ಸರಕಾರದಡಿ ಬರುವುದರಿಂದ ಕೇಂದ್ರ ಸರಕಾರವು ತನ್ನ ಬಾಧ್ಯತೆಯನ್ನು ಬ್ಯಾಂಕಿಂಗ್ ಸಂಸ್ಥೆಗಳಿಗೆ ಮಿತಿಗೊಳಿಸಿ ರಾಜ್ಯದಡಿ ಬರುವ ಸಹಕಾರ ಸಂಘಗಳನ್ನು ರಾಜ್ಯಗಳಿಗೆ ಬಿಟ್ಟುಕೊಟ್ಟವು.

ಇದರಿಂದಾಗಿ ಸಹಕಾರಕ್ಕೆ ಬಲವಾದ ಪೆಟ್ಟುಬಿದ್ದದ್ದು ನಿಜ. ಸಾಲಮನ್ನಾಗೆ ಅರ್ಹರಲ್ಲದವರೂ ಸಾಲ ಮರುಪಾವತಿಸದಿದ್ದುದು ಒಂದು ಪೆಟ್ಟಾದರೆ ಅರ್ಹರ ಮನ್ನಾ ಹಣವನ್ನು ಸರಕಾರ ಸಹಕಾರ ಸಂಘಗಳಿಗೆ ತುಂಬಿಸುವಲ್ಲಿ ಮಾಡಿದ ವಿಳಂಬವೂ ಮಾರಕವಾಗಿ ಪರಿಣಮಿಸಿತು. ಒಟ್ಟಾರೆ ಅಂಕಿ ಅಂಶಗಳನ್ನು ನೋಡಿದಾಗ ೧೯೯೦ರ ಪ್ರಹಾರದಿಂದ ಸಹಕಾರ ಸಂಘಗಳು ಚೇತರಿಸಿಕೊಳ್ಳಲಿಲ್ಲ ಎಂದೇ ತಿಳಿಯುತ್ತದೆ. ಈ ಸಂದರ್ಭದಲ್ಲಿ ಚೆನ್ನಾಗಿ ನಡೆಯುತ್ತಿದ್ದ ಸಹಕಾರ ಸಂಘಗಳು ಮನ್ನಾದ ಅರ್ಹತೆ ಇಲ್ಲದ್ದರಿಂದ ಬಚಾವಾದದ್ದೂ ಒಂದು ವಿರೋಧಾಭಾಸವೇ.

೨೦೦೪ರಲ್ಲಿ ಕೇಂದ್ರ ಸರಕಾರ ವೈದ್ಯನಾಥನ್ ಅವರ ನೇತೃತ್ವದಲ್ಲಿ – ಕುಸಿಯುತ್ತಿರುವ ಸಹಕಾರ ಸಂಘಗಳಿಗೆ ಕಾಯಕಲ್ಪ ನೀಡುವ ದೆಸೆಯಲ್ಲಿ ಸಲಹೆಗಳನ್ನು ನೀಡಬೇಕೆಂದು – ಒಂದು ಸಮಿತಿಯನ್ನು ಏರ್ಪಡಿಸಿತು. ಆ ಸಮಿತಿ ಸಹಕಾರ ಸಂಘಗಳ ನಷ್ಟಕ್ಕೆ ಮೂರು ಕಾರಣಗಳನ್ನು ಗುರುತಿಸಿತ್ತು: ಸಹಕಾರ ಸಂಘಗಳ ಅದಕ್ಷತೆಯಿಂದ ಉಂಟಾದ ನಷ್ಟ, ರಾಜ್ಯಸರಕಾರದ ಸಹಕಾರ ಸಂಘಗಳ ಮೇಲೆ ಹೇರಿದ ಜವಾಬ್ದಾರಿಗಳಿಂದ (ಸೀಮೆಎಣ್ಣೆ ಮಾರಾಟ, ನ್ಯಾಯಬೆಲೆ ಅಂಗಡಿ, ನೋಟ್‌ಬುಕ್, ಪಠ್ಯಪುಸ್ತಕಗಳ ವಿತರಣೆ ಮುಂತಾದವು) ಉಂಟಾದ ನಷ್ಟ ಮತ್ತು ಕೇಂದ್ರಸರಕಾರದ ಸಾಲಮನ್ನಾ ರೀತಿಯ ಘೋಷಣೆಗಳಿಂದ ಉಂಟಾದ ನಷ್ಟ.

ವೈದ್ಯನಾಥನ್ ಸಮಿತಿ ಆಯಾ ನಷ್ಟಗಳಿಗೆ ಆಯಾ ಸರಕಾರ/ಸಂಘಗಳು ಜವಾಬ್ದಾರಿಯನ್ನು ವಹಿಸಿಕೊಂಡು ಸರಕಾರ ಸಂಘಗಳ ನಷ್ಟವನ್ನು ತುಂಬಬೇಕೆಂದು ಸಲಹೆ ನೀಡಿತ್ತು. ಅದಕ್ಕಿಂತಲೂ ಮಿಗಿಲಾಗಿ ಸಹಕಾರ ಸಂಘಗಳ ಕಾನೂನಿನಲ್ಲಿ ಬದಲಾವಣೆಗಳನ್ನು ಸೂಚಿಸಿತ್ತು. ಸರಕಾರದ ಬಂಡವಾಳವನ್ನು ವಾಪಸ್ಸುಮಾಡಿ ಸಹಕಾರ ಸಂಸ್ಥೆಗಳು ಸ್ವಾಯತ್ತವಾಗಿ ವ್ಯಾಪಾರಿ ಸಂಸ್ಥೆಗಳಂತೆ ಮುಂದುವರೆಯ ಬೇಕೆಂದು ಸಮಿತಿ ಸೂಚಿಸಿತ್ತು.

ಸರಕಾರ ಈ ಸಮಿತಿಯ ವರದಿಯನ್ನೇನೋ ಒಪ್ಪಿತು. ಆದರೆ ಈ ವರದಿ ಜಾರಿಯಾಗಲು ತಯಾರಿ ನಡೆಯುತ್ತಿರುವಾಗಲೇ ಸಹಕಾರ ಸಂಘಗಳ ಮೇಲೆ ಮತ್ತೊಂದು ಪ್ರಬಲವಾದ ಪ್ರಹಾರವನ್ನು ಇನ್ನೊಂದು ಸಾಲಮನ್ನಾ ಕಾರ್ಯಕ್ರಮದ

ಮೂಲಕ ಮಾಡಿತು. ಇದರಿಂದ ವಿತ್ತೀಯ ಸಹಕಾರ ಸಂಘಗಳು ದೊಡ್ಡ ಪ್ರಮಾಣದಲ್ಲಿ ಬಚಾವಾಗಿ ಬರುತ್ತವೆಯೇ ಎನ್ನುವುದರ ಬಗ್ಗೆ ಅನುಮಾನಗಳಿವೆ.

ಈ ಮಧ್ಯೆ ಸಹಕಾರ ಸಂಘಗಳನ್ನು ನಿರ್ದೇಶಿಸುವ ಕಾನೂನಿನಲ್ಲಿ ಸುಧಾರಣೆ ಆಗಬೇಕೆಂದು ಒಂದು ದಶಕದ ಕಾಲ ಕೆಲವು ಸಹಕಾರಿ ಧುರೀಣರು ಚಳವಳಿಯನ್ನು ಮಾಡಿದ್ದರು. ಸರಕಾರೀಕರಣಕ್ಕೆ ಬಂಡವಾಳವೇ ಅಲ್ಲದೆ ಕಾನೂನಿನಲ್ಲಿಯೂ ಸರಕಾರ ಸಹಕಾರ ಸಂಘಗಳ ವ್ಯವಹಾರದಲ್ಲಿ ಮೂಗುತೂರಿಸುವ ಕೆಲವು ಅಂಶಗಳಿವೆ ಎಂದು ವಾದಿಸುತ್ತ ಬಂದಿದ್ದ ಈ ಸಹಕಾರಿಗಳು ಸ್ವಾಯತ್ತ ಸ್ವತಂತ್ರ ಸಹಕಾರೀ ಕ್ಷೇತ್ರ ತನ್ನಷ್ಟಕ್ಕೇ ತಾನು ಒಂದು ವ್ಯಾಪಾರಿ ಸಂಸ್ಥೆಯಾಗಿ ಸರಕಾರದ ತೊಡಕಿಲ್ಲದೇ ಬೆಳೆಯುವಂತಹ ಕಾನೂನು ಬೇಕೆಂದು ಹೋರಾಟ ನಡೆಸಿದರು.

೧೯೯೬ರಲ್ಲಿ ಆಂಧ್ರಪ್ರದೇಶ ಸರಕಾರ 'ಪರಸ್ಪರ ಸಹಾಯ ಸಹಕಾರೀ ಸಂಘಗಳ' ಕಾನೂನನ್ನು ಲಾಗೂ ಮಾಡಿದ್ದರಿಂದಾಗಿ ಸರಕಾರದ ಕೃಪೆಯಿಲ್ಲದ ಸ್ವತಂತ್ರ ಸ್ವಾಯತ್ತ ಸಹಕಾರ ಸಂಸ್ಥೆಗಳನ್ನು ಏರ್ಪಡಿಸಲು ಒಂದು ಕಾನೂನಿನ ಚೌಕಟ್ಟು ದೊರೆತಂತಾಯಿತು. ಆಂಧ್ರಪ್ರದೇಶದ ಕಾನೂನಿನ ಮಾದರಿಯಲ್ಲಿಯೇ ಕರ್ನಾಟಕವನ್ನೊಳಗೊಂಡು ಅನೇಕ ರಾಜ್ಯಗಳು ಎರಡನೆಯ ಸಹಕಾರಿ ಕಾನೂನನ್ನು ಜಾರಿಮಾಡಿದ್ದುವು. ಇದರಿಂದಾಗಿ ಸಹಕಾರಿ ಕ್ಷೇತ್ರದಲ್ಲಿ ಹೊಸ ಹುರುಪೂ ಹೊಸ ಆಶಾವಾದವೂ ಉಂಟಾಯಿತು. ನಿಜಕ್ಕೂ ಸಹಕಾರ ಸೂತ್ರಗಳಂತೆ, ಬಂಡವಾಳ ಕೇಂದ್ರಿತವಲ್ಲದ ಸರಕಾರ ಕೇಂದ್ರದವಲ್ಲದ ಸಹಕಾರಿ ಆಂದೋಲನ ನಮ್ಮ ದೇಶದಲ್ಲಿ ಏರ್ಪಾಟಾಗಬಹುದೆಂದು ಆಶಯವೂ ಇತ್ತು. ಆ ಅಂಥ ಆಶಯಕ್ಕೂ ಈಚೆಗೆ ಪೆಟ್ಟು ಬೀಳುತ್ತಿರುವ ಲಕ್ಷಣಗಳು ಕಾಣುತ್ತಿವೆ.

ಕಳೆದ ವರ್ಷ ಲೋಕಪಾಲ್ ಮಸೂದೆ ಚರ್ಚೆಗೊಳ್ಳುತ್ತಿದ್ದ ಕಾವಿನ ರಾಜಕೀಯ ಪಕ್ಷಗಳ ಬೀದಿಜಗಳದ ನಡೆವೆಯೇ ಯಾವ ಸದ್ದುಗದ್ದಲವಿಲ್ಲದೆಯೇ ಸಂವಿಧಾನದ ೯೭ನೇ ತಿದ್ದುಪಡಿ ಕಾಯಿದೆ ಜಾರಿಗೆ ಬಂದುಬಿಟ್ಟಿತು. ಈ ತಿದ್ದುಪಡಿಯ ಪ್ರಕಾರ ಸಹಕಾರ ಸಂಘಸಂಸ್ಥೆಗಳನ್ನು ಕಟ್ಟುವುದು ಬೆಳೆಸುವುದು ಒಂದು ಸಾಂವಿಧಾನಿಕ ಹಕ್ಕೆಂದು ಘೋಷಿಸಿ ಮಹಾಜನತೆಗೆ ಇದನ್ನು ನೀಡಲಾಯಿತು. ಆದರೆ ಈ ಸಂವಿಧಾನದ ತಿದ್ದುಪಡಿಯಲ್ಲಿ ಅತಿ ವಿವರವಾದ ಕಲಮುಗಳನ್ನು ಹೊಂದಿರುವ ಒಂದು ಭಾಗ ಸಹಕಾರಿ ಸೂತ್ರಕ್ಕೆ ಸ್ವಾಯತ್ತತೆಗೆ ವಿರುದ್ಧವಾಗಿರುವುದಾಗಿದೆ.

ಈಚೆಗೆ ಗುಜರಾತ್ ಉಚ್ಚ ನ್ಯಾಯಾಲಯ ಸಂವಿಧಾನದ ತಿದ್ದುಪಡಿ ಸಮಂಜಸವೆಂದೂ ಆದರೆ ಈ ವಿವರಗಳಿರುವ ಒಂದು ಭಾಗ ಮಾತ್ರ ಸಂವಿಧಾನ ವಿರೋಧಿ ಎಂದೂ ತೀರ್ಪನ್ನಿತ್ತು ಸಹಕಾರ ಕ್ಷೇತ್ರಕ್ಕೆ ಪರಿಹಾರವನ್ನು ನೀಡಿದೆ. ಆದರೆ



ಈ ದಾವೆ ಉಚ್ಚತಮ ನ್ಯಾಯಾಲಯಕ್ಕೆ ಹೋಗಿ ಅಲ್ಲಿಂದ ಯಾವ ರೀತಿಯ ತೀರ್ಪು ಬರಬಹುದು ಎನ್ನುವ ಕುತೂಹಲವೂ ಅನುಮಾನಗಳೂ ಸಹಕಾರೀ ಧುರೀಣರಲ್ಲಿದೆ.

ಈ ಸಂವಿಧಾನದ ತಿದ್ದುಪಡಿಯ ಆಧಾರದಲ್ಲಿ ಈಗಾಗಲೇ ಎರಡು ರಾಜ್ಯ ಸರಕಾರಗಳು ತಮ್ಮ 'ಸೌಹಾರ್ದ' ಸಹಕಾರ ಕಾಯಿದೆಯನ್ನು ರದ್ದುಪಡಿಸಿವೆ. ಇದು ಉತ್ತಮವಾದ ಲಕ್ಷಣವಲ್ಲ. ಸಹಕಾರೀ ಕ್ಷೇತ್ರದ ತಲ್ಲಣವು, ಅದರಲ್ಲೂ ಮುಖ್ಯವಾಗಿ, ಸಹಕಾರಿ ಕ್ಷೇತ್ರದ ಸಹಕಾರದೊಂದಿಗಿನ ತಲ್ಲಣವು ಇನ್ನೂ ಮುಂದುವರೆಯಲಿದೆ. ಈ ಬೆಳವಣಿಗೆಗಳನ್ನು ಸಹಕಾರದ ಬಗ್ಗೆ ಆಸಕ್ತಿ ಇರುವವರೆಲ್ಲ ಕುತೂಹಲದಿಂದ ಹಾಗೂ ತುಸು ಆತಂಕದಿಂದಲೇ ನೋಡುತ್ತಿದ್ದಾರೆ.

## ಭಾಗ ೩

ಸಹಕಾರದ ಭವಿಷ್ಯದ ಬಗ್ಗೆ ಮಾತನಾಡಬೇಕಾದ ಈ ಭಾಗದಲ್ಲಿ ನಾನು ಹೈನುಗಾರಿಕೆ ಕ್ಷೇತ್ರದಲ್ಲಿನ ಮೂರು ಉದಾಹರಣೆಗಳನ್ನು ಚರ್ಚಿಸಿ ಸಹಕಾರ ಸಂಘಗಳ ಸಹಕಾರ ಕ್ಷೇತ್ರದ ತಲ್ಲಣಗಳನ್ನೂ ಅದರ ಪ್ರಗತಿ ಮತ್ತು ಗೆಲುವಿನಲ್ಲಿ ಇರಬಹುದಾದ ಆತಂಕಗಳನ್ನೂ ಹಂಚಿಕೊಳ್ಳುತ್ತೇನೆ. ಇದರ ಅರ್ಥ ಸಹಕಾರ ಕ್ಷೇತ್ರದ ಬಗ್ಗೆ ನಾನು ಆಶಾವಾದ ವ್ಯಕ್ತಪಡಿಸುತ್ತಿಲ್ಲ ಎಂದೇನೂ ಅಲ್ಲ. ಆದರೆ ಬೆಳವಣಿಗೆಯ ಭರಾಟೆಯಲ್ಲಿ ಸಹಕಾರ ಕ್ಷೇತ್ರವು ವಹಿಸಬೇಕಾದ ಎಚ್ಚರವನ್ನು ಎತ್ತಿತೋರಿಸಲು ಈ ಉದಾಹರಣೆಗಳನ್ನು ಚರ್ಚಿಸುತ್ತಿದ್ದೇನೆ ಅಷ್ಟೆ.

ಮೊದಲನೆಯದಾಗಿ, ಆಂಧ್ರಪ್ರದೇಶದಲ್ಲಿದ್ದ ಸಹಕಾರಿ ಡೈರಿಯೊಂದರ ಬಗ್ಗೆ ಮಾತನಾಡುತ್ತೇನೆ. 'ವಿಜಯಾ' ಹಸರಿನಡಿಯಲ್ಲಿ ಮಾರಾಟವಾಗುತ್ತಿದ್ದ ಆ ರಾಜ್ಯದ ಸಹಕಾರೀ ಹೈನುಗಾರಿಕೆಯ ಪದಾರ್ಥಗಳಿಗೆ ದೇಶದಲ್ಲಿಯೇ ದೊಡ್ಡ ಮಾರುಕಟ್ಟೆ ಒಂದೊಮ್ಮೆ ಇತ್ತು. ಅಮುಲ್ ನಂತರ ವಿಜಯಾ ಅತೀದೊಡ್ಡ ಅತೀ ಪ್ರಮುಖ ಹೆಸರಾಗಿತ್ತು. ಈ ವ್ಯವಸ್ಥೆಯಲ್ಲಿ ಒಂದು ಮುಖ್ಯ ಪಾಲು ಚಿತ್ತೂರಿನ ಸಹಕಾರ ಮಂಡಲಿಯ ಪಾತ್ರವಾಗಿತ್ತು.

ಚಿತ್ತೂರಿನ ಸಹಜ ಮಾರುಕಟ್ಟೆಯೆಂದರೆ ಒಂದೆಡೆ ಸಮೀಪದ ನಗರಗಳಾದ ಬೆಂಗಳೂರು ಮತ್ತು ಚೆನ್ನೈ ಮತ್ತೊಂದೆಡೆ. ಇದರ ಜೊತೆಗೆ ತಿರುಪತಿಯ ದೇವಸ್ಥಾನದ ಪ್ರಸಾದಕ್ಕೆ ತುಪ್ಪವನ್ನೂ ಈ ಸಹಕಾರಿ ಡೈರಿಯೇ ಸರಬರಾಜು ಮಾಡುತ್ತಿತ್ತು.

ಹೀಗೆ ಅತ್ಯಂತ ಯಶಸ್ವಿಯಾಗಿದ್ದ ಈ ಸಹಕಾರಿ ಮಂಡಲಿ ಹೇಳಹೆಸರಿಲ್ಲದೇ ಕುಸಿಯಿತು. ಇವರಲ್ಲಿ ಸ್ವಲ್ಪಮಟ್ಟಿಗೆ ರಾಜಕೀಯ ವಶೀಲಿಯ ವೈಖರಿ ಇತ್ಯಾದರೂ

ಆ ವಶೀಲಿ ಇಲ್ಲದೆಯೇ ಯಾವುದೇ ಖಾಸಗೀ ಸಂಸ್ಥೆಯೂ ಇದೇ ದಾರಿಯನ್ನು ಕ್ರಮಿಸಿ ಸಹಕಾರ ಮಂಡಲಿಯನ್ನು ಸುಲಭವಾಗಿ ಕೆಡವಬಹುದು.

ಚಿತ್ತೂರಿನಲ್ಲಿ ಆದದ್ದಿಷ್ಟು – ಹೆರಿಟೇಜ್ ಎನ್ನುವ ಖಾಸಗಿ ಸಂಸ್ಥೆಯು ಮೊದಲಿಗೆ ಚಿತ್ತೂರು ಡೈರಿಯ ಹಾಲು ಸಂಗ್ರಹಣೆ ಮಾಡುತ್ತಿದ್ದ ಉದ್ಯೋಗಿಗಳನ್ನು ತನ್ನ ಕಡೆಗೆ ಮಾಡಿಕೊಂಡು ಅವರಿಗೆ ನೌಕರಿಯನ್ನು ನೀಡಿತು. ಅವರಿಗಿದ್ದ ಸ್ಥಳೀಯ ಜ್ಞಾನ ಮತ್ತು ಜನಸಂಪರ್ಕವನ್ನು ಉಪಯೋಗಿಸಿ, ಸಹಕಾರಿ ಡೈರಿ ಹಾಲನ್ನು ಶೇಖರಿಸುತ್ತಿದ್ದ ಜಾಗಗಳಿಂದ, ಅದೇ ರೈತರಿಂದ ಹಾಲನ್ನು ಕೊಳ್ಳುವ ಪ್ರಕ್ರಿಯೆ ಪ್ರಾರಂಭಿಸಿತು. ಅಲ್ಲಿಂದ ಶೇಖರಿಸುವ ಹಾಲಿಗೆ ತುಸು ಹೆಚ್ಚು ಬೆಲೆಯನ್ನೂ ಆ ಡೈರಿ ನಿಡುತ್ತಿತ್ತೆನ್ನಿ. ಆದರೆ ಇಷ್ಟು ಮಾತ್ರವೇ ಸಹಕಾರ ಮಂಡಲಿಯನ್ನು ಮುರಿಯಲು ಸಾಕಿರಲಿಲ್ಲ. ಅನೇಕ ವರ್ಷಗಳಿಂದ ಸಹಕಾರಿ ಡೈರಿಗೆ ಹಾಲು ಸರಬರಾಜು ಮಾಡುತ್ತಿದ್ದ ರೈತರು ಸಹಕಾರಿ ಮಂಡಲಿಯನ್ನು ಬಿಟ್ಟುಬರಲು ಇನ್ನೂ ಬಲವಾದ ಕಾರಣವು ಬೇಕಿತ್ತು.

ಸಹಕಾರಿ ಸಂಘಗಳು ಆರ್ಥಿಕವಾಗಿ ಕುಂಠಿತಗೊಂಡರೆ, ರೈತರಿಗೆ ಸಮಯಕ್ಕೆ ಸರಿಯಾಗಿ ಹಾಲಿಗೆ ಖರೀದಿಯ ದುಡ್ಡನ್ನು ಪಾವತಿಮಾಡದಿದ್ದರೆ ಸಹಕಾರ ಮಂಡಲಿಯ ಬೆನ್ನೆಲುಬನ್ನು ಮುರಿದಂತೆಯೇ ಆಗುತ್ತಿತ್ತು. ಇದು ಆದದ್ದು ಎರಡು ಕಾರಣಗಳ ಮೂಲಕ. (ಇದಕ್ಕೆ ಹೆರಿಟೇಜಿನ ರಾಜಕೀಯ ವಶೀಲಿಯೇ ಕಾರಣವೆಂದು ನಿಖರವಾಗಿ ಹೇಳಲಾಗುವುದಿಲ್ಲ. ಆದರೂ ಸಂದರ್ಭವನ್ನು ಕಂಡಾಗ ಅದನ್ನು ಅಲ್ಲಗಳೆಯುವುದು ಕಷ್ಟವಾಗುತ್ತದೆ.)

ಒಂದು, ತಿರುಪತಿಯಿಂದ ಆಗುತ್ತಿದ್ದ ತುಪ್ಪದ ಖರೀದಿ ಇದ್ದಕ್ಕಿದ್ದಂತೆ ನಿಂತುಬಿಟ್ಟಿತು. ಡೈರಿ ಕಳಿಸಿದ ತುಪ್ಪದ ಗುಣಮಟ್ಟ ಸರಿಯಿಲ್ಲವೆಂದು ಮಂಡಲಿಗೆ ಕೊಡಬೇಕಿದ್ದ ಪಾವತಿಯನ್ನು ನಿಲ್ಲಿಸಲಾಯಿತು. ತದನಂತರ ಹಾಲನ್ನು ಬೆಂಗಳೂರಿನಲ್ಲಿ ಅಥವಾ ಚೆನ್ನೈನಲ್ಲಿ ಮಾರಾಟ ಮಾಡಬಾರದೆಂದು ಅದನ್ನು ಹೈದರಾಬಾದಿಗೇ ಕಳುಹಿಸಬೇಕೆಂದು ಮಹಾಮಂಡಲಿಯಿಂದ ಆದೇಶವೂ ಬಂತು. ಆ ಹಣದ ಪಾವತಿಯೂ ತಡವಾಯಿತು. ಹೀಗಾಗಿ ಹಾಲು ಸರಬರಾಜು ಮಾಡಿದ ಉತ್ಪಾದಕರಿಗೆ ಸಮಯಕ್ಕೆ ಸರಿಯಾಗಿ ಮಂಡಲಿಯು ಹಣವನ್ನು ಪಾವತಿ ಮಾಡಲಾರದ ಪರಿಸ್ಥಿತಿ ಉಂಟಾಯಿತು. ಸಹಕಾರಿ ಮಂಡಲಿ ಕುಸಿಯಲು ಇಷ್ಟು ಸಾಕಾಗಿತ್ತು.

ನನ್ನ ಎರಡನೆಯ ಉದಾಹರಣೆ ನಮ್ಮ ರಾಜ್ಯದ್ದೇ ಆದ ನಂದಿನಿಗೆ ಸಂಬಂಧಿಸಿದ್ದು. ಈ ಹಿಂದೆ ಕರ್ನಾಟಕ ಸರಕಾರವು ಹೈನುಗಾರಿಕೆಯಲ್ಲಿ ತೊಡಗಿರುವ ರೈತರಿಗೆ ಸಹಾಯವಾಗಲೆಂದು ಹಾಲಿನ ಒಂದು ಲೀಟರಿಗೆ ಎರಡು ರೂಪಾಯಿ ಅಧಿಕ ದರವನ್ನು ಕೊಡುವ ಯೋಜನೆಯನ್ನು ಜಾರಿಗೊಳಿಸಿತ್ತು. ಈಗ ಸರಕಾರ ಅದನ್ನು



ನಾಲ್ಕು ರೂಪಾಯಿಗಳಿಗೆ ಏರಿಸಿದೆ. ಇದರಿಂದ ಮಹಾಮಂಡಳಿಗೆ/ಸಹಕಾರಕ್ಕೆ ತುಂಬಲಾರದ ನಷ್ಟವಾಗುತ್ತದೆ. ಮೂಲತಃ ಗ್ರಾಹಕರಿಂದ ಪಡೆಯುವ ಬೆಲೆಯನ್ನು ಏರಿಸಲು ಪರವಾನಗಿ ನೀಡದೆ ರೈತರಿಗೆ ಈ ದುಡ್ಡನ್ನು ನೇರವಾಗಿ ಕೊಡುವುದರಿಂದ ಮಹಾಮಂಡಳಿಯ ಆದಾಯಕ್ಕೆ ಕತ್ತರಿ ಬಿದ್ದಂತಾಗಿರುವುದಲ್ಲದೆ ಈ ಆಮಿಷದಿಂದಾಗಿ ಇತರೆಡೆಗೆ ಸರಬರಾಜಾಗುತ್ತಿದ್ದ ಹಾಲೂ ಮಹಾಮಂಡಳಿಗೆ ಬಂದು ಬೀಳುತ್ತದೆ. ಅದನ್ನು ದಾಸ್ತಾನುಮಾಡುವ, ಪರಿಷ್ಕರಿಸುವ ಕ್ಷಮತೆ ಮಹಾಮಂಡಳಿಗೆ ಇಲ್ಲ. ಸಾಲದ್ದಕ್ಕೆ ಹೆಚ್ಚಿನ ಹಾಲಿನ ಸಂಗ್ರಹಣೆ ಮತ್ತು ಮಾರಾಟದ ಬೆಲೆಯ ಮೇಲಿನ ಕಡಿವಾಣದಿಂದ ಮಹಾಮಂಡಳಿಗೆ ನಷ್ಟ ಉಂಟಾಗಿದ್ದು ಅದು ಹಾಗೆಯೆ ಬೆಳೆಯಲಿದೆ. ಮುಂದೆ ರೈತರಿಗೆ ಹಾಲಿಗೆ ಹಣಕೊಡಲೂ ಮಹಾಮಂಡಳಿಗೆ ತೊಂದರೆಯಾಗಬಹುದು.

ಇದರಿಂದ ತಕ್ಷಣಕ್ಕೆ ಹೆಚ್ಚಿನ ಬೆಲೆಯನ್ನು ರೈತರು ಪಡೆಯಬಹುದಾದರೂ ಮಹಾಮಂಡಳಿಯು ಕುಸಿಯುತ್ತಿರುವುದನ್ನು ನಾವು ಕಾಣಬಹುದು. ಹೀಗಾಗಿ ಸಹಕಾರಕ್ಕೆ ಹೊರಗಿನ ಪೈಪೋಟಿ ಪಿತೂರಿಗಳಿಂದಲೇ ತೊಂದರೆಯಾಗಬೇಕು ಎಂದೇನೂ ಇಲ್ಲ. ಒಮ್ಮೊಮ್ಮೆ ಸರಕಾರದ ಕೃಪಾದೃಷ್ಟಿಯೂ ಸಹಕಾರಕ್ಕೆ ಮಾರಕವಾಗಬಹುದು. ಹೀಗಾಗಿಯೇ ಸಹಕಾರ ಸಂಸ್ಥೆಗಳು ಜನರಿಗೆ ಒಳಿತುಮಾಡುವ ಸಂಸ್ಥೆಗಳೆಂಬ ಅಭಿಪ್ರಾಯವನ್ನು ಬದಿಗಿಟ್ಟು ಅವುಗಳನ್ನು ವ್ಯಾಪಾರೀ ಸಂಸ್ಥೆಗಳೆಂದೂ ಆ ಸಂಸ್ಥೆಗಳಿಗೆ ಯಾವ ವಿಶೇಷ ಸವಲತ್ತಿನ ಅವಶ್ಯಕತೆಯಿಲ್ಲವೆಂದೂ ಮನಗಂಡರೆ ಸಹಕಾರ ವ್ಯವಸ್ಥೆ ತನ್ನ ಭವಿಷ್ಯವನ್ನು ತಾನೇ ಕಂಡುಕೊಳ್ಳುತ್ತದೆ.

ನನ್ನ ಮೂರನೆಯ ಉದಾಹರಣೆಯೂ ಹಾಲಿಗೆ ಸಂಬಂಧಿಸಿದ್ದೇ. ಇದು ಗುಜರಾತ್‌ನ ಅಮುಲ್ ಸಂಸ್ಥೆ ಕೈಗೊಂಡಿರುವ ಬೆಳವಣಿಗೆಯಿಂದ ಉಂಟಾಗುವ ತೊಡಕು. ಈ ತೊಡಕು ಅದರ ಯಶಸ್ಸಿನಿಂದಲೇ ಉಂಟಾಗುತ್ತಿದೆ ಎನ್ನುವುದನ್ನು ನಾವು ಮನಗಾಣಬೇಕು.

ಈಗಿತ್ತಲಾಗಿ ಕಳೆದ ಎಂಟು ವರ್ಷಗಳಿಂದ ಅಮುಲ್ ಸಂಸ್ಥೆ ತ್ವರಿತಗತಿಯಲ್ಲಿ ತನ್ನ ವ್ಯಾಪಾರವನ್ನು ಬೆಳೆಸಿಕೊಳ್ಳುತ್ತಾ ಮುಂದುವರಿದಿದೆ. ಇದರ ಬೆಳವಣಿಗೆ ನಮಗೆ ಎರಡು ರೀತಿಯ ಸವಾಲುಗಳನ್ನು ಒಡ್ಡಿದೆ. ಮೊದಲನೆಯದು, ಈ ಹೆಚ್ಚಿನ ಬೆಳವಣಿಗೆ ರಾಜ್ಯದ ಹೊರಗಿನಿಂದ, ಸದಸ್ಯರಲ್ಲದವರಿಂದ ಹಾಲನ್ನು ಶೇಖರಿಸುವುದರಿಂದ ಆಗಿದೆ. ಸದಸ್ಯರಲ್ಲದವರಿಂದ, ಹೊರಗಿನವರಿಂದ ಹೆಚ್ಚೆಚ್ಚು ಲಾಭ ಬಂದಾಗ, ಅದು ಸಹಕಾರಿ ಸೂತ್ರದಿಂದ ದೂರ, ಬಂಡವಾಳಮೂಲವಾದ ವ್ಯಾಪಾರಿ ಸಂಸ್ಥೆಯತ್ತ ಆ ಸಂಸ್ಥೆಯನ್ನು ಕೊಂಡೊಯ್ದುಬಿಡುತ್ತದೆ. ಸಹಕಾರದ ಅವನತಿಯ ಮೊದಲ ಲಕ್ಷಣಗಳು ಇಲ್ಲಿವೆ.

ಎರಡನೆಯದಾಗಿ, ಅಮುಲ್ ಬೆಳೆಯುತ್ತಿರುವ ಗತಿಯ ವೇಗದಿಂದಾಗಿ ಆ ಸಂಸ್ಥೆ ಸ್ಥಳೀಯ ಮಾರುಕಟ್ಟೆಯನ್ನಲ್ಲದೆ, ದೂರದ ವಿದೇಶೀ ಮಾರುಕಟ್ಟೆಗಳಿಗೂ ಹಾಲಿನ ಪದಾರ್ಥಗಳನ್ನು ಸರಬರಾಜು ಮಾಡುತ್ತಿದೆ. ಇದರಿಂದಾಗಿ ಆ ಮಾರುಕಟ್ಟೆಗಳ ಅಂತರರಾಷ್ಟ್ರೀಯ ಮಾನದಂಡಗಳಿಗೆ ಒಗ್ಗಿ ಈ ಸಂಸ್ಥೆ ಪದಾರ್ಥಗಳನ್ನು ಸರಬರಾಜು ಮಾಡಬೇಕು. ಆ ಮಾರುಕಟ್ಟೆಯ ಗುಣಮಟ್ಟದ ಮಾನದಂಡವನ್ನು ಕಾಪಾಡಬೇಕಿದ್ದರೆ ಹಾಲು ಕರೆಯುವ ಸಮಯದಿಂದಲೇ ಶುದ್ಧವಾದ ಕ್ರಮಬದ್ಧವಾದ ಅಭ್ಯಾಸಗಳನ್ನೂ ಮಾಡಬೇಕು. ಸ್ಥಳೀಯ ಶುದ್ಧೀಕೃತ ಹಾಲಿನ ಉತ್ಪಾದನೆ ಹತ್ತಾರು ದನಗಳಿರುವ ದೊಡ್ಡ ರೈತರಿಂದ ಮಾತ್ರ ಸಾಧ್ಯ. ಹೀಗೆಯೆ ಅಮುಲ್ ಸಣ್ಣ ರೈತರಿಂದ ಕಾಲಕ್ರಮೇಣ ದೂರವಾಗಿ ಬಿಡುವ ಸಾಧ್ಯತೆಯೂ ನಮಗೆ ಕಾಣಿಸುತ್ತಿದೆ.

ಸಹಕಾರ ಎನ್ನುವುದು ಮಾರುಕಟ್ಟೆಯ ನಿಯಮವನ್ನು ಪ್ರಶ್ನಿಸುತ್ತಲೇ ಬಂದ ವ್ಯಾಪಾರಿ ವ್ಯವಸ್ಥೆಯಾದರೂ ಅದು ಬೆಳೆದು ದೊಡ್ಡದಾಗುತ್ತಾ ಹೋದಂತೆ ಸಹಜವಾಗಿಯೇ ಪರಸ್ಪರತೆಯ ಸೂತ್ರ-ಗುಣಗಳನ್ನು ಕಳೆದುಕೊಳ್ಳುತ್ತದೆ. ಆಗ ಅದು ಇತರ ಸಂಸ್ಥೆಗಳಂತೆಯೇ ಆಗಿಬಿಡುತ್ತದೆ. ಹಾಗಾದಾಗ ಅದಕ್ಕೂ ಮಿಕ್ಕ ವ್ಯಾಪಾರೀ ಸಂಸ್ಥೆಗಳಿಗೂ ವ್ಯತ್ಯಾಸ ಕಾಣದಾಗುತ್ತದೆ. ಅಲ್ಲಿಗೆ ಸಹಕಾರದ ಸಾಫಲ್ಯತೆ ಮುಗಿದಂತೆಯೇ. ಅಂದರೆ ತುಂಬ ಸಫಲವಾಗಿ ಬೆಳೆದು ಮಾರುಕಟ್ಟೆಯಲ್ಲಿ ಅಲ್ಲೋಲ ಕಲ್ಲೋಲವೆಬ್ಬಿಸಿ ಮಾರುಕಟ್ಟೆಯನ್ನು ಮತ್ತೊಂದು ಹದಕ್ಕೆ ಕರೆದೊಯ್ಯುವ ಸಫಲ ಸಹಕಾರಿ ಸಂಸ್ಥೆಗಳು -- ಬೆಳೆಬೆಳೆದು -- ತಮ್ಮ 'ಸಹಕಾರಿ' ಲಕ್ಷಣಗಳನ್ನು ಕಳೆದುಕೊಳ್ಳುತ್ತವೆ. ಇದು ಸಹಜ ಕಾಲಚಕ್ರ ನಿಯಮ. ಪುನರಪಿ ಜನನಂ ಪುನರಪಿ ಮರಣಂ ಎಂಬ ಮಾತು ಸಹಕಾರಕ್ಕೆ ಸಂದಷ್ಟು ಇನ್ನಾವ ರೀತಿಯ ಸಂಸ್ಥೆಗಳಿಗೂ ವರ್ತಿಸುವುದಿಲ್ಲವೇನೋ.

ಇಂದು ಸಂಜೆ ನನ್ನನ್ನು ಇಲ್ಲಿಗೆ ಕರೆಯಿಸಿ ನನಗೆ ಇಷ್ಟು ಮಾತುಗಳನ್ನು ಆಡುವ ಅವಕಾಶ ನೀಡಿದ ನೀನಾಸಮ್ ಸಂಸ್ಥೆಗೆ ಕೃತಜ್ಞತೆಗಳನ್ನು ಹೇಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ. ಧನ್ಯವಾದಗಳು.

# ಸಹಕಾರ ಚಳವಳಿ: ಒಂದು ಪರಿಚಯ

ಎಂ.ಎಸ್. ಶ್ರೀರಾಮ್

*ಹಿಂದಿನ ಪುಟಗಳಲ್ಲಿ ಪ್ರಕಟವಾದ ಶ್ರೀರಾಮ್ ಅವರ ಉಪನ್ಯಾಸಕ್ಕೆ ಪೂರಕವಾಗಿ, ಅವರು ಸಹಕಾರ ಚಳುವಳಿಯ ಕುರಿತು ಬರೆಯುತ್ತಿರುವ ಪುಸ್ತಕವೊಂದರ ಕೆಲವು ಭಾಗಗಳನ್ನು ಇಲ್ಲಿ ಆಯ್ದು ಕೊಡಲಾಗುತ್ತಿದೆ.*

## ಮೊದಲ ಮಾತು

ಈ ಜಗತ್ತಿನಲ್ಲಿ ಆರ್ಥಿಕ ಚಟುವಟಿಕೆಗಳನ್ನು ಕೈಗೊಳ್ಳಲು ಅನೇಕ ರೀತಿಯ ಸಂಸ್ಥೆಗಳಿವೆ. ಈ ಸಂಸ್ಥೆಗಳನ್ನು ವಿವಿಧ ಕಾಯಿದೆಗಳನ್ವಯ ನಿರ್ಮಿಸಿ ನಡೆಯಿಸಲಾಗುತ್ತಿದೆ. ಹಾಗೂ ಒಂದೊಂದು ರೀತಿಯ ಸಂಸ್ಥೆಗೂ ತನ್ನದೇ ಆದ ಕೆಲವು ಗುಣಲಕ್ಷಣಗಳಿವೆ. ವ್ಯಾಪಾರೀ ಸಂಸ್ಥೆಗಳನ್ನು ಏಕಸ್ವಾಮ್ಯ/ಭಾಗಸ್ವಾಮ್ಯ ಪದ್ಧತಿಯಲ್ಲಿಯೋ ಕಂಪನಿಯ ಪದ್ಧತಿಯಲ್ಲಿಯೋ ಸಾಮಾನ್ಯತಃ ಏರ್ಪಾಟುಮಾಡಲಾಗಿದೆ. ಪರಸ್ಪರತೆಯ ಸೂತ್ರದಾಧಾರದಲ್ಲಿ ವ್ಯಾಪಾರ ನಡೆಯಿಸುವವರು ಸಹಕಾರಿ ಕಾಯಿದೆಯನ್ವಯ ವ್ಯಾಪಾರವನ್ನು ಮಾಡಬಹುದು. ಅನುದಾನ–ಒಳಿತು–ಸಮಾಜ ಸೇವೆಯ ಕ್ಷೇತ್ರದಲ್ಲಿ ಕೆಲಸಮಾಡುವ ಸಂಸ್ಥೆಗಳಿಗೆ ಒಗ್ಗುವಂತೆ ಪ್ರತ್ಯೇಕ ಸಂಸ್ಥಾ ವಿಧಾನಗಳಿವೆ. ಸಹಕಾರವನ್ನು ನಾವು ಅರ್ಥಮಾಡಿಕೊಳ್ಳುವ ಮೊದಲು, ಸಂಸ್ಥೆಗಳು ಹೇಗೆ ನಡೆಯುತ್ತವೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕಾದದ್ದು ಮುಖ್ಯ.

ಸಂಸ್ಥೆಗಳು ವ್ಯಕ್ತಿಗಳಿಗಿಂತ ಭಿನ್ನವಾಗಿರುತ್ತವೆ. ಅಷ್ಟೇ ಅಲ್ಲ, ಅವು ಆಯಾ ಸಂಸ್ಥೆಗಳನ್ನು ಹುಟ್ಟುಹಾಕಿದ ಜನರಿಗಿಂತಲೂ ಭಿನ್ನವಾಗಿರುತ್ತವೆ. ಆರ್ಥಿಕ ಜಗತ್ತಿನಲ್ಲಿ ಇದಕ್ಕೊಂದು ಪ್ರತ್ಯೇಕ ಅಸ್ತಿತ್ವವನ್ನು ನೀಡಲಾಗಿದೆ. ಈ ಅಸ್ತಿತ್ವದನ್ವಯ ಸಂಸ್ಥೆಗಳೂ ಕೊಳ್ಳುವ, ಮಾರಾಟಮಾಡುವ ವ್ಯಾಪಾರವನ್ನು ಮಾಡಬಹುದು, ಆಸ್ತಿಯನ್ನು ಖರೀದಿಸಬಹುದು, ಹಾಗೂ ಕಾನೂನಿಗೆ ಬದ್ಧವಾಗುವಂತಹ ಒಪ್ಪಂದಗಳಿಗೂ ತಮ್ಮನ್ನು ಒಡ್ಡಿಕೊಳ್ಳಬಹುದು. ಅರ್ಥಾತ್ ಈ ಸಂಸ್ಥೆಗಳಿಗೆ ಪ್ರತ್ಯೇಕವಾದ ಅಸ್ತಿತ್ವವೂ ಜೀವನವೂ ಇದೆ. ಇದೂ ಸಾಲದೆಂಬಂತೆ ಅನೇಕ ವ್ಯಾಪಾರೀ ಸಂಸ್ಥೆಗಳು ನಿಯಮಿತ ಬಾಧ್ಯತೆಯ ಆಧಾರದಲ್ಲಿ ರೂಪಿಸಲ್ಪಟ್ಟಿವೆ. ಇದರರ್ಥ ಯಾವುದೇ ಸಂಸ್ಥೆ ಕಾರಣಾಂತರಗಳಿಂದ ದಿವಾಳಿ ತೆಗೆದರೆ ಅದರ ಮಾಲೀಕರ ಬಾಧ್ಯತೆ ಅಲ್ಲಿ

ಹೂಡಿರುವ ಇಡುವಳಿಗೆ ಮಾತ್ರ ಸೀಮಿತವಾಗಿದ್ದು ಮಾಲೀಕರ ಖಾಸಗೀ ಆಸ್ತಿಯನ್ನು ವ್ಯಾಪಾರಕ್ಕೆ ಒಡ್ಡಲು ಸಾಧ್ಯವಿಲ್ಲದ ಒಂದು ಕೃತಕ ಗೋಡೆಯ ನಿರ್ಮಿತಿಯನ್ನು ನಾವು ಕಾಣಬಹುದು.

ಒಂದಿಷ್ಟು ಜನ ಸೇರಿ, ವ್ಯಾಪಾರ ನಡೆಸಲೆಂದೇ ಈ ರೀತಿಯ ಸಂಸ್ಥೆಯನ್ನು ಹುಟ್ಟುಹಾಕಬಹುದು. ಈ ರೀತಿಯ ಸಂಸ್ಥೆಯನ್ನು ಹುಟ್ಟುಹಾಕುವ ಜನರಲ್ಲಿ ಒಂದು ಸಾಮಾನ್ಯ ಅಂಶವಿರುತ್ತದೆ. ಅದೆಂದರೆ ಎಲ್ಲರೂ ವ್ಯಾಪಾರದಲ್ಲಿ ಹೂಡಿಕೆ ಯನ್ನು ತೊಡಗಿಸುತ್ತಾರೆ. ಈ ಹೂಡಿಕೆದಾರರು ಕಾಲಕ್ರಮೇಣ ಹೊಸ ಹೂಡಿಕೆದಾರರನ್ನು ಸೇರಿಸಕೊಳ್ಳಬಹುದು. ಇವರೆಲ್ಲರೂ ಸಂಸ್ಥೆಯ ಮಾಲೀಕರು. ಅಷ್ಟೇ ಅಲ್ಲ, ಇವರೆಲ್ಲರಿಗೂ ಹೂಡಿದ ಬಂಡವಾಳಕ್ಕನುಗುಣವಾಗಿ ಸಂಸ್ಥೆಯ ವ್ಯಾಪಾರೀ ಫಲಿತವನ್ನು ಅನುಭವಿಸುವ ಹಕ್ಕೂ ಇರುತ್ತದೆ.

### ಸಹಕಾರ: ಬಂಡವಾಳವಿಲ್ಲದ ಬಡಾಯಿ

'ನಮಗೆ ನಮ್ಮದೇ ಬ್ಯಾಂಕೊಂದು ಯಾಕಿರಬಾರದು?' ಎಂದು ಪೂರಿಬಜಾರ್‌ನಲ್ಲಿ ಉಪಯೋಗಿಸಿದ ಬಟ್ಟೆಯ ವ್ಯಾಪಾರ ಮಾಡುವ ಚಂದಾಬೇನ್ ಕೇಳಿದಳು. 'ಯಾಕೆಂದರೆ, ನಮ್ಮ ಬಳಿ ಹಣವಿಲ್ಲ. ಬ್ಯಾಂಕನ್ನು ಸ್ಥಾಪಿಸಲು ತುಂಬಾ ತುಂಬಾ ಬಂಡವಾಳ ಬೇಕು' ಎಂದು ನಾನು ಉತ್ತರಿಸಿದೆ. ಅದಕ್ಕೆ ಆಕೆ ಹೇಳಿದ ಮಾತು ಇಂತಿತ್ತು: 'ನಾವು ಬಡವರಿರಬಹುದು. ಆದರೆ ನಾವೆಷ್ಟೊಂದು ಜನ ಇದ್ದೇವೆ!' ಈ ಒಂದು ಮಾತೇ ಸಾಕಾಗಿತ್ತು ಇಳಾ ಭಟ್ ಅವರಿಗೆ ಅಹಮದಾಬಾದಿನಲ್ಲಿ ಸಹಕಾರಿ ಬ್ಯಾಂಕೊಂದನ್ನು ತೆರೆಯಲು. ಇಂದು ಆ ಬ್ಯಾಂಕು ರೂ. 175 ಕೋಟಿಗಳ ವ್ಯಾಪಾರ ಮಾಡುತ್ತಿದೆ.

ಬಂಡವಾಳವೇ ಮೂಲವಾದ ವ್ಯಾಪಾರವು ಬಂಡವಾಳ ಹೂಡಿದವರಿಗೆ ಲಾಭವನ್ನು ಹಚ್ಚಿಸುವ ಸೂತ್ರಗಳಾಧಾರದ ಮೇಲೆ ರೂಪಿಸಲ್ಪಟ್ಟಿದೆ. ಅಂದರೆ ವ್ಯಾಪಾರದಲ್ಲಿ ಉಪಯೋಗಿಸುವ ಸಂಪನ್ಮೂಲಗಳಿಗಾಗುವ ಖರ್ಚೆಲ್ಲಾ ಕಳೆದ ಮೇಲೆ ಉಳಿಯುವ ಹಣ ಅಷ್ಟೂ ಬಂಡವಾಳ ಹೂಡಿದವರಿಗೆ ಸಲ್ಲುತ್ತದೆ. ಮಾಲು ಸರಬರಾಜು ಮಾಡಿದವರಿಗೆ ಒಂದು ಪೂರ್ವನಿಗದಿತ ಒಪ್ಪಂದದನುಸಾರವಾಗಿ ಅದರ ಬೆಲೆ ತೆರುತ್ತೇವೆ, ನೌಕರರಿಗೆ ನಿಗದಿತ ಸಂಬಳಗಳನ್ನು ನೀಡುತ್ತೇವೆ, ಜಾಗಕ್ಕೆ ನಿಗದಿತ ಬಾಡಿಗೆಯನ್ನು ಕಟ್ಟುತ್ತೇವೆ. ಈ ರೀತಿ ನಿಗದಿತ ಶುಲ್ಕ/ಮೊಬಲಗುಗಳನ್ನೆಲ್ಲ ಕೊಟ್ಟನಂತರ ಇರುವ 'ಉಳಿಕೆ' ಹಣವು ಹೂಡಿಕೆದಾರರಿಗೆ ಸಲ್ಲುತ್ತದೆ.

ಸಾಮಾನ್ಯವಾಗಿ ಸಂಸ್ಥೆಗಳು ಈ 'ಉಳಿಕೆ'ಯನ್ನು ಹೆಚ್ಚಿಸುವುದನ್ನೇ ಉದ್ದೇಶವಾಗಿಟ್ಟು ವ್ಯಾಪಾರವನ್ನು ನಡೆಸುತ್ತವೆ. ಹೂಡಿಕೆದಾರರಿಗೂ ಈ ಉಳಿಕೆ ಹೆಚ್ಚಾದಷ್ಟೂ ತಮ್ಮ ಫಾಯಿದೆ ಜಾಸ್ತಿಯಾಗುವುದರಿಂದ ಆ ನಿಟ್ಟಿನಲ್ಲಿಯೇ ತಮ್ಮ ದೃಷ್ಟಿಯನ್ನು ಕೇಂದ್ರೀಕರಿಸಿಟ್ಟಿರುತ್ತಾರೆ. ಇದರಲ್ಲೊಂದು ಸ್ವಯಂಪ್ರೇರಣೆಯಿದೆ. ಹೆಚ್ಚು



ದಕ್ಷತೆಯಿಂದ ವ್ಯಾಪಾರವನ್ನು ನಡೆಸಿದರೆ ಉಳಿಕೆಯೂ ಹೆಚ್ಚಾಗುತ್ತದೆ. ಇದೇ ಸಂಸ್ಥೆಯ ಅಸ್ತಿತ್ವದ ಕಾರಣವೂ ಉದ್ದೇಶವೂ ಆಗಿರುತ್ತದೆ. ಹೀಗಾಗಿ ವ್ಯಾಪಾರಿ ಸಂಸ್ಥೆಗಳಲ್ಲಿ ಯಾವಾಗಲೂ ಕೇಂದ್ರಬಿಂದು ಹೂಡಿಕೆದಾರರೇ ಆಗಿರುತ್ತಾರೆ.

ಈ ರೀತಿಯಾದ ವ್ಯಾಪಾರಿ ಸಂಸ್ಥೆಯನ್ನು ಪರಿಗಣಿಸಿದರೆ ಅದರಲ್ಲಿ ನಮಗೆ ಆರ್ಥಿಕ ಹೂಡಿಕೆಯೇ ಅತೀ ಮುಖ್ಯ, ಅದಕ್ಕೇ ಪ್ರಮುಖ ಸ್ಥಾನ ನೀಡಬೇಕೆಂಬ ನಂಬಿಕೆ ಕಾಣಿಸುತ್ತದೆ. ಒಂದು ರೀತಿಯಲ್ಲಿ ಇದು ಸಮಂಜಸವೂ ಇರಬಹುದು. ಎಷ್ಟಾದರೂ ಹಣವೊಂದಿದ್ದರೆ – ಹೂಡಿಕೆಯಿದ್ದರೆ ಮಿಕ್ಕ ಎಲ್ಲ ಸಂಪನ್ಮೂಲಗಳನ್ನೂ ಖರೀದಿಸಲು ಸಾಧ್ಯವೇ ತಾನೇ? ಇದೂ ಸಾಲದೆಂಬಂತೆ – ಬಂದ 'ಉಳಿಕೆ' ಯೆಲ್ಲವೂ – ಯಾವ ಮೇಲ್ಮಿತಿಯಿಲ್ಲದೆಯೇ ಹೂಡಿಕೆದಾರರಿಗೆ ಹೋಗುತ್ತದಾದರೂ ನಷ್ಟಕ್ಕೆ ಮಾತ್ರ ಹೂಡಿದ ಮೊಬಲಗಿನ ನಿಯಮಿತತೆಯ ಕೆಳಮಿತಿಯಿದೆ! ಹೀಗಾಗಿ ವ್ಯಾಪಾರಗಳೆಲ್ಲವೂ ಪ್ರಮುಖವಾಗಿ ಬಂಡವಾಳದ ಆಧಾರದ ಮೇಲೆಯೇ ನಿರ್ಮಿತವಾಗಿರುವುದರಲ್ಲಿ ನಮಗೆ ಯಾವ ಆಶ್ಚರ್ಯವೂ ಆಗಬಾರದು.

ಸಣ್ಣ ವ್ಯಾಪಾರಗಳು ಏಕಸ್ವಾಮ್ಯ ಅಥವಾ ಬಹುಸ್ವಾಮ್ಯ ವ್ಯಾಪಾರಗಳಾಗಿ ಏರ್ಪಾಟಾಗಿರುತ್ತವೆ. ಇವುಗಳಿಗೆ ಅನಿಯಮಿತ ಬಾಧ್ಯತೆಯಿರುತ್ತದೆ. ಅಂದರೆ, ಅಕಸ್ಮಾತ್ ವ್ಯಾಪಾರ ಕೈಕಚ್ಚಿದರೆ ಆ ನಷ್ಟವನ್ನು ತಮ್ಮ ಖಾಸಗೀ ಆಸ್ತಿಯಿಂದ ತುಂಬಿಸಬೇಕಾಗುತ್ತದೆ. ಈ ಎಲ್ಲದರಲ್ಲಿಯೂ ನಮಗೆ ಮೂಲಭೂತವಾಗಿ ಕಾಣುವುದು ಹೂಡಿಕೆ – ಅಥವಾ ಅರ್ಥರೂಪದ ಬಂಡವಾಳದ ಪ್ರಾಥಮಿಕತೆ. ಆದರೆ ವ್ಯಾಪಾರವನ್ನು ಬೇರೊಂದು ದೃಕ್ಪಥದಿಂದ ನೋಡಲು ಸಾಧ್ಯವೇ?

ಬಂಡವಾಳವೇ ಆಧಾರಸೂತ್ರ ಎನ್ನುವುದನ್ನು ಬದಲಾಯಿಸಲು ಸಾಧ್ಯವೇ? ಸಾಧ್ಯ ಎಂದು ಸಹಕಾರ ಸೂತ್ರಗಳು ನಿರೂಪಿಸಿದುವು. ಬಂಡವಾಳವನ್ನು ಕಡೆಗಣಿಸಿ ಜನರ ಸಮೂಹತ್ವಕ್ಕೆ ಒತ್ತು ನೀಡಿ ವ್ಯಾಪಾರ ಮಾಡಬಹುದು ಎನ್ನುವುದನ್ನು ಸಹಕಾರ ಕ್ಷೇತ್ರದ ಸಂಸ್ಥೆಗಳು ತೋರಿಸಿಕೊಟ್ಟವು. ಇದು ಪ್ರಾರಂಭವಾದದ್ದು 19ನೆ ಶತಮಾನದ ಇಂಗ್ಲೆಂಡಿನಲ್ಲಿ. ನಮಗೆ ಸಹಕಾರೀ ಸೂತ್ರಗಳನ್ನು ಮೊದಲಿಗೆ ನೀಡಿದ್ದು ರಾಶ್ಡೇಲ್ ಪಯೊನೀರ್ಸ್. ವ್ಯಾಪಾರಕ್ಕೆ ಹೂಡಿಕೆ ಮುಖ್ಯ, ಹೌದು. ಆದರೆ ವ್ಯಾಪಾರದ ಲಾಭಾಂಶ ಕೇವಲ ಬಂಡವಾಳದ ಕಾರಣವಾಗಿಯೇ ಬರುತ್ತದೆ ಎಂದು ಹೇಳುವುದು ಸಮರ್ಪಕವಾಗುವುದಿಲ್ಲ. ಅದಕ್ಕೆ ಬದಲಾಗಿ ವ್ಯಾಪಾರದ ಮೂಲವನ್ನು ಮಾರಾಟಕೇಂದ್ರಿತ ಮಾಡಿದರೆ? ಅರ್ಥಾತ್ – ಗ್ರಾಹಕರೆಲ್ಲರೂ ಒಂದೆಡೆ ಸೇರಿ ವ್ಯಾಪಾರದ ಮೂಲವನ್ನು ಬಂಡವಾಳದಿಂದ ಗ್ರಾಹಕತ್ವದ ಕಡೆಗೆ ತಿರುಚಿದರೆ? ಒಂದು ಮಾರಾಟ ವ್ಯವಸ್ಥೆಯಲ್ಲಿ, ಯಾರು ಹೆಚ್ಚು ಖರೀದಿ ಮಾಡುತ್ತಾರೋ ಅವರೇ ಸಂಸ್ಥೆಗೆ ಹೆಚ್ಚು ಲಾಭವನ್ನು ತಂದೊಡ್ಡುತ್ತಿದ್ದಾರೆಂಬ ಸೂತ್ರವನ್ನು ಹಿಡಿದು ಹೊರಟರೆ? ಅಂದರೆ ನೌಕರರಿಗೆ ನಿಗದಿತ ಸಂಬಳವನ್ನು ಕೊಡುವಂತೆಯೇ ಬಂಡವಾಳ ಹೂಡಿದವರಿಗೆ ಒಂದು ನಿಗದಿತ ಬಡ್ಡಿಯನ್ನು ಕೊಟ್ಟು, 'ಉಳಿಕೆ'ಯ

ಹಣವನ್ನು ಗ್ರಾಹಕರಿಗೆ – ಅವರು ಖರೀದಿ ಮಾಡಿದ ಪರಿಮಾಣದಲ್ಲಿ ಹಂಚುವಂತಾದರೆ? ಹೀಗಾದಲ್ಲಿ ವ್ಯಾಪಾರದ ಮೂಲವನ್ನು ಇಡುವಳಿಯಿಂದ ವರ್ಗಾಯಿಸಿ ಸಂಸ್ಥೆಯ ಸೇವೆಯನ್ನು ಉಪಯೋಗಿಸುವತ್ತ ತಿರುಚಿದಂತಾಗುತ್ತದೆ. ಸಹಕಾರ ಸಿದ್ಧಾಂತದ ಮೂಲ ರೂವಾರಿಗಳು ಹೀಗೆ ಬಂಡವಾಳವನ್ನು ಒಂದು ನಿಮಿತ್ತವಾಗಿ ಪರಿವರ್ತಿಸಿಬಿಟ್ಟರು. ಸೈದ್ಧಾಂತಿಕವಾಗಿ ಬಂಡವಾಳಶಾಹೀ ತತ್ವವನ್ನು ಪ್ರಶ್ನಿಸುತ್ತಾ ಬಂದಿದ್ದರೂ ವ್ಯಾಪಾರರೀತ್ಯಾ ಬಂಡವಾಳದ ಪ್ರಾಮುಖ್ಯತೆಯನ್ನು ಸಹಕಾರ ಸೂತ್ರಗಳು ಏರುಪೇರುಮಾಡಲು ಯತ್ನಿಸಿದ್ದುವು.

'ಉಳಿಕೆ'ಯನ್ನು ಹಂಚುವ ರೀತಿಯನ್ನು ಪಯೋನೀರ್ಸ್ ಮೂಲಭೂತವಾಗಿ ಬದಲಾಯಿಸಿದರು. ಇದರೊಂದಿಗೆ ಸಂಸ್ಥೆಯ ಮಾಲೀಕರು ಯಾರೆನ್ನುವ ಅರ್ಥನಿರೂಪಣೆಯೂ ಬದಲಾಯಿತು. ಸಂಸ್ಥೆಯ ಸೇವೆಯನ್ನು ಉಪಯೋಗಿಸ ಬಲ್ಲವರು ಮಾತ್ರ ಸದಸ್ಯತ್ವವನ್ನು ಪಡೆಯುವ, ಉಳಿಕೆಗೆ ಅರ್ಹರಾಗುವ ಮೂಲಕ ಅವರುಗಳೇ ಸಂಸ್ಥೆಯ ಮಾಲೀಕರೂ ಆದರು. ಸಂಸ್ಥೆಯ ಸೇವೆಯನ್ನು ಉಪಯೋಗಿಸುವ ಪರಿಮಾಣದಲ್ಲಿ 'ಉಳಿಕೆ'ಯ ಹಂಚಿಕೆಯಾಗಲಿತ್ತು. ಹೀಗಾಗಿ ಬಂಡವಾಳ ಹೂಡಿದವರಿಗೆ ಸಂಸ್ಥೆಯ ನಿರ್ವಹಣೆಯಲ್ಲಿ ಸ್ಥಾನವಿಲ್ಲದಾಯಿತು. ಈ ಪದ್ಧತಿಯ ಪ್ರಕಾರ ಬಂಡವಾಳದ ಪ್ರಾಮುಖ್ಯತೆಯನ್ನು ಕಡಿಮೆಯೇನೋ ಮಾಡಿದ್ದಾಯಿತು, ಆದರೆ ಸಂಸ್ಥೆಯ ಮೂಲ ವ್ಯಾಪಾರವೇನೆಂಬುದನ್ನು ನಿಖರವಾಗಿ ನಮೂದಿಸುವ ಅವಶ್ಯಕತೆ ಬಂದಿತು. ಆ ವ್ಯಾಪಾರವನ್ನು ನಿಖರವಾಗಿ ವ್ಯಕ್ತಪಡಿಸಿದಾಗ ಮಾತ್ರ ಸದಸ್ಯತ್ವಕ್ಕೆ ಮತ್ತು 'ಉಳಿಕೆ'ಯ ಹಂಚಿಕೆಗೆ ಅರ್ಹತೆಯನ್ನು ನಿಖರವಾಗಿ ನಮೂದುಮಾಡಬಹುದಿತ್ತು. ಸಹಜವಾಗಿಯೇ, ಈ ಸಂಸ್ಥೆಯ ನಿರ್ವಹಣಾ ಸೂತ್ರಗಳೂ ಬಂಡವಾಳಶಾಹೀ ಸೂತ್ರಗಳಿಗಿಂತ ಭಿನ್ನವಾಗಿರಬೇಕಿತ್ತು. ಬಂಡವಾಳವೇ ಮೂಲವಾದ ಪದ್ಧತಿಯಲ್ಲಿ ಹೆಚ್ಚು ಬಂಡವಾಳ ಹೂಡಿದವರಿಗೆ ನಿರ್ವಹಣೆಯಲ್ಲಿ ಹೆಚ್ಚು ಅಧಿಕಾರವಿತ್ತು. ಹೆಚ್ಚು ಬಂಡವಾಳ ಹೂಡಿದವರಿಗೆ 'ಉಳಿಕೆ'ಯೂ ಹೆಚ್ಚೇ ಸಿಗುತ್ತಿತ್ತು. ಆದರೆ ಇಲ್ಲಿ?

ಪಯೋನೀರ್ಸ್ ಯೋಚಿಸಿದ ಸಹಕಾರಿ ವ್ಯವಸ್ಥೆಯಲ್ಲಿ ಬಂಡವಾಳಕ್ಕೂ ಸೇವೆಯನ್ನುಪಯೋಗಿಸಿ ಪಡೆಯುವ ಉಳಿಕೆಯ ಪಾಲಿಗೂ ಸಂಸ್ಥೆಯಲ್ಲಿನ ನಿರ್ವಹಣಾ ಹಕ್ಕುಗಳಿಗೂ ಕೊಂಡಿಹಾಕಿ ಸರಳ ಸೂತ್ರವನ್ನು ರೂಪಿಸುವುದು ಸಾಧ್ಯವಿರಲಿಲ್ಲ. ವರ್ಷದಿಂದ ವರ್ಷಕ್ಕೆ ಸದಸ್ಯರು ಸಂಸ್ಥೆಯೊಂದಿಗೆ ಮಾಡಬಹುದಾದ ವ್ಯಾಪಾರ, ಅಥವಾ ಉಪಯೋಗಿಸಬಹುದಾದ ಸೇವೆ ಬದಲಾಗಬಹುದಿತ್ತು. ಕೆಲ ಸದಸ್ಯರು ಆ ಸೇವೆಯನ್ನು ಪಡೆಯುವ ಪರಿಸ್ಥಿತಿಯಲ್ಲಿಲ್ಲದಿರಬಹುದು. ತಾವು ಸಂಸ್ಥೆಯಿಂದ ದೂರವಾದ ಊರಿಗೆ ಸ್ಥಳಾಂತರಗೊಂಡದ್ದರಿಂದಲೋ, ತಮ್ಮ ಅವಶ್ಯಕತೆಗಳು ಕಾಲಾಂತರದಲ್ಲಿ ಬದಲಾದದ್ದರಿಂದಲೋ ಅವರಿಗೆ ಸಂಸ್ಥೆಯ ಅವಶ್ಯಕತೆ ಇಲ್ಲವಾಗಬಹುದಿತ್ತು. ಹೀಗಾಗಿ ಸಂಸ್ಥೆಯ ನಿರ್ವಹಣಾ ಸೂತ್ರದಲ್ಲಿ



ಸಂಸ್ಥೆಯ ಸೇವೆಗಳನ್ನುಪಯೋಗಿಸುವ ಹೊಸ ಸದಸ್ಯರಿಗೆ ಒಳಪ್ರವೇಶಿಸುವ ಮತ್ತು ಹಳೇ ಸದಸ್ಯರು ಬೇಕಾದರೆ ಬಿಟ್ಟು ಹೋಗಬಹುದಾದಂತಹ ಮುಕ್ತ ಸದಸ್ಯತ್ವದ ಏರ್ಪಾಟು ಮಾಡುವ ಅವಶ್ಯಕತೆಯಿತ್ತು. ಅವರುಗಳೇ ನಿರ್ವಹಣಾ ಕಾರ್ಯವನ್ನೂ ಕಾರ್ಯಕಾರಿ ಮಂಡಲಿಯ ಪದಾಧಿಕಾರವನ್ನೂ ಪಡೆಯುವಂತೆ ರೂಪಿಸಬೇಕಿತ್ತು. ಬಂಡವಾಳಶಾಹಿ ಪದ್ಧತಿಯಲ್ಲೂ ಹೂಡಿಕೆದಾರರು ಸಂಸ್ಥೆಯನ್ನು ಬಿಟ್ಟು ಹೋಗಬಹುದಾದ ತಮ್ಮ ಬಂಡವಾಳವನ್ನು ಬೇರೆಡೆಗೆ ಸ್ಥಳಾಂತರಿಸುವ ಸಾಧ್ಯತೆಯೂ ಅದಕ್ಕೇ ತಕ್ಕುದಾದ ಸದುಪಾಯವೂ ಇದೆ. ಷೇರುಪೇಟೆಯಲ್ಲಿ ತಮ್ಮ ಹೂಡಿಕೆಯನ್ನು ಕೊಳ್ಳಲು ಬೇರೊಬ್ಬರು ಸಿಗುತ್ತಾರೆ. ಸಮರ್ಥವಾಗಿ ನಡೆಯುವ ಬಂಡವಾಳಶಾಹೀ ಸಂಸ್ಥೆಗಳಿಗೂ ಷೇರು ಮಾರುಕಟ್ಟೆಗೂ ನಿಕಟವಾದ ಸಂಬಂಧವಿರುವುದನ್ನು ನಾವು ಕಂಡೇ ಇದ್ದೇವೆ. ಆದರೆ ಸಹಕಾರೀ ಸೂತ್ರಗಳನ್ನು ಹಿಡಿದು ನಡೆಯುವ ಸಂಸ್ಥೆಗಳಿಗೆ ಈ ಸವಲತ್ತುಗಳಿಲ್ಲ. ಪಯೋನೀರ್ಸ್ ರೂಪಿಸಿದ ಸೂತ್ರಗಳನುಸಾರ ಅದರ ಅವಶ್ಯಕತೆಯೂ ಇರಲಿಲ್ಲ.

ಬಂಡವಾಳಶಾಹೀ ಪದ್ಧತಿಯನ್ನು ಪ್ರಶ್ನಿಸುತ್ತ, ಆದರೆ ವ್ಯಾಪಾರವನ್ನು ಅದಕ್ಕಂಟಿರಬಹುದಾದ ಇತರೆ ಲಕ್ಷಣಗಳಾದ ಮಾರಾಟ, ಲಾಭಗಳನ್ನು ನಿರಾಕರಿಸದೆ ಈ ಸಂಸ್ಥೆಗಳು ರೂಪ ತಾಳಿದುವು.

ಬಂಡವಾಳವನ್ನೇ ಆಧಾರಸೂತ್ರವನ್ನಾಗಿಟ್ಟುಕೊಂಡು ನಡೆಯುವ ಸಂಸ್ಥೆಗಳು ಎಷ್ಟು ವ್ಯಾಪಾರ ಮಾಡಬಹುದು, ಎಷ್ಟು ದೊಡ್ಡ ಫ್ಯಾಕ್ಟರಿ ಹಾಕಬಹುದು, ಎಷ್ಟು ನೌಕರರನ್ನಿರಿಸಿಕೊಳ್ಳಬಹುದು, ಅವರಿಗೆಷ್ಟು ಸಂಬಳ ನೀಡಬಹುದು ಎಂಬಂತಹ ವಿಚಾರಗಳೆಲ್ಲವೂ ಹೂಡಬಹುದಾದ ಮೂಲಧನ ಮತ್ತು ಆ ವ್ಯಾಪಾರದಿಂದ ಆ ಮೂಲಧನದ ಮೇಲೆ ಅಪೇಕ್ಷಿಸುವ ಲಾಭದ ಮೇಲೆ ಆಧಾರಿತವಾಗಿರುತ್ತದೆ.

ಪಯೋನೀರ್ಸ್ ಅಭಿವ್ಯಕ್ತಿಸಿದ ಅಂದಿನ ವಾದಸರಣಿ ಹೀಗಿತ್ತು: ಒಂದು ಸಾವಿರ ರೂಪಾಯಿಯ ಹೂಡಿಕೆಯಿಂದ ಒಂದು ಕಿರಾಣಿಯಂಗಡಿಯನ್ನು ಪ್ರಾರಂಭಿಸಿದೆವು ಎಂದುಕೊಳ್ಳೋಣ. ಆ ಸಾವಿರ ರೂಪಾಯಿಯನ್ನು ಖರ್ಚು ಮಾಡಿ ಸಗಟಿನಲ್ಲಿ ಕಿರಾಣಿಯ ಪದಾರ್ಥಗಳನ್ನು ಕೊಂಡು ತಂದು ನೂರು ಜನರಿಗೆ ಸಾವಿರದಿನ್ನೂರು ರೂಪಾಯಿಗಳಿಗೆ ಎರಡು ದಿನಗಳಲ್ಲಿ ಮಾರಾಟ ಮಾಡಿದರೆ ಆರ್ಜಿಸಿದ ಲಾಭ ಇನ್ನೂರು ರೂಪಾಯಿಗಳು. ಈ ಲಾಭವು ಸಾವಿರ ರೂಪಾಯಿ ಹೂಡಿದವನಿಗೆ ಸಲ್ಲುತ್ತದೆ. ಬದಲಿಗೆ ಅದೇ ಮಾಲನ್ನು ಮೊದಲ ದಿನ ನೂರು ಜನರಿಗೆ ಮಾರಿ ಬಂದ ಹಣದಿಂದ ಮತ್ತೆ ಮಾಲನ್ನು ಖರೀದಿಸಿ, ಇನ್ನೂ ನೂರು ಜನರಿಗೆ ಸಾವಿರದಿನ್ನೂರಕ್ಕೆ ಮಾರಿದರೆ ಒಟ್ಟಾರೆ ಬರುವ ಲಾಭ ನಾಲ್ಕುನೂರು ರೂಪಾಯಿಗಳು. ಈ ನಾಲ್ಕುನೂರು ರೂಪಾಯಿಗಳ ಲಾಭ ಒಂದೇ ಸಾವಿರದ ಹೂಡಿಕೆಯ ಮೇಲೆ ಬಂದಿದೆಯಾದರೂ ಇನ್ನೂರು ರೂಪಾಯಿಯ ಲಾಭದಿಂದ ನಾಲ್ಕುನೂರಕ್ಕೆ ದುಪ್ಪಟ್ಟಾದದ್ದು ಗ್ರಾಹಕರು ಹೆಚ್ಚೆಚ್ಚು ಖರೀದಿಸಿದ್ದರಿಂದ.

ಹೀಗಾಗಿ ಈ ಲಾಭವು ಬಂಡವಾಳ ಹೂಡಿದವನಿಗೆ ಹೋಗಬೇಕೇ ಅಥವಾ ಗ್ರಾಹಕ ಸಮೂಹಕ್ಕೆ ಹೋಗಬೇಕೇ?

ಸಾವಿರ ರೂಪಾಯಿ ಹೂಡಿಕೆಗೇ ನಾವು ಪ್ರಾಮುಖ್ಯತೆ ಕೊಟ್ಟು ಅವನನ್ನು ಕೊಂಡಾಡುವ ಬದಲು ಖರೀದಿಸಿದ ಗ್ರಾಹಕರ ಪಾತ್ರವನ್ನು ಪರಿಶೀಲಿಸಿದರೆ, ಆ ನಾಲ್ಕುನೂರು ರೂಪಾಯಿ ಲಾಭವನ್ನಾರ್ಜಿಸಲು ಗ್ರಾಹಕರೂ ತಮ್ಮ ಯೋಗದಾನ ನೀಡಿದ್ದಾರೆ ಎನ್ನುವುದು ತಿಳಿಯುತ್ತದೆ. ಈಗ ಗ್ರಾಹಕರನ್ನೇ ಆಧಾರಸೂತ್ರವಾಗಿಸಿ ಕೊಂಡು ಹೂಡಿಕೆದಾರನಿಗೆ ಒಂದು ಪೂರ್ವ ನಿರ್ಧಾರಿತ ಮೊಬಲಗನ್ನು (ಅಂದರೆ ಸಾವಿರ ರೂಪಾಯಿಗಿಂತಿಷ್ಟು ನಿಗದಿತ ಬಡ್ಡಿಯನ್ನು) ಕೊಟ್ಟು ಇಡೀ ನಾಲ್ಕುನೂರು ರೂಪಾಯಿಗಳ ಲಾಭವನ್ನು ಗ್ರಾಹಕರೇ ಹಂಚಿಕೊಂಡರೆ?

ಅಥವಾ ಬೆಳೆಗಾರರ ಕಥೆಯನ್ನು ನೋಡೋಣ. ಬತ್ತ, ಜೋಳ, ರಾಗಿ, ಕಬ್ಬು ಬೆಳೆವ ರೈತರ ಕಾರ್ಯಸರಪಳಿ ಹೀಗಿದ್ದೀತು: ಬೆಳೆ ಬೆಳೆಯಲು ಬೇಕಾದ ಸಾಲವನ್ನು ದ್ರವ್ಯ ರೂಪದಲ್ಲಿ ಅಥವಾ ಪಕ್ಕದ ವ್ಯಾಪಾರಿಯಿಂದ ಬೀಜ, ರಸಗೊಬ್ಬರ, ಕೀಟನಾಶಕಗಳ ರೂಪದಲ್ಲಿ ಕೊಳ್ಳುವುದು. ಈ ಸಾಲಕ್ಕೆ ಸರಾಸರಿ ತಿಂಗಳಿಗೆ ನೂರಕ್ಕೆ ಮೂರು ಪೈಸೆಗಿಂತ ಹೆಚ್ಚೇ ಬಡ್ಡಿ ಕಟ್ಟಬೇಕು. ಉತ್ತು, ಬಿತ್ತು, ಬೆಳೆದು, ಕೂಲಿ ಕೊಟ್ಟು, ಟ್ರಾಕ್ಟರ್ ಓಡಿಸಿ, ಕಡೆಗೆ ಕಟಾವಾಗಿ ಬಂದ ಇಳುವರಿಯನ್ನು ಮತ್ತೆ ವ್ಯವಸಾಯೋತ್ಪನ್ನ ಮಾರುಕಟ್ಟೆ ಸಮಿತಿಯ ಯಾರ್ಡಿನಲ್ಲಿ ಮಾರಾಟ ಮಾಡಬೇಕು. ಅಥವಾ ತಮ್ಮ ಊರಿಂದಲೇ ಅದನ್ನು ಎತ್ತಿ ಒಯ್ಯುವ ಏಜೆಂಟರಿಗೆ ಇಳುವರಿಯನ್ನು ನೀಡಬೇಕು. ಎಲ್ಲವೂ ಸರಿಯಾಗಿದ್ದರೆ ಸಾಲದ ಮೊತ್ತವನ್ನು ಕತ್ತರಿಸಿ ಮಿಕ್ಕ ರೊಕ್ಕವನ್ನು ಒಂದು ಹದಿನೈದು ದಿನಗಳ ಕಾಲದಲ್ಲಿ ರೈತ ಕಾಣಬಹುದು. ಉತ್ಪನ್ನದ ತೂಕ ಕಟ್ಟುವವರು ಅದನ್ನು ಕೊಳ್ಳುವ ವ್ಯಾಪಾರಿಗಳೇ. ಗುಣಮಟ್ಟವನ್ನು ನಿರ್ಧರಿಸುವವರೂ ಅವರೇ. ಬೆಲೆ ಕಟ್ಟುವವರೂ ಅವರೇ. ಮಾರುಕಟ್ಟೆ ಸಮಿತಿಯ ಕಾನೂನು ರೈತರ ಹಿತರಕ್ಷಣೆ ಮಾಡಬಹುದು. ಆದರೆ ಈ ವ್ಯಾಪಾರದ ಇಡೀ ಸರಪಣಿಯಲ್ಲಿ ಬೆಳೆ ಬೆಳೆವ ರೈತನ ಕೈಯಲ್ಲಿ ಯಾವ ನಿರ್ಧಾರವೂ ಇಲ್ಲ. ಎಲ್ಲವೂ ಬಂಡವಾಳವಿರುವ ವಿತರಕ–ಖರೀದಿದಾರರ ಬಳಿಯೇ ಇದೆ.

ಈ ಜಾಗಕ್ಕೆ ಒಂದು ಸಹಕಾರ ಸಂಘವನ್ನು ತಂದು ನಿಲ್ಲಿಸೋಣ. ಇಂತಹ ಒಂದು ಸಹಕಾರ ಸಂಘ ಆಂಧ್ರಪ್ರದೇಶದ ಕರೀಂನಗರ್ ಜಿಲ್ಲೆಯ ಮುಲುಕನೂರಿನಲ್ಲಿದೆ. ರೈತರಿಂದ ತುಸು ಹೂಡಿಕೆ, ಅದರ ಮೇಲೆ ಸರಕಾರಿ ಬ್ಯಾಂಕಿನಿಂದ ತುಸು ಸಾಲ, ಆ ಸಾಲದ ಹಣದಲ್ಲಿ ಮಂಡಲಿಯೇ ಸಗಟಿನಲ್ಲಿ ಕೊಂಡ ಬೀಜ, ರಸಗೊಬ್ಬರ, ಕೀಟನಾಶಕ. ಕಟಾವಿನ ನಂತರ ಬಂದ ಇಳುವರಿಯ ಖರೀದಿಯೂ ಸಂಘದ್ದೇ. ಗುಣಮಟ್ಟ–ತೂಕ–ಬೆಲೆಯ ನಿರ್ಧಾರವನ್ನು ಸದಸ್ಯರ ಹಿತಾಸಕ್ತಿಯನ್ನು ಕಾಯ್ದಿರಿಸುತ್ತಲೇ ಮಾಡಿದ ಲಾಭವೂ ಮಂಡಲಿಯದ್ದೇ. ಲಾಭಾಂಶ ಮತ್ತೆ ರೈತರಿಗೇ ವಾಪಸ್ಸು... ಸಹಕಾರಿ ಮಾದರಿಯ ಉಪಸೂತ್ರಗಳಲ್ಲಿ ಒಂದು



ನೈತಿಕ ನ್ಯಾಯ ನಮಗೆ ಕಾಣುತ್ತದೆ. ಈ ನೈತಿಕತೆ ಸಮುದಾಯವನ್ನು ಒಳಗೊಳ್ಳುವುದರಿಂದ ಬೆಳೆಯುತ್ತದೆ. ಈ ನೈತಿಕ ಸೂತ್ರದ ಮೂಲವನ್ನು ಅರ್ಥಮಾಡಿಕೊಂಡರೆ ಎಲ್ಲವನ್ನೂ ಮಾರುಕಟ್ಟೆಗೆ ಇಳಿಬಿಟ್ಟಿರುವ ಈ ಸಮಯದಲ್ಲಿ ಸಹಕಾರಿತನದ ಮಹತ್ವ ನಮಗೆ ಅರ್ಥವಾಗುತ್ತದೆ.

ಮೊದಲ ಮಾದರಿಯಲ್ಲಿ ವ್ಯಾಪಾರದ ಪ್ರತೀ ಹಂತದಲ್ಲೂ ಆದ ಲಾಭ ಸಲ್ಲುವುದು ಸಮುದಾಯದ ಹೊರಗಿರುವ, ಬಂಡವಾಳ ಹೂಡಿದ ವ್ಯಾಪಾರಸ್ಥರಿಗೆ. ಎರಡನೆಯ ಉದಾಹರಣೆಯಲ್ಲಿ ಈ ಹಣ ಸಮುದಾಯದೊಳಗೇ ಗ್ರಾಮದೊಳಗೇ ಉಳಿಯುತ್ತದೆ. ಇದರಲ್ಲಿ ಯಾವುದೇ ದಾನವಾಗಲೀ ದೇಣಿಗೆಯಾಗಲೀ ಸಬ್ಸಿಡಿಯಾಗಲೀ ಇಲ್ಲ.

ಮುಲುಕನೂರು ಸಂಘ ಕೇವಲ 14 ಗ್ರಾಮಗಳಲ್ಲಿ ಕೆಲಸ ಮಾಡುತ್ತಲೇ ರೂ. 150 ಕೋಟಿಗಳ ವ್ಯಾಪಾರ ಮಾಡುತ್ತಿದೆ. ಬಡವರಿಗೆ, ರೈತರಿಗೆ ಮಾರುಕಟ್ಟೆಯ ಸೂತ್ರಗಳು ಬೇಕು. ಆದರೆ ಆ ಸೂತ್ರಗಳ ಚೌಕಟ್ಟು ತುಸು ಭಿನ್ನವಾದರೆ, ಬಂಡವಾಳಶಾಹಿ ಪದ್ಧತಿಯ ಮೂಲ ತುಸುವೇ ಬದಲಾದರೆ ಏನೆಲ್ಲಾ ಆರ್ಥಿಕ ಕ್ರಾಂತಿಯಾಗಬಹುದು ಎನ್ನುವುದಕ್ಕೆ ಇದು ಉದಾಹರಣೆಯಾಗಿದೆ.

ಹೀಗೆಯೇ ಗ್ರಾಹಕರಿಂದ ಪ್ರಾರಂಭವಾದ ಸಹಕಾರೀ ಸೂತ್ರಗಳು ಬಂಡವಾಳವೇ ಆಧಾರವಾಗಿದ್ದ ವ್ಯಾಪಾರದ ಹಲವು ನಂಬಿಕೆಗಳನ್ನು ಅಲುಗಾಡಿಸಿದುವು. ಅಂದರೆ ಮೂಲಧನವೇ ಮುಖ್ಯವಲ್ಲದ ವ್ಯಾಪಾರಕ್ಕೆ ಈ ಸೂತ್ರ ಹೇಳಿ ಮಾಡಿಸಿದಂತಿತ್ತು. ಆದರೆ ಈ ಸೂತ್ರದಲ್ಲಿ ಕೆಲವು ತೊಂದರೆಗಳಿದ್ದುವು. ದುಡ್ಡು–ರೊಕ್ಕವೇ ಮೂಲವಾದಾಗ ಅದಕ್ಕೆ (ಇನ್ಯಾವ ಪದಾರ್ಥಕ್ಕೂ ಇಲ್ಲದ) ವಿನಿಮಯ ಗುಣವಿದೆ. ಅಂದರೆ ಇಲ್ಲಿ ಹೆಗ್ಗೋಡಿನಲ್ಲಿ ಕುಳಿತು ನಾನೂ ಲೂಧಿಯಾನಾದ ಗಿರಣಿಯಲ್ಲಿ ಮೂಲಧನವನ್ನು ಹೂಡಬಹುದು. ಅಲ್ಲಿ ಆರ್ಜಿಸಿದ ಲಾಭವನ್ನು ನಾನು ಇಲ್ಲಿ ಪಡೆಯಬಹುದು. ಹತ್ತು ರೂಪಾಯಿ ಎಂದರೆ ಅದು ಹತ್ತು ರೂಪಾಯಿಯ ಮೌಲ್ಯವೇ ಹೊರತು, ಒಂದು ಸ್ಪಷ್ಟ ನೋಟೇ ಆಗಿರಬೇಕಿಲ್ಲ. ಆದರೆ ನಾನು ಗ್ರಾಹಕರ ಸಹಕಾರಿ ಸಂಘದಲ್ಲಿ ಸದಸ್ಯತ್ವವನ್ನು ಪಡೆಯಬೇಕಿದ್ದರೆ, ಆ ಸಂಘದ ಗ್ರಾಹಕನಾಗಲು ಸಾಧ್ಯವಿರಬೇಕು. ಅರ್ಥಾತ್, ಸದಸ್ಯನೊಬ್ಬ ಅಲ್ಲಿಂದ ವಸ್ತುಗಳನ್ನು ಖರೀದಿಸುವ ಸಾಧ್ಯತೆಗಳಿರಬೇಕು. ಹೀಗಾಗಿ ಸದಸ್ಯತ್ವಕ್ಕೆ ದುಡ್ಡಿಗೆ ಇರದ ಕೆಲವು ಮಿತಿಗಳು ಬಂದುಬಿಡುತ್ತವೆ. ಈ ಮಿತಿಗಳು ಭೌಗೋಳಿಕ ಮಿತಿಗಳಾಗಬಹುದು, ತಾಂತ್ರಿಕ ಮಿತಿಗಳಾಗಬಹುದು, ಮತ್ತು ಸಮಯದ ಹಾಗೂ ಆಸಕ್ತಿಯ ಮಿತಿಗಳಾಗಬಹುದು. ಸಹಕಾರವು ಈ ಮಿತಿಗಳಲ್ಲಿಯೇ ಕೆಲಸ ಮಾಡಬೇಕಾಗುತ್ತದೆ.

ಈ ಮಿತಿಯನ್ನು ಗಮನದಲ್ಲಿಟ್ಟುಕೊಂಡು ಸಹಕಾರದ ಮೂಲ ಉದ್ದೇಶಕ್ಕೆ ಪೂರಕವಾದ ಸದಸ್ಯತ್ವವನ್ನು ಸಂಘಗಳು ಹೊಂದಿರಬೇಕಾಗಿರುತ್ತವೆ. ಹೀಗಾಗಿ

ಸಹಕಾರ ಸಂಸ್ಥೆಗಳಲ್ಲಿ ತೆರೆದ ಸದಸ್ಯತ್ವದ ಸೂತ್ರವಿದೆ. ಅಂದರೆ ಯಾರು ಸಹಕಾರ ಸಂಘದ ಸೇವೆಗಳನ್ನು ಉಪಯೋಗಿಸುತ್ತಾರೋ, ಅವರಿಗೆ ಸದಸ್ಯತ್ವ ತೆರೆದಿರಬೇಕು. ಯಾರು ಉಪಯೋಗಿಸುವ ಸ್ಥಿತಿಯಲ್ಲಿರುವುದಿಲ್ಲವೋ ಅವರು ನಿರ್ಗಮಿಸುವ ಅವಕಾಶವೂ ಇರಬೇಕು. ಈ ಸೂತ್ರದಿಂದ ಅನೇಕ ತೊಂದರೆಗಳು ಉದ್ಭವವಾಗುತ್ತವೆ. ಅವುಗಳನ್ನೂ ನಂತರ ಚರ್ಚಿಸೋಣ.

## ಸುಖೀ ಸಹಕಾರಕ್ಕೆ ಸೂತ್ರಗಳು

ದಿನನಿತ್ಯ ಕಾಣುವ ವ್ಯಾಪಾರೀ ಸಂಸ್ಥೆಗಳಿಗಿಂತ ಭಿನ್ನವಾಗಿರುವ ಸಹಕಾರೀ ಸಂಸ್ಥೆಗಳಿಗೆ ಒಂದು ವ್ಯಕ್ತಿತ್ವವನ್ನು ಒದಗಿಸಿಕೊಟ್ಟಿದ್ದು ಸಹಕಾರಿ ಸೂತ್ರಗಳು. ಈ ಸೂತ್ರಗಳು ಸಹಕಾರಿ ಪ್ರತ್ಯೇಕತೆಯನ್ನು ನಿರ್ದೇಶಿಸುತ್ತಿದ್ದುವು. ಪಯನೀರ್ಸ್ 1844ರಷ್ಟು ಹಿಂದೆ ರೂಪಿಸಿದ್ದ ಸಹಕಾರೀ ಸೂತ್ರಗಳು ಈ ಕೆಳಗಿನಂತಿದ್ದುವು:

1. ಮುಕ್ತ ಸದಸ್ಯತ್ವ
2. ಪ್ರಜಾಪ್ರಭುತ್ವ ಪದ್ಧತಿಯ ನಿರ್ವಹಣೆ
3. ಖರೀದಿಯ ಆಧಾರದ ಮೇಲೆ ಲಾಭಾಂಶ
4. ಬಂಡವಾಳದ ಮೇಲೆ ನಿಯಮಿತ ಬಡ್ಡಿ
5. ರಾಜಕೀಯ ಹಾಗೂ ಮತೀಯ ವಿಷಯಗಳಲ್ಲಿ ತಟಸ್ಥ ನೀತಿ
6. ರೊಕ್ಕದ ಮೇಲೆ ವ್ಯಾಪಾರ
7. ವಿದ್ಯೆಗೆ ಪ್ರೋತ್ಸಾಹ.

ಈ ಸೂತ್ರಗಳನ್ನು ಕಾಲಾಂತರದಲ್ಲಿ ಮೂರು ಬಾರಿ (1937, 1966 ಮತ್ತು 1995ರಲ್ಲಿ) ಪರಾಮರ್ಶೆ ಮಾಡಲಾಗಿದೆ. ಮೂರೂ ಪರಾಮರ್ಶೆಗಳ ನಂತರವೂ ಕೆಲವು ಮೂಲ ಸೂತ್ರಗಳು ಬದಲಾವಣೆಯಾಗದೆ, ಕಾಲದ ಅಗ್ನಿಪರೀಕ್ಷೆಯಲ್ಲಿ ತೇರ್ಗಡೆಯಾಗಿವೆ. ಕಡೆಯದಾಗಿ ಸಹಕಾರ ಸೂತ್ರಗಳನ್ನು 1995ರಲ್ಲಿ ಪರಾಮರ್ಶೆಮಾಡಿದ ಅಂತರರಾಷ್ಟ್ರೀಯ ಸಹಕಾರೀ ಒಕ್ಕೂಟ ಸಹಕಾರೀ ಪ್ರತ್ಯೇಕತೆಯ ಈ ಏಳು ಲಕ್ಷಣಗಳನ್ನು ಕಾಯಂ ಮಾಡಿತು.

## ಸಹಕಾರೀ ಪ್ರತ್ಯೇಕತೆಯ ಸೂತ್ರಗಳು

ಅರ್ಥ ನಿರೂಪಣೆ: ಸ್ವತಂತ್ರ ವ್ಯಕ್ತಿಗಳು ತಮ್ಮ ಪರಸ್ಪರ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಅವಶ್ಯಕತೆಗಳಿಗೆ ಸ್ವಯಂಪ್ರೇರಿತರಾಗಿ ರೂಪಿಸಿಕೊಂಡು, ಜಂಟಿ ಮಾಲೀಕತ್ವದಲ್ಲಿ, ಪ್ರಜಾಪ್ರಭುತ್ವದ ಸೂತ್ರಗಳನುಸಾರ ಕಟ್ಟಿಕೊಂಡ ಒಕ್ಕೂಟವನ್ನು ಸಹಕಾರಿ ಸಂಸ್ಥೆಯೆಂದು ಪರಿಗಣಿಸಲಾಗುತ್ತದೆ.

ಮೌಲ್ಯಗಳು: ಸಹಕಾರ ಸಂಸ್ಥೆಗಳು ಪರಸ್ಪರ ಸಹಾಯ, ಸ್ವಂತ ಜವಾಬ್ದಾರಿ, ಪ್ರಜಾಪ್ರಭುತ್ವ, ಸಮಾನತೆ, ಸಮತಾವಾದ, ಸಮೈಕ್ಯತೆಯ ಮೌಲ್ಯಗಳ ಆಧಾರದ



ಮೇಲೆ ನಿರ್ಮಿತವಾಗುತ್ತವೆ. ಸಹಕಾರ ರೂವಾರಿಗಳ ಹಾದಿಯಲ್ಲಿಯೇ ನಡೆಯುತ್ತಿರುವ ಸಹಕಾರಿ ಸದಸ್ಯರು ಪ್ರಾಮಾಣಿಕತೆ, ಮುಕ್ತತೆ, ಸಾಮಾಜಿಕ ಜವಾಬ್ದಾರಿ, ಇತರರ ಬಗೆಗಿನ ಕಾಳಜಿಯ ನೈತಿಕ ಮೌಲಗಳನ್ನು ನಂಬುತ್ತಾರೆ.

ಸೂತ್ರಗಳು: ಸಹಕಾರಿ ಮೌಲ್ಯಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಸಹಕಾರಿ ಸಂಸ್ಥೆಗಳು ಈ ಕೆಳಗಿನ ಸೂತ್ರಗಳ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತವೆ.

## ಮೊದಲನೆಯ ಸೂತ್ರ: ಸ್ವಯಂ-ಪ್ರೇರಿತ, ಮುಕ್ತ ಸದಸ್ಯತ್ವ

ಸಹಕಾರ ಸಂಸ್ಥೆಗಳು ಸ್ವಯಂಪ್ರೇರಿತ ಸಂಸ್ಥೆಗಳು. ತಮ್ಮ ಸೇವೆಯನ್ನು ಉಪಯೋಗಿಸಲು, ಸದಸ್ಯತ್ವದ ಜವಾಬ್ದಾರಿಯನ್ನು ಒಪ್ಪಲು ತಯಾರಾಗಿರುವವರಿಗೆ, ಲಿಂಗ, ಜಾತಿ, ಮತ, ರಾಜಕೀಯ ನಂಬಿಕೆ, ಕೋಮುಗಳ ತಾರತಮ್ಯವಿಲ್ಲದೆ ಎಲ್ಲರಿಗೂ ಮುಕ್ತವಾದ ಸದಸ್ಯತ್ವವನ್ನು ನೀಡುತ್ತದೆ.

## ಎರಡನೆಯ ಸೂತ್ರ: ಪ್ರಜಾಪ್ರಭುತ್ವದ ನೀತಿಯಂತೆ ಸದಸ್ಯರ ನಿರ್ವಹಣೆ

ಸಹಕಾರ ಸಂಸ್ಥೆಗಳು ಪ್ರಜಾಪ್ರಭುತ್ವದ ಸೂತ್ರದ ಮೇಲೆ ನಿಂತಿರುವ ಸಂಸ್ಥೆಗಳು. ಅದನ್ನು ಸದಸ್ಯರೇ ನಿಯಂತ್ರಿಸುತ್ತಾರೆ. ಅವರುಗಳೇ ಆ ಸಂಸ್ಥೆಯ ನೀತಿ ಸೂತ್ರಗಳನ್ನು ರೂಪಿಸುತ್ತಾರೆ, ಅವರೇ ನಿರ್ಣಯಗಳನ್ನು ಕೈಗೊಳ್ಳುತ್ತಾರೆ. ಚುನಾಯಿತ ಪ್ರತಿನಿಧಿಗಳು ಸರ್ವ ಸದಸ್ಯರಿಗೆ ಜವಾಬುದಾರರಾಗಿರುತ್ತಾರೆ. ಪ್ರಾಥಮಿಕ ಸಂಘಗಳಲ್ಲಿ ಎಲ್ಲ ಸದಸ್ಯರಿಗೂ ಸಮಾನವಾಗಿ ಮತ ಚಲಾಯಿಸುವ ಹಕ್ಕಿರುತ್ತದೆ (ಸದಸ್ಯರೊಬ್ಬರಿಗೆ ಒಂದೇ ಮತ). ಮಿಕ್ಕ ಸ್ಥರಗಳಲ್ಲಿರುವ ಸಹಕಾರ ಸಂಘಗಳೂ ಪ್ರಜಾಪ್ರಭುತ್ವದ ಸೂತ್ರದ ಮೇಲೆಯೇ ನಿರ್ಮಿತವಾಗಿರುತ್ತವೆ.

## ಮೂರನೆಯ ಸೂತ್ರ: ಸದಸ್ಯರ ಆರ್ಥಿಕ ಭಾಗಸ್ವಾಮ್ಯ

ಸದಸ್ಯರು ಸಮಾನವಾಗಿ ಸಹಕಾರ ಸಂಸ್ಥೆಯ ಮೂಲಧನಕ್ಕೆ ದೇಣಿಗೆ ನೀಡುತ್ತಾರೆ, ಹಾಗೂ ಪ್ರಜಾಪ್ರಭುತ್ವದ ಸೂತ್ರಗಳ ಆಧಾರದ ಮೇಲೆ ಅದನ್ನು ನಿಯಂತ್ರಿಸುತ್ತಾರೆ. ಮೂಲಧನದ ಒಂದು ಪುಟ್ಟಭಾಗವಾದರೂ ಸಹಕಾರ ಸಂಸ್ಥೆಯ ಸಾಮೂಹಿಕ ಆಸ್ತಿಯಲ್ಲಿ ತೊಡಗಿಸಲಾಗುತ್ತದೆ. ಸದಸ್ಯತ್ವಕ್ಕೆ ಬೇಕಾದ ಮೂಲಧನದ ದೇಣಿಗೆಯ ಮೇಲೆ, ಅವಶ್ಯವಿದ್ದಲ್ಲಿ, ಸದಸ್ಯರಿಗೆ ನಿಯಮಿತವಾದ ಬಡ್ಡಿಯನ್ನು ಸಾಮಾನ್ಯತಃ ನೀಡಲಾಗುತ್ತದೆ. 'ಉಳಿಕೆ'ಯನ್ನು ಸದಸ್ಯರು ಈ ಕೆಳಗಿನ ಯಾವುದಾದರೊಂದು ಅಥವಾ ಅನೇಕ ಕಾರಣಕ್ಕೆ ಉಪಯೋಗಿಸುತ್ತಾರೆ: ಸಂಸ್ಥೆಯ ಪ್ರಗತಿಗೆ; ಕೊಂಚ ಭಾಗವಾದರೂ ಸದಸ್ಯರ ನಡುವೆ ಹಂಚಲಾಗದ ರೀತಿಯಲ್ಲಿ ರೂಪಿಸಿರುವ, ಭವಿಷ್ಯದಲ್ಲಿ ಬೇಕಾಗಬಹುದಾದ ನಿಧಿಗೆ; ಸಂಸ್ಥೆಯ ವ್ಯಾಪಾರದಲ್ಲಿ ತಮ್ಮ

ಪಾಲಿಗನುಗುಣವಾಗಿ ಹಂಚಿಕೊಳ್ಳುವುದಕ್ಕೆ; ಹಾಗೂ ಸದಸ್ಯರು ಪರವಾನಗಿ ನೀಡಬಹುದಾದ ಇತರೆ ಕಾರ್ಯಕ್ರಮಗಳಿಗಾಗಿ.

### ನಾಲ್ಕನೆಯ ಸೂತ್ರ: ಸ್ವಾಯತ್ತತೆ ಮತ್ತು ಸ್ವಾತಂತ್ರ

ಸಹಕಾರಿ ಸಂಸ್ಥೆಗಳು ಸ್ವಾಯತ್ತ, ಪರಸ್ಪರ ಸಹಾಯಮಾಡುವ, ಸದಸ್ಯರ ಸುಪರ್ದಿನಲ್ಲಿರುವ ಸಂಸ್ಥೆಗಳು. ಈ ಸಂಸ್ಥೆಗಳು ಬೇರೆ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡುವಾಗಲೂ, ಇತರೆಡೆಯಿಂದ ಬಂಡವಾಳವನ್ನು ಸ್ವೀಕರಿಸುವಾಗಲೂ ತಮ್ಮ ಸ್ವಾಯತ್ತತೆ ಮತ್ತು ಪ್ರಜಾಪ್ರಭುತ್ವವಾದೀ ಸೂತ್ರಗಳನ್ನು ಬಿಟ್ಟುಕೊಡದೇ ಇರುತ್ತವೆ.

### ಐದನೆಯ ಸೂತ್ರ: ವಿದ್ಯೆ, ತರಬೇತಿ, ಮತ್ತು ಮಾಹಿತಿ

ಸಹಕಾರ ಸಂಸ್ಥೆಗಳು ತಮ್ಮ ಸದಸ್ಯರಿಗೆ, ಚುನಾಯಿತ ಪ್ರತಿನಿಧಿಗಳಿಗೆ, ನಿರ್ವಾಹಕರಿಗೆ, ಉದ್ಯೋಗಿಗಳಿಗೆ, ಸಂಸ್ಥೆಯ ಉನ್ನತಿ ಮತ್ತು ವಿಕಾಸಕ್ಕಾಗಿ, ವಿದ್ಯೆ ಮತ್ತು ತರಬೇತಿಗಳನ್ನು ನೀಡುತ್ತವೆ. ಸಹಕಾರ ಸಂಸ್ಥೆಗಳು ಮಹಾಜನತೆಗೆ – ಮುಖ್ಯವಾಗಿ ಯುವಕರಿಗೆ, ಚಿಂತಕರಿಗೆ ಸಹಕಾರದ ರೂಪರೇಷೆ, ಪ್ರಯೋಜನಗಳ ಬಗ್ಗೆ ಮಾಹಿತಿ ನೀಡುತ್ತವೆ.

### ಆರನೆಯ ಸೂತ್ರ: ಸಹಕಾರ ಸಂಸ್ಥೆಗಳೊಂದಿಗೆ ಸಹಕಾರ

ತಮ್ಮ ಸದಸ್ಯರಿಗೆ ಉತ್ತಮ ದಕ್ಷ ಸೇವೆಗಳನ್ನೊದಗಿಸುತ್ತಲೇ ಸಹಕಾರ ಸಂಸ್ಥೆಗಳು ಸ್ಥಳೀಯ, ಪ್ರಾಂತೀಯ, ರಾಷ್ಟ್ರೀಯ, ಅಂತರರಾಷ್ಟ್ರೀಯ ಸ್ಥರದಲ್ಲಿ ಇತರ ಸಂಸ್ಥೆಗಳೊಂದಿಗೆ ಕೆಲಸಮಾಡುತ್ತಾ ಸಹಕಾರಿ ಆಂದೋಲನವನ್ನು ಬಲಪಡಿಸುತ್ತವೆ.

### ಏಳನೆಯ ಸೂತ್ರ: ಸಮುದಾಯದ ಬಗ್ಗೆ ಕಾಳಜಿ

ಸಹಕಾರಿ ಸಂಸ್ಥಗಳು ನಿರಂತರವಾಗಿ ತಮ್ಮ ಸಮುದಾಯದ ವಿಕಾಸಕ್ಕಾಗಿ ಸದಸ್ಯರು ನಿರ್ದೇಶಿಸಿದ ನೀತಿಗನುಸಾರವಾಗಿ ಕೆಲಸ ಮಾಡುತ್ತವೆ.

### ಸೂತ್ರ ಸಮಾಲೋಚನೆ

ಸಹಕಾರದ ಮೂಲ ಸೂತ್ರಗಳಾದ ತೆರೆದ ಸದಸ್ಯತ್ವ, ಪ್ರಜಾಪ್ರಭುತ್ವದ ಸೂತ್ರಾನುಸಾರ ಸಂಸ್ಥೆಯ ನಿರ್ವಹಣೆ, 'ಉಳಿಕೆ'ಯನ್ನು ಹಂಚಿಕೊಳ್ಳುವ ವಿಧಾನ ಮತ್ತು ಇಡುವಳಿಯ ಬಗೆಗಿನ ಪ್ರವೃತ್ತಿ ಒಂದೂವರೆ ಶತಮಾನಕ್ಕೂ ಹೆಚ್ಚು ಕಾಲದಿಂದ ಬದಲಾಗಿಲ್ಲ. ರೊಕ್ಕದ ಮೇಲೆ ವ್ಯಾಪಾರದ ಸೂತ್ರ ಬಿಟ್ಟರೆ ಮಿಕ್ಕಲ್ಲ ಮೂಲ ಸೂತ್ರಗಳೂ ಒಂದಿಲ್ಲ ಒಂದು ರೀತಿಯಲ್ಲಿ ಮುಂದುವರೆದಿವೆ. ಹೀಗಾಗಿ ಸಂಸ್ಥಾಗತವಾಗಿ ಸಹಕಾರ



ಸಂಘಗಳು ತಮ್ಮ ಭಿನ್ನತೆಯನ್ನು ಕಾಪಾಡಿಕೊಂಡು ಬಂದು ಕಾಲದ ಪರೀಕ್ಷೆಯಲ್ಲಿ ತೇರ್ಗಡೆಯಾಗಿವೆ.

ಈ ಸೂತ್ರಗಳನ್ನು ನಾವು ವಿವರವಾಗಿ ಅರ್ಥ ಮಾಡಿಕೊಳ್ಳುವ ಮುನ್ನ ಇವುಗಳು ಮೂಡಿಬಂದ ಚಾರಿತ್ರಿಕ ಸಂದರ್ಭವನ್ನೂ ಅರ್ಥಮಾಡಿಕೊಳ್ಳಬೇಕಾಗಿದೆ. ಇದರಿಂದ ಸಹಕಾರದ ಮಿತಿಗಳನ್ನೂ ಬಲಹೀನತೆಯನ್ನೂ ಅರ್ಥ ಮಾಡಿಕೊಳ್ಳುವುದು ಸರಳವಾಗಬಹುದು.

ರಾಶ್ಡೇಲ್ ಪಯೋನೀರ್ಸ್ ಈ ಸೂತ್ರಗಳ ಪರಿಕಲ್ಪನೆಯನ್ನು ಮಾಡಿದಾಗ, ಬಂಡವಾಳದಿಂದ ದೂರ ಮತ್ತು ಪರಸ್ಪರತೆಯ ಸೂತ್ರಗಳ ಆಧಾರದತ್ತ ವಾಲಿದ್ದರು. ವ್ಯಾಪಾರದ ಕೇಂದ್ರವನ್ನು ಬಂಡವಾಳದಿಂದ ದೂರಕ್ಕೆ ತಳ್ಳಿದರೆ ಅದು ಕೆಲಸ ಮಾಡುವುದೆ? ಆಗಿನ ಪರಿಸ್ಥಿತಿಗೆ ಈ ತರ್ಕ ಒಗ್ಗುತ್ತಿತ್ತೇ? ಈ ಪ್ರಶ್ನೆಗಳನ್ನು ಕೇಳಿದಾಗ ನಮಗೆ ಮೊದಲಿಗೆ ವೇದ್ಯವಾಗುವುದು ಸಹಕಾರೀ ಸಂಸ್ಥೆಗಳು ಮೊದಲಿಗೆ ಬಂದದ್ದು ಗ್ರಾಹಕ ಕ್ಷೇತ್ರದಲ್ಲಿ. ಇಂದು ನಾವು ಚಿಲ್ಲರೆ ವ್ಯಾಪಾರ ಎಂದು ಕರೆಯುವ ಕ್ಷೇತ್ರದಲ್ಲಿ. ಸಹಕಾರಿ ಸಂಸ್ಥೆಯ ಸದಸ್ಯರು ಸ್ಥಳೀಯ ವ್ಯಾಪಾರಿಗಳಿಂದ ತಮ್ಮ ದೈನಂದಿನ ವಸ್ತುಗಳನ್ನು ಕೊಳ್ಳುತ್ತಿದ್ದರಾದರೂ ಅದರಲ್ಲಿ ಅವರಿಗೆ ಶೋಷಣೆ ಕಂಡುಬಂದಿತ್ತು. ಹೀಗಾಗಿ ದೈನಂದಿನ ವಸ್ತುಗಳನ್ನು ಸಗಟಿನಲ್ಲಿ ಕೊಳ್ಳುವುದರಲ್ಲಿ ಅವರುಗಳು ಅರ್ಥವನ್ನು ಕಂಡುಕೊಂಡಿದ್ದರು. ಎಲ್ಲರ ಅವಶ್ಯಕತೆಯನ್ನು ಒಂದೆಡೆಗೆ ಕಲೆಹಾಕಿದಾಗ ಅವರುಗಳಿಗೆ ಸಮೂಹ ಶಕ್ತಿಯ ಬಲ ಕಂಡುಬಂದಿತ್ತು. ಹಾಗೆಯೆ, ಹೆಚ್ಚು ಸಾಮಗ್ರಿಯ ವಹಿವಾಟು ಮಾಡಿದಷ್ಟೂ ಲಾಭ ಬೆಳೆದದ್ದನ್ನು ಅವರು ಕಂಡುಕೊಂಡರು. ರೊಕ್ಕದಲ್ಲಿಯೇ ವ್ಯಾಪಾರ ಎನ್ನುವ ಸೂತ್ರವನ್ನು ಗಮನಿಸಿ ನೋಡಿದರೆ ಶೋಷಣೆಯ ಮೂಲ ಎಲ್ಲಿತ್ತು ಎನ್ನುವುದು ನಮಗೆ ತಿಳಿಯುತ್ತದೆ. ಉದ್ರಿಯಲ್ಲಿ ಕಿರಾಣಿಯನ್ನು ಕೊಟ್ಟ ವರ್ತಕರು ಬಡ ಗ್ರಾಹಕರನ್ನು ತಮ್ಮ ಬಲೆಯಲ್ಲಿ ಬಂಧಿಸಿಡುತ್ತಿದ್ದರು. ವ್ಯಾಪಾರದ ಮೇಲೆ ವರ್ತಕರಿಟ್ಟಿದ್ದ ಬಿಗಿಪಟ್ಟನ್ನು ಬಿಡಿಸಬೇಕಾದರೆ ಬಂಡವಾಳದ ಪ್ರಾಮುಖ್ಯತೆಯನ್ನು ಕಡಿಮೆಮಾಡುವ ಅವಶ್ಯಕತೆಯಿತ್ತು. ಬಂಡವಾಳದ ಪ್ರಾಮುಖ್ಯತೆ ಕಡಿಮೆಯಾಗಲು – ಉದ್ರಿ ವ್ಯಾಪಾರವನ್ನು ಬಿಡುವುದೂ ಒಂದು ಮಾರ್ಗವಾಯಿತು. ಕಾಲಾಂತರದಲ್ಲಿ ರೊಕ್ಕದ ಮೇಲೆ ವ್ಯಾಪಾರ ಎನ್ನುವ ಸೂತ್ರವನ್ನು ಬಿಟ್ಟುಕೊಡಲಾಯಿತು.

19ನೇ ಶತಮಾನದ ಸಹಕಾರೀ ಕ್ಷೇತ್ರ ಮೂಲತಃ ಬೆಳೆದುಬಂದದ್ದು ಔದ್ಯೋಗಿಕ ಕ್ರಾಂತಿಯ ಸಮಯದಲ್ಲಿ. ಅದೇ ಸಮಯಕ್ಕೆ ಬೆಳೆದುಬಂದ ಕಾರ್ಮಿಕ ಸಂಘಗಳ ಪ್ರಭಾವದಲ್ಲಿಯೇ ಸಹಕಾರ ಸಂಘಗಳೂ ಉದ್ಭವವಾದುವು. ಬಂಡವಾಳ ಹೂಡಿದ ಔದ್ಯೋಗಿಕ ರಂಗದ ಮಾಲೀಕರ ವಿರುದ್ಧ ಕಾರ್ಮಿಕರ ಆಂದೋಲನ ನಡೆದರೆ, ಬಂಡವಾಳವೇ ಮೂಲವಾದ ವ್ಯಾಪಾರಿಗಳ ವಿರುದ್ಧ ಸಹಕಾರ ಸಂಘಗಳು

ಎದ್ದು ನಿಂತುವು. ಹೀಗಾಗಿ ಕಾರ್ಮಿಕ ಆಂದೋಲನಕ್ಕೆ ಸಂಬಂಧಿಸಿದ ಕೆಲವು ಸಮಾನತೆಯ ಸೂತ್ರಗಳು ಇಲ್ಲಿಯೂ ತಲೆದೋರಿದವು. ಇದರಲ್ಲಿ ಪ್ರತೀ ಸದಸ್ಯನಿಗೆ ಕೇವಲ ಒಂದು ಓಟೆನ್ನುವ ಪ್ರಜಾಪ್ರಭುತ್ವವಾದೀ ಸೂತ್ರದ ಜೊತೆಜೊತೆಗೇ ಸಹಕಾರಿ ವಿದ್ಯೆ, ಸಹಕಾರಸಂಸ್ಥೆಗಳೊಂದಿಗೆ ಸಹಕಾರ ಮತ್ತು ಈಚೆಗೆ ಸೇರ್ಪಡಿಸಿದ ಸ್ವಾಯತ್ತತೆ ಮತ್ತು ಸಮುದಾಯದ ಬಗ್ಗೆ ಕಾಳಜಿ ಎಂಬ ಸೂತ್ರಗಳೂ ಸೇರಿವೆ. ಮೂಲತಃ ಇವು ವ್ಯಾಪಾರಕ್ಕೆ ಸಂಬಂಧಿಸಿದ ಸೂತ್ರಗಳಲ್ಲದಿದ್ದರೂ ಹಣವನ್ನೇ ಮೂಲವಾಗಿಟ್ಟುಕೊಂಡು ನಡೆಸುವ ವ್ಯಾಪಾರವನ್ನು ಬೇರೊಂದು ರೀತಿಯಲ್ಲಿ, ಮಾನವೀಯ ಮತ್ತು ಒಳಗೊಳ್ಳುವಿಕೆಯ ದೃಷ್ಟಿಯನ್ನು ಬಲಪಡಿಸಲು ಅಳವಡಿಸಿರುವ ಸೂತ್ರಗಳಾಗಿ ಇರಬಹುದು.

ಗ್ರಾಹಕ ಆಂದೋಲನದಿಂದ ಬೆಳೆದುಬಂದ ಸಹಕಾರ ಸೂತ್ರದಲ್ಲಿ ಬಂಡವಾಳವನ್ನು ಕಡೆಗಣಿಸಿ ಸೇವೆಯ (ವ್ಯಾಪಾರದ) ಮೇಲೆ ಒತ್ತು ನೀಡಿದ್ದರಲ್ಲಿ ಅರ್ಥವಿತ್ತು. ಆ ಗ್ರಾಹಕ ಸಂಘಗಳಿಗೆ ಹೆಚ್ಚಿನ ಬಂಡವಾಳದ ಅವಶ್ಯಕತೆಯಿರಲಿಲ್ಲ. ಆದರೆ ಮುಂದೆ ಸಹಕಾರವು ಬೆಳೆದು ದೊಡ್ಡ ಬಂಡವಾಳ ಬೇಕಾದ ಕ್ಷೇತ್ರಗಳಿಗೆ ಪ್ರವೇಶಿಸುತ್ತಿದ್ದಂತೆ ಸಹಕಾರದಲ್ಲಿ ಕೆಲವು ತೊಡಕುಗಳು ಕಂಡುಬರುವುದನ್ನು ನಾವು ಕಾಣಬಹುದು. ಆ ಬಗ್ಗೆ ನಂತರ ಚರ್ಚಿಸೋಣ.

ಸಹಕಾರದ ಎರಡು ಮೂಲ ಸೂತ್ರಗಳು ವ್ಯಾಪಾರಕ್ಕೆ ಸಂಬಂಧಿಸಿದವು – ತೆರೆದ ಸದಸ್ಯತ್ವ ಸೇವೆಗಳನ್ನು ಉಪಯೋಗಿಸುವ ಸಾಧ್ಯತೆಯನ್ನು ಮನಗಂಡು ರೂಪಿಸಿದ್ದಾದರೆ, ಸದಸ್ಯರು ಆರ್ಥಿಕವಾಗಿ ತಮ್ಮ ಸಂಘಗಳಲ್ಲಿ ಭಾಗವಹಿಸಬೇಕೆಂಬ ಸೂತ್ರ – ಸೇವೆಗಳ ಉಪಯೋಗಕ್ಕನುಗುಣವಾಗಿ ಲಾಭದ ಹಂಚಿಕೆ ಮತ್ತು ಬಂಡವಾಳಕ್ಕೆ ನಿಗದಿತ ಪೂರ್ವನಿರ್ಧಾರಿತ ಬಡ್ಡಿ ಅಥವಾ ಲಾಭಾಂಶವೆನ್ನುವುದು ಮೂಲ ಆಧಾರಸೂತ್ರಕ್ಕೆ ಸಂಬಂಧಿಸಿದವುಗಳು. ಇದಲ್ಲದೇ ಈಗಿನ ಸಹಕಾರ ಸೂತ್ರಗಳಲ್ಲಿ ವ್ಯಾಪಾರಕ್ಕೆ ಸಂಬಂಧಿಸದ ಇನ್ನೂ ಐದು ಸೂತ್ರಗಳಿವೆ. ಈ ಸೂತ್ರಗಳು ಸಹಕಾರ ಸಿದ್ಧಾಂತಕ್ಕೆ ಸೇರಿಬಂದ ಪರಿಯೂ ಕುತೂಹಲದ್ದು. ಆದರೆ ಚಾರಿತ್ರಿಕ ಕಾರಣಗಳಿಗೆ ಒಳಸುಳಿದ ಪರಾಮರ್ಶೆ ಮಾಡಿದರೂ ಸೈದ್ಧಾಂತಿಕವಾದ ಮೂಲಸೂತ್ರಗಳನ್ನು ಬಿಟ್ಟುಕೊಡದೆಯೇ ಸಹಕಾರ ಕ್ಷೇತ್ರ ಮುಂದುವರೆದಿದೆ.

ಸಹಕಾರದ ಇತರ ಸೂತ್ರಗಳಲ್ಲಿ ಪ್ರಜಾಪ್ರಭುತ್ವದ ಸೂತ್ರಗಳ ಆಧಾರದ ಮೇಲೆ ಸಂಸ್ಥೆಗಳನ್ನು ನಡೆಯಿಸಬೇಕೆನ್ನುವ ಸೂತ್ರವು ಮುಖ್ಯವಾದದ್ದು. ಬಂಡವಾಳವೇ ಆಧಾರಸೂತ್ರವಾದ ಸಂಸ್ಥೆಗಳಲ್ಲಿ ಹೂಡಿದ ಬಂಡವಾಳಕ್ಕನುಗುಣವಾಗಿ ನಿಯಂತ್ರಣಾ ಹಕ್ಕುಗಳು ಲಭ್ಯವಾದರೆ – ಸಹಕಾರದಲ್ಲಿ ಪ್ರತಿಯೊಬ್ಬ ಸದಸ್ಯರಿಗೂ (ಅವರು ಎಷ್ಟೇ ಬಂಡವಾಳ ಹೂಡಿರಲಿ, ಎಷ್ಟೇ ವ್ಯಾಪಾರವನ್ನು ನೀಡುತ್ತಿರಲಿ) ಸಮಾನವಾದ ಓಟಿನ ಹಕ್ಕಿರುತ್ತದೆ. ಇದು ವ್ಯಾಪಾರ ಸೂತ್ರಕ್ಕೆ



ವ್ಯತಿರಿಕ್ತವಾದದ್ದು. ಇದರಿಂದ ಅನೇಕ ತೊಂದರೆಗಳು ಉಂಟಾಗಬಹುದಾದರೂ ಈ ಸೂತ್ರವನ್ನು ಅಲುಗಾಡಿಸಲು ಯಾವುದೇ ಪರಾಮರ್ಶೆಗೆ ಸಾಧ್ಯವಾಗಿಲ್ಲ.

### ಸಹಕಾರಿ ಸಂಸ್ಥೆಗಳ ಮೂಲಸೂತ್ರ: ಜನಜನಜನ

ಬಂಡವಾಳವನ್ನು ನಿರಾಕರಿಸಿ ಮುಂದುವರೆದ ಸಹಕಾರಿ ಸಂಸ್ಥೆಗಳು ವ್ಯಾಪಾರಿ ಸಂಸ್ಥೆಗಳಾಗಿ ನಿಲ್ಲಬೇಕಾದರೆ ಬೇಕಾದ್ದು ಸದಸ್ಯತ್ವ, ಅಂದರೆ ಜನ. ಒಂದೇ ಉದ್ದೇಶದ ಆರ್ಥಿಕ ಚಟುವಟಿಕೆಯನ್ನು ಕೈಗೊಳ್ಳಲು ಹೆಚ್ಚೆಚ್ಚು ಜನ ಸಿಕ್ಕಷ್ಟೂ ಸಹಕಾರ ಗೆಲ್ಲುತ್ತದೆ. ಬಂಡವಾಳವು ಎಲ್ಲ ಆರ್ಥಿಕ ಸಂಪನ್ಮೂಲಗಳನ್ನು ಕೇಂದ್ರೀಕರಿಸಿದರೆ, ಸಹಕಾರವು ಹರಡಿ ಹಂಚಿಹೋಗಿರುವ  ವಿತ್ತೇತರ ಸಂಪನ್ಮೂಲಗಳನ್ನು ಶೇಖರಿಸುವ ಕೆಲಸವನ್ನು ಮಾಡುತ್ತದೆ. ಇದು ವಿಕೇಂದ್ರೀಕೃತವಾಗಿರುವ ಸಣ್ಣ ಉತ್ಪಾದಕರನ್ನೂ ಅಥವಾ ಸಣ್ಣ ಗ್ರಾಹಕರನ್ನೂ ಒಂದೆಡೆ ಸೇರಿಸಿ ಅವರುಗಳಿಗೆ ಸಗಟು ವ್ಯಾಪಾರದ ಶಕ್ತಿಯನ್ನು ಧಾರೆಯೆರೆಯುವ ಪ್ರಕ್ರಿಯೆ.

ಮೊದಲಿಗೆ ಸಹಕಾರವು ಬಂಡವಾಳದ ಅವಶ್ಯಕತೆಯಿಲ್ಲದ ಚಟುವಟಿಕೆಗಳಲ್ಲಿ (ದೊಡ್ಡ ಫ್ಯಾಕ್ಟರಿ, ಸಂಕೀರ್ಣವಾದ ಪರಿಷ್ಕರಣಾ ಪ್ರಕ್ರಿಯೆಗಳಿಲ್ಲದ) ಸರಳ ವ್ಯಾಪಾರಗಳಲ್ಲಿ ಹೆಚ್ಚಿನ ಮಹತ್ವ ಪಡೆಯಬಹುದು ಅನ್ನಿಸಿದರೂ, ನಾವು ಗಮನಿಸಿ ನೋಡಿದರೆ ಸಹಕಾರ ಗೆದ್ದಿರುವುದು ಅನೇಕ ಜನ ಸಣ್ಣ ಉತ್ಪಾದಕರು–ಗ್ರಾಹಕರು ಇರುವ ಕ್ಷೇತ್ರದಲ್ಲಿಯೇ. ಈ ಜನಬಲವೇ ಬೇಕಾದ ಬಂಡವಾಳವನ್ನೂ ಒದಗಿಸಿಬಿಡಬಹುದು ಅನ್ನುವುದಕ್ಕೆ ನಮಗೆ ಸಾಕಷ್ಟು ಪುರಾವೆಯಿದೆ. ಬಂಡವಾಳವು ಮೂಲಸೂತ್ರವಲ್ಲದ ವ್ಯಾಪಾರಿ ಜಗತ್ತಿನಲ್ಲಿ ಬಂಡವಾಳವೇ ಮುಖ್ಯವಾದ ವ್ಯಾಪಾರಗಳೂ ಹೇಗೆ ಗೆಲ್ಲಬಹುದು ಎನ್ನುವುದನ್ನು ನಂತರ ಚರ್ಚಿಸುತ್ತೇನೆ.

ಜನರೇ ಅರ್ಥಾತ್ ಸದಸ್ಯರೇ ಮೂಲಸೂತ್ರವಾದ ಸಹಕಾರೀ ಚಟುವಟಿಕೆಗಳನ್ನು ಗಮನಿಸಿದಾಗ ಇದರಿಂದಾಗಿ ಉಂಟಾಗುವ ಮಿತಿಗಳೂ ನಮಗೆ ಕಾಣಲು ಸಿಗುತ್ತವೆ. ಹೀಗಾಗಿಯೇ ಸಹಕಾರಿ ಸಂಸ್ಥೆಗಳು ಮಿಕ್ಕ ವ್ಯಾಪಾರೀ ಸಂಸ್ಥೆಗಳಿಗಿಂತ ಭಿನ್ನವಾಗಿ ಅನೇಕ ಮಿತಿಗಳ ಮಧ್ಯೆ ಕೆಲಸ ಮಾಡಬೇಕಾಗುತ್ತದೆ. ಚೊಕ್ಕಟವಾದ ಬಂಡವಾಳಶಾಹೀ ವ್ಯಾಪಾರದ ಸೂತ್ರಗಳನ್ನು ಗಮನಿಸಿದಾಗ ಸಹಕಾರದ ಸೂತ್ರಗಳು ಗೊಂದಲವನ್ನುಂಟುಮಾಡುತ್ತವೆ.

ಬಂಡವಾಳವೇ ಮೂಲ–ಆಧಾರಸೂತ್ರವಾದಾಗ ಅದರ ಮಾಪನವು ಸರಳವಾಗಿರುತ್ತದೆ. ಇಂತಿಷ್ಟು ಬಂಡವಾಳ ಹೂಡಿದವರಿಗೆ ಬಂಡವಾಳಕ್ಕೆ ತಕ್ಕಂತೆ ಸಂಸ್ಥೆಯನ್ನು ಚಲಾಯಿಸುವ ಹಕ್ಕೂ, ಅದೇ ಸೂತ್ರಾಧಾರವಾಗಿ ಲಾಭವನ್ನು ಪಡೆಯುವ ಹಕ್ಕೂ ಉಂಟಾಗುತ್ತದೆ. ಈಗ ಒಬ್ಬ ಹೂಡಿಕೆದಾರನಿಗೆ ತನ್ನ ಹೂಡಿಕೆಗನುಸಾರವಾಗಿ ಕಂಪನಿಯ ಯಾಜಮಾನ್ಯದ, ಅದನ್ನು ನಡೆಯಿಸುವ

ಹಕ್ಕನ್ನು ಕಂಪನಿಗಳಲ್ಲಿ ಕೊಡಲಾಗಿದೆ. ಇದು ಸರಳ. ಒಬ್ಬ ಷೇರುದಾರನ ಹೂಡಿಕೆ ನಿರ್ದಿಷ್ಟವಾಗಿರುತ್ತದೆ. ಹೂಡಿದ ಬಂಡವಾಳವು ಒಂದಿಷ್ಟು ಕಾಲ ಸ್ಥಾಯಿಯಾಗಿಯೂ ಇರುತ್ತದೆ. ಹಾಗೂ ಯಾವುದೇ ವರ್ಷದಲ್ಲಿ ಹೂಡಿಕೆಯ ಬೆಳವಣಿಗೆಯಾದಲ್ಲಿ, ಹೊಸ ಹೂಡಿಕೆ ಬರುವುದಕ್ಕೆ ಮುನ್ನ ಆ ಹೆಚ್ಚುವರಿ ಹೂಡಿಕೆಯ ಹಕ್ಕು ಬಾಧ್ಯತೆಗಳ ಬಗ್ಗೆ ಚರ್ಚೆಯೂ ಒಪ್ಪಂದವೂ ಆಗುತ್ತದೆ. ಹೊಸ ಬಂಡವಾಳದಿಂದ ಈ ಎಲ್ಲ ಹಕ್ಕುಗಳ ಮರುಪರಿಶೀಲನೆ ಮತ್ತು ಮರುವಿತರಣೆಯಾಗುತ್ತದೆ.

ಆದರೆ ಸಹಕಾರ ಸಂಘಗಳಲ್ಲಿ ಸಂಘದ ಸೇವೆಯನ್ನು ಎಷ್ಟು ಉಪಯೋಗಿಸುತ್ತೇನೆ ಎಂದು ನಿರ್ದಿಷ್ಟವಾಗಿ ಹೇಳುವುದು ಸಾಧ್ಯವಿಲ್ಲ. ಗ್ರಾಹಕರಾಗಿ ವರ್ಷಕ್ಕೆಎಷ್ಟು ರೂಪಾಯಿಯ ಮಾಲನ್ನು ಸಹಕಾರಸಂಘದಿಂದ ಖರೀದಿಸುತ್ತೇವೆ ಎನ್ನುವುದು ಹೇಳಲು ಸಾಧ್ಯವೇ? ಆದರೂ ಸಹಕಾರದಲ್ಲಿ ಸಂಸ್ಥೆಯೊಂದಿಗೆ ನಡೆಯಿಸಿದ ವ್ಯಾಪಾರವೇ ಆರ್ಥಿಕ ಫಲಿತವನ್ನು ಹಂಚಿಕೊಳ್ಳಲು ಆಧಾರ ಸೂತ್ರವಾಗಿದೆ. ಅದು ವರ್ಷದಿಂದ ವರ್ಷಕ್ಕೆ – ಕಾಲದಿಂದ ಕಾಲಕ್ಕೆ ಬದಲಾಗುತ್ತಾ ಹೋಗುತ್ತದೆ. ಒಂದು ವರ್ಷದಲ್ಲಿ 200 ಲೀಟರ್ ಹಾಲು ಸರಬರಾಜು ಮಾಡಿದ ಉತ್ಪಾದಕ ಮುಂದಿನ ವರ್ಷದಲ್ಲಿ 300 ಲೀಟರ್ ಹಾಲನ್ನು ಸುರಿಯಬಹುದು. ಅಂದರೆ ಈ ಸಂಸ್ಥೆಯ ಜೊತೆ ಈ ವ್ಯಕ್ತಿಯ ವ್ಯಾಪಾರ ಹೆಚ್ಚಿದಂತಾಯಿತು. ಹೆಚ್ಚಿದ ವ್ಯಾಪಾರಕ್ಕೆ ಹೆಚ್ಚಿನ ಲಾಭವನ್ನು ಆತ ಪಡೆಯಬಹುದು, ಲಾಭವನ್ನೇನೋ ವ್ಯಾಪಾರದ ಪರಿಮಾಣದಲ್ಲಿ ಹಂಚಬಹುದಾದರೂ, ನಿರ್ವಹಣಾ ಮಂಡಲಿ ಹೇಗೆ ಆಯ್ಕೆಯಾಗಬೇಕು ಎನ್ನುವುದಕ್ಕೆ ಸ್ಪಷ್ಟ ಸೂತ್ರವಿಲ್ಲ. ವ್ಯಾಪಾರಕ್ಕೆ ತಕ್ಕಂತೆ ಹಕ್ಕನ್ನು ಬದಲಿಸುತ್ತಾ ಹೋದರೆ ಆ ಸಂಸ್ಥೆಯ ನಿರ್ವಹಣೆ ದುಸ್ತರವಾಗಿಬಿಡುತ್ತದೆ. ಹೀಗಾಗಿಯೇ ತಲೆಗೊಂದು ಓಟನ್ನು ಸೂತ್ರಗಳು ನೀಡುತ್ತವೆ. ಮಹಾಮಂಡಲಿಗಳಲ್ಲಿ ಇದು ಭಿನ್ನವಾಗಿರಬಹುದಾದರೂ, ಪ್ರಾಥಮಿಕ ಮಟ್ಟದ ಸಹಕಾರ ಸಂಘಗಳಲ್ಲಿ ಈ ಸೂತ್ರವನ್ನೇ ಅಳವಡಿಸಲಾಗಿದೆ. ಈ ಸಮಾನತೆಗೆ ಔದ್ಯೋಗಿಕ ಕ್ರಾಂತಿಯ ಸಮಯದಲ್ಲಿ ಸಮಾನತೆಯ ಸೂತ್ರ ಹಿಡಿದು ಏರ್ಪಾಟಾದ ಕಾರ್ಮಿಕ ಸಂಘಗಳ ಹಿನ್ನೆಲೆಯೂ ಕಾರಣವಾಗಿರಬಹುದು.

## ಸೂತ್ರಾರ್ಥದ ಪದರಗಳು
## ಅದರಿಂದ ಸಹಕಾರಿ ವ್ಯಾಪಾರದ ಮೇಲಿನ ಪರಿಣಾಮಗಳು

ಒಂದೂವರೆ ಶತಮಾನದಿಂದಲೂ ಸಹಕಾರವೆಂದರೆ ಸೂತ್ರಾಧಾರವಾಗಿ ನಡೆಯುವ ಸಂಸ್ಥೆಗಳೆಂದು ನಾವು ನಂಬಿ ಬಂದಿದ್ದೇವೆ. ಸೂತ್ರಗಳು ಬಂಡವಾಳದ ಕೇಂದ್ರೀಕರಣವನ್ನು ನಿರಾಕರಿಸಿದವಾದರೂ ಬಂಡವಾಳಶಾಹಿ ಪದ್ಧತಿಯಲ್ಲಿದ್ದ ವ್ಯಾಪಾರವನ್ನು ಅಲ್ಲಗಳೆಯಲಿಲ್ಲ. ಬದಲಿಗೆ ಸಹಕಾರ ವ್ಯಾಪಾರದ ಹೊಸ



ವ್ಯಾಖ್ಯೆಯನ್ನು ರೂಪಿಸಹೊರಟಿತು. ಕಾಂಚಾಣವೇ ಮೂಲಭೂತ ಉದ್ದೇಶವಾದಾಗ ಯಾವ ಸೂತ್ರಗಳೂ ಅಡ್ಡ ಬರುವುದಿಲ್ಲ. ಆದರೆ ಸೂತ್ರಗಳು ಪವಿತ್ರವಾದಾಗ ವ್ಯಾಪಾರಕ್ಕೆ – ಪೈಪೋಟಿಗೆ ಏಟು ಬೀಳಬಹುದು. ಹೀಗಾಗಿ ಸಹಕಾರಿ ಸೂತ್ರಗಳು ಒಂದೆಡೆಯಿಂದ ಬಂಡವಾಳ ಮೂಲದ ವ್ಯಾಪಾರಕ್ಕೆ ಸವಾಲನ್ನೊಡ್ಡಿದರೂ ವ್ಯಾಪಾರದ ಮೂಲಧರ್ಮವನ್ನು ಉಲ್ಲಂಘಿಸಿ ನಡೆಯಲು ಸಾಧ್ಯವಿಲ್ಲ. ಹೀಗಾಗಿ ವ್ಯಾಪಾರಿ ದೃಷ್ಟಿಯಿಂದ ಸಹಕಾರಿ ಸೂತ್ರಗಳೆಲ್ಲವೂ ಒಂದಿಲ್ಲ ಒಂದು ರೀತಿಯಲ್ಲಿ ತೊಡಕನ್ನೇ ಉಂಟುಮಾಡುತ್ತವೆ. ಈ ಭಾಗದಲ್ಲಿ ನಾನು ಅದನ್ನು ಚರ್ಚಿಸುತ್ತೇನೆ.

### 1. ಮುಕ್ತ ಸದಸ್ಯತ್ವದ ತೊಡಕುಗಳು

ಮುಕ್ತ ಸದಸ್ಯತ್ವದ ಅವಶ್ಯಕತೆಯನ್ನು ಆಗಲೇ ಚರ್ಚಿಸಿದ್ದೇವೆ. ಇದರಲ್ಲಿ ಸಂಸ್ಥೆಯ ಸೇವೆಗಳನ್ನು ಉಪಯೋಗಿಸಬಲ್ಲವರು – ಉಪಯೋಗಿಸಲು ತಯಾರಿರುವವರು ಮಾತ್ರವೇ ಯಾವುದೇ ಅಡ್ಡಿಯಿಲ್ಲದೇ ಸದಸ್ಯರಾಗಬಹುದಾಗಿದೆ. ಅಂದರೆ ಯಾವುದೇ ಕಾಲಕ್ಕೆ ಹೊಸಬರು ಬರುವುದಕ್ಕೂ, ಹಳೆಬರು ನಿರ್ಗಮಿಸುವುದಕ್ಕೂ ತಾವಿರಬೇಕು. 'ಉಳಿಕೆ'ಯನ್ನು ವರ್ಷದ ವ್ಯಾಪಾರದ ಆಧಾರವಾಗಿ ಹಂಚುವುದರಿಂದ ಯಾರಿಗೆ ಎಷ್ಟು ಸೇರಬೇಕೆಂಬುದು ವರ್ಷೇ ವರ್ಷೇ ವ್ಯಕ್ತಿಯ ವ್ಯಾಪಾರ ಮತ್ತು ಸಂಸ್ಥೆಯ 'ಉಳಿಕೆ'ಯಾಧಾರವಾಗಿ ಬದಲಾಗುತ್ತಿರುತ್ತದೆ. ಇದರಿಂದಾಗಿ ಸಂಸ್ಥೆಯ ಸದಸ್ಯತ್ವ ಸ್ಥಾಯಿಯಾಗಿರುವುದಿಲ್ಲ. ಪ್ರತೀ ವರ್ಷವೂ ಇದರಲ್ಲಿ ಬದಲಾವಣೆಗೆ ತಾವಿದೆ. ಆದರೆ ಸಂಸ್ಥೆಯನ್ನು ಅಕಸ್ಮಾತ್ ಮುಚ್ಚಿಬಿಟ್ಟರೆ? ಹೊರಗಿನವರಿಗೆ ಕೊಡಬೇಕಾದ್ದನ್ನೆಲ್ಲಾ ಕೊಟ್ಟನಂತರ ಉಳಿಯುವ ಸಂಪನ್ಮೂಲಗಳನ್ನು ಏನು ಮಾಡಬೇಕು?

ಬಂಡವಾಳದ ಆಧಾರದ ಮೇಲೆ ನಡೆವ ಸಂಸ್ಥೆಗಳಲ್ಲಿ ಈ ಗೊಂದಲವಿಲ್ಲ. ಅಲ್ಲಿ ಮುಚ್ಚುವಾಗ ಬರುವ 'ಉಳಿಕೆ'ಯೂ ಬಂಡವಳ ಹೂಡಿದವರಿಗೆ ಬಂಡವಾಳದ ಪರಿಮಾಣದಲ್ಲಿ ಹೋಗುತ್ತದೆ. ಗೊಂದಲ ಯಾಕಿಲ್ಲವೆಂದರೆ ಅಕಸ್ಮಾತ್ ಯಾರಾದರೂ ನಡುಮಧ್ಯದಲ್ಲಿ ಸಂಸ್ಥೆಯ ಹೂಡಿಕೆಯಲ್ಲಿ ಪಾಲುದಾರರಾಗಬೇಕಿದ್ದರೆ ಈಗಾಗಲೇ ಇರುವ ಹೂಡಿಕೆದಾರರಿಂದ ಷೇರುಗಳನ್ನು ಪಡೆಯಬೇಕು. ಆ ಷೇರುಗಳನ್ನು ಪಡೆಯುವಾಗ ಕೊಡುವ ಬೆಲೆಯಲ್ಲಿ ಅಲ್ಲಿಯವರೆಗೆ ಆರ್ಜಿಸಿ ವಿತರಿಸದ ಲಾಭದ ಲೆಕ್ಕವೂ ಇರುತ್ತದೆ. ಆದರೆ ಮುಕ್ತ ಸದಸ್ಯತ್ವ ಇರುವ ಸಹಕಾರ ಸಂಘಗಳಲ್ಲಿ ಯಾವಾಗ ಪ್ರವೇಶಿಸಿದರೂ – ನಿರ್ಗಮಿಸಿದರೂ ಬಂಡವಾಳ ನಿಮಿತ್ತ ಮಾತ್ರದ ಮೊತ್ತದಲ್ಲಿಯೇ ಇರುತ್ತದೆ.

ಸಹಕಾರೀ ನಿಯಮಗಳು ಈ ರೀತಿಯ 'ಉಳಿಕೆ'ಯು ಯಾರಿಗೂ ಸಂದದ್ದಲ್ಲ ಎಂದು ನಿರ್ಧರಿಸಿವೆ. ಯಾಕೆಂದರೆ ಆ 'ಉಳಿಕೆ'ಯಲ್ಲಿ ತಲೆಮಾರುಗಳು ಹಂಚಿಕೊಳ್ಳದ ಲಾಭಂಶದ ಭಾಗಗಳಿರುತ್ತವೆ. ಮುಕ್ತ ಸದಸ್ಯತ್ವದ ಸದ್ಯದ ಸದಸ್ಯರು ಆ ಲಾಭಾಂಶಕ್ಕೆ

ಭಾಗಿಗಳಾಗುವ ಹಕ್ಕು ಇಲ್ಲ. ಹೀಗಾಗಿ ಸಹಕಾರ ಸಂಸ್ಥೆಗಳಲ್ಲಿ ಪ್ರಸಕ್ತ ವರ್ಷದ 'ಉಳಿಕೆ'ಯ ವಿತರಣೆ ಸಾಧ್ಯವಾಗುತ್ತದಾದರೂ ಹಳೆಯ ಒಟ್ಟುಗೂಡಿಸಿದ 'ಉಳಿಕೆ'ಯನ್ನು ಹಂಚಲು ಬರುವುದಿಲ್ಲ. ಇದರಿಂದಾಗಿ ಸಹಕಾರಿ ಸಂಸ್ಥೆಗಳಿಗೆ – ಅದರಲ್ಲೂ ಬಂಡವಾಳದ ಅವಶ್ಯಕತೆಯಿರುನ ಸಹಕಾರಿ ಸಂಸ್ಥೆಗಳಿಗೆ ತೊಂದರೆಯಾಗುವುದು ಸಹಜ. ಬಂಡವಾಳದ ಕೇಂದ್ರಿತ ಸಂಸ್ಥಾಗತ ಮಾದರಿಯಿಂದ ಸಹಕಾರಕ್ಕೆ ಹೋಗಿ, ನಂತರ ವ್ಯಾಪಾರ ಬೆಳೆಯಲು ಬಂಡವಾಳ ಬೇಕೆಂದಾಗ ತೊಡಕು ಉಂಟಾಗುವುದು ಸಹಜವೇ. ಇದನ್ನು ಮೀರಲು ಸಹಕಾರ ಸಂಸ್ಥೆಗಳು ಅನೇಕ ರೀತಿಯಲ್ಲಿ ಪ್ರಯತ್ನಿಸಿವೆ. ಅದನ್ನೂ ನಂತರ ಚರ್ಚಿಸುತ್ತೇವೆ.

### 2. ಪ್ರಜಾಪ್ರಭುತ್ವ ನೀತಿಯ ಸೂತ್ರ

ಈ ಸೂತ್ರವು ವ್ಯಾಪಾರೀ ದೃಷ್ಟಿಯಿಂದ ಅತ್ಯಂತ ತೊಡಕಿನ ಸೂತ್ರವಾಗಿಬಿಡುತ್ತದೆ. ಮೊದಲನೆಯ ತೊಡಕೆಂದರೆ ಇದನ್ನು ಲಾಗೂ ಮಾಡುವುದು ಹೇಗೆನ್ನುವ ಮಾತು. ಸಾಮಾನ್ಯವಾಗಿ ಒಪ್ಪಿತವಾಗಿರುವ ಪದ್ಧತಿಯೆಂದರೆ ಪ್ರತೀ ಸದಸ್ಯನಿಗೆ ಒಂದೇ ಓಟು ಎನ್ನುವ ಸೂತ್ರದ ಮೇಲೆ ಈ ಸೂತ್ರವನ್ನು ಅನಾದಿ ಕಾಲದಿಂದಲೂ ಸಹಕಾರಿಗಳು ಪಾಲಿಸುತ್ತಾ ಬಂದಿದ್ದಾರೆ. ಆದರೆ ಈ ಸೂತ್ರದಿಂದ ಸಹಕಾರ ಸಿದ್ಧಾಂತಕ್ಕೂ, ಸಹಕಾರ ಸಂಸ್ಥೆಯ ವ್ಯಾಪಾರಕ್ಕೂ ಬದ್ಧರಾದವರು ಚುನಾಯಿತರಾಗಿ ಬರುವುದರ ಬಗ್ಗೆ ಅನುಮಾನಗಳಿವೆ

ಹೀಗೆ ಕಾರ್ಮಿಕ ಸಂಘಗಳ ಹಿನ್ನೆಲೆಯಿಂದಾಗಿ ಬಂದ ಸಹಕಾರೀ ಸೂತ್ರಗಳೇ ಒಮ್ಮೊಮ್ಮೆ ಸಹಕಾರಿ ಸಂಸ್ಥೆಗಳ ಮೂಲಭೂತ ವ್ಯಾಪಾರೀ ಲಕ್ಷಣಕ್ಕೆ ಮುಳುವಾಗಬಹುದು. ಒಬ್ಬೊಬ್ಬ ಸದಸ್ಯರಿಗೆ ಒಂದೊಂದೇ ಓಟು ಅನ್ನುವ ಈ ಸೂತ್ರ ಮತ್ತೊಂದು ಸಹಕಾರೀ ಸೂತ್ರವಾದ ತೆರೆದ ಸದಸ್ಯತ್ವಕ್ಕೂ ಕೊಂಡಿ ಹಾಕಿಕೊಂಡಿದೆ. ಇದರಿಂದ ಎರಡು ರೀತಿಯ ಸಮಸ್ಯೆಗಳು ಉದ್ಭವವಾಗುತ್ತವೆ:

- ಸಂಸ್ಥೆಯ ಸೇವೆಯನ್ನು ತುಸುವೇ ಉಪಯೋಗಿಸುವ ವ್ಯಕ್ತಿಗೂ ಸಂಸ್ಥೆಯ ಸೇವೆಯ ಮೇಲೆಯೇ ತನ್ನ ಜೀವನೋಪಾಧಿ ಅವಲಂಬಿತವಾಗಿರುವ ಸದಸ್ಯನಿಗೂ ಸಮಾನ ಓಟು ಸರಿಯೇ?
- ಸಹಕಾರ ಸಂಘದ ವ್ಯಾಪಾರದಲ್ಲಿ ಹೆಚ್ಚಿನ ಭಾಗಸ್ವಾಮ್ಯವಿಲ್ಲದಿದ್ದರೂ, ಜನಪ್ರಿಯರಾದ ಒಂದೇ ಕಾರಣಕ್ಕೆ ಸಂಘದ ನಿರ್ವಹಣಾಮಂಡಲಿಯಲ್ಲಿ ಕೆಲವರು ಸ್ಥಾನ ಪಡೆಯಬಹುದು.
- ಪ್ರಾಜಾತಾಂತ್ರಿಕ ಸೂತ್ರಗಳ ಮೇಲೆಯೇ ಈ ಸಂಸ್ಥೆಗಳು ನಡೆಯುವುದರಿಂದ – ಅದರ ಚುನಾವಣಾ ಪ್ರಕ್ರಿಯೆ ಸರಕಾರವನ್ನು ರಚಿಸುವ ಚುನಾವಣಾ ಪ್ರಕ್ರಿಯೆಗೆ ನಿಕಟವಾದ್ದರಿಂದ – ಈ ಸಂಸ್ಥೆಗಳನ್ನು ವ್ಯಾಪಾರೀ



ಸಂಸ್ಥೆಗಳಾಗಿ ನೋಡುವುದಕ್ಕಿಂತ ಸರಕಾರೀ ಸಂಸ್ಥೆಗಳಾಗಿ ಕಾಣುವ ಅಪಾಯದ ಅನುಭವವೂ ಇದೆ.

ಜನಪ್ರಿಯರಾದವರು ನಿರ್ವಹಣಾ ಮಂಡಲಿಗೆ ಬಂದರೂ, ಅವರು ಸದಸ್ಯರ ಹಿತಾಸಕ್ತಿಗಳನ್ನು ಕಾಪಾಡುವವರಾಗಿದ್ದರೆ ನಷ್ಟವೇನೂ ಇಲ್ಲ. ಸಹಕಾರಿ ಸಂಸ್ಥೆಗಳನ್ನು ಪೋಷಿಸಿ ಬೆಳೆಯಿಸಿರುವ ಎಷ್ಟೋ ಮಂದಿ ನಾಯಕರು ಆ ಸಮುದಾಯದಿಂದ ಬಂದವರೇ ಆಗಿರಲಿಲ್ಲ. ಆದರೆ ಸಹಕಾರಿ ಸಂಸ್ಥೆಯ ಹಿತಾಸಕ್ತಿಯನ್ನು ಎಂದಿಗೂ ಕಾಪಾಡುತ್ತಾ ಮುಂದುವರೆದವರಾಗಿದ್ದರು. ಹಾಗೆಯೇ ಪ್ರಜಾತಾಂತ್ರಿಕ ವ್ಯವಸ್ಥೆ ಎಂದ ಮಾತ್ರಕ್ಕೇ ತಮ್ಮ ವ್ಯಾಪಾರೀ ಗುಣಗಳನ್ನು ಕಳೆದುಕೊಳ್ಳುವ ಅವಶ್ಯಕತೆಯಿಲ್ಲ ಎನ್ನುವುದಕ್ಕೂ ನಮಗೆ ಸಾಕಷ್ಟು ಉದಾಹರಣೆಗಳು ಸಹಕಾರ ಕ್ಷೇತ್ರದಲ್ಲಿ ಕಾಣಸಿಗುತ್ತವೆ.

ಸಂಸ್ಥೆಯ ನಿರ್ವಹಣಾ ಹಕ್ಕುಗಳು ಸದಸ್ಯರು ನೀಡುವ ವ್ಯಾಪಾರಕ್ಕೆ ಅನುಗುಣವಾಗಿರಬೇಕೆನ್ನುವ ವಾದವೂ ಅನೇಕ ಕಡೆ ಕಂಡುಬಂದಿದೆ. ಆದರೆ ಪ್ರಾಥಮಿಕ ಸಂಘಗಳಲ್ಲಿ ಇದು ಜಾರಿಗೆ ಬಂದಿಲ್ಲ. ಮೇಲ್ಮಟ್ಟದ ಒಕ್ಕೂಟದ ಚುನಾವಣೆಗಳಲ್ಲಿ ಕೆಲವೆಡೆ ವ್ಯಾಪಾರಾಧಾರಿತ, ಅಥವಾ ಪ್ರಾಥಮಿಕ ಸಂಘದ ಸದಸ್ಯ ಸಂಖ್ಯೆಯಾಧಾರಿತ ಓಟು ಹಕ್ಕುಗಳಿರುವುದನ್ನು ಕಂಡಿದ್ದೇವೆ. ಪೂರ್ಣವಾಗಿ ವ್ಯಾಪಾರಾಧಾರಿತ ಓಟಿನ ಹಕ್ಕುಗಳನ್ನು ಅಳವಡಿಸುವುದರಲ್ಲಿಯೂ ತೊಡಕುಗಳಿವೆ. ಅನೇಕ ಕಾರಣಗಳಿಂದಾಗಿ ಉತ್ಪತ್ತಿಯಲ್ಲಿ ಏರುಪೇರಾಗಿ ಅದು ಸಂಸ್ಥೆಯೊಂದಿಗಿನ ವ್ಯಾಪಾರದಲ್ಲಿ ಏರುಪೇರು ಮಾಡಬಹುದು. ಅನೇಕ ಸಹಕಾರ ಸಂಸ್ಥೆಗಳು ಬರೇ ಸಂಖ್ಯೆಯಾಧಾರಿತ ಪ್ರಜಾಪ್ರಭುತ್ವದ ಮಾದರಿಯನ್ನು ಹೆಚ್ಚು ಜವಾಬ್ದಾರಿಯುತವನ್ನಾಗಿ ಮಾಡುವಂತೆ ತಮ್ಮ ಬೈಲಾಗಳನ್ನು ರೂಪಿಸಿದ್ದಾರೆ. ಅದರಲ್ಲಿ ನ್ಯೂನತಮ ವ್ಯಾಪಾರ, ವರ್ಷದ ಕನಿಷ್ಠ ದಿನಗಳು ಸಹಕಾರ ಸಂಘದ ವ್ಯಾಪಾರದಲ್ಲಿ ಭಾಗವಹಿಸುವಿಕೆ ಯಂತಹ ಕೆಲವು ಅಂಶಗಳೂ ಸೇರಬಹುದು. ಒಟ್ಟಾರೆ ಸದಸ್ಯರ ಹಿತಾಸಕ್ತಿಗಳನ್ನು ಕಾಪಾಡಲು ಈ ಸೂತ್ರವನ್ನು ಸಮರ್ಪಕವಾಗಿ ತಿದ್ದಿ ಉಪಯೋಗಿಸಬೇಕಾಗುತ್ತದೆ.

ಮೊದಲಿಗೆ ರೂಪಿಸಿದ ಸೂತ್ರಗಳಲ್ಲಿ ಪ್ರಜಾಪ್ರಭುತ್ವದ ಸೂತ್ರದೊಂದಿಗೆ ರಾಜಕೀಯ ಹಾಗೂ ಮತೀಯ ವಿಷಯಗಳಲ್ಲಿ ತಟಸ್ಥತೆಯು ಪಯೋನೀರ್‌ಗಳ ಹಿನ್ನೆಲೆಯಿಂದ ಬಂದಿದ್ದಾಗಿರಬಹುದು. ಕಾರ್ಮಿಕ ಸಂಘಟನೆಯ ಹಿನ್ನೆಲೆಯಲ್ಲಿ ಈ ಎಲ್ಲಕ್ಕೂ ವಿಶೇಷ ಪ್ರಾಮುಖ್ಯತೆ ದೊರೆಯುತ್ತದೆ. ಹೀಗಾಗಿ ಕಾರ್ಮಿಕ ಸಂಘಗಳನ್ನು ರೂಪಿಸಿದ ಕೆಲವು ಸೂತ್ರಗಳು ಇಲ್ಲಿಯೂ ತಲೆದೂರಿರಬಹುದು. ಸಮಾನ ಓಟಿನ ಹಕ್ಕು, ಹಕ್ಕುಗಳ ಬಗ್ಗೆ ವಿದ್ಯೆ–ತರಬೇತಿ, ಇತರರೊಂದಿಗೆ ಸಹಕಾರ – ಈ ಎಲ್ಲವೂ ಕಾರ್ಮಿಕ ಸಂಘಗಳಲ್ಲಿಯೂ ರೂಪಿಸಿದ ಸೂತ್ರಗಳೇ. ಈ ಕಾರಣವನ್ನು ಬಿಟ್ಟರೆ ಬಂಡವಾಳಮೂಲವಾದ ಸೂತ್ರವನ್ನು ವ್ಯಾಪಾರಮೂಲವಾಗಿ

ಪರಿವರ್ತಿಸದಿರಲು ಯಾವುದೇ ಕಾರಣಗಳು ನಮಗೆ ಕಾಣುವುದಿಲ್ಲ. ಭಾರತದಲ್ಲಿ ಸಹಕಾರಿ ಸಕ್ಕರೆ ಕಾರ್ಖಾನೆಗಳಲ್ಲಿ ಒಂದು ವಿಚಿತ್ರ ರೀತಿಯಲ್ಲಿ ಬಂಡವಾಳಕ್ಕೂ, ವ್ಯಾಪಾರಕ್ಕೂ, ಓಟಿನ ಹಕ್ಕಿಗೂ ತಾಳೆಹಾಕಿರುವ ಉದಾಹರಣೆ ನಮಗೆ ದೊರೆಯುತ್ತದೆ. ಆ ಉದಾಹರಣೆಯಿಂದ ಸಹಕಾರಿ ಸಂಸ್ಥೆಗಳ ನಿಯಂತ್ರಣವನ್ನು ವ್ಯಾಪಾರದ ಆಧಾರದ ಮೇಲೆ ಬಿಟ್ಟುಕೊಡಲು ಸಾಧ್ಯವೆಂದು ಹೇಳಬಹುದು. ಹೀಗಿದ್ದಾಗ್ಯೂ ಸಮಾನತೆಯ ಪ್ರಜಾಪ್ರಭುತ್ವವಾದೀ ಸೂತ್ರವನ್ನೇ ಸಹಕಾರ ರಂಗ ಮತ್ತೆ ಮತ್ತೆ ಧೃಢೀಕರಿಸಿ ಮುಂದುವರೆದಿದೆ.

## 3. ಸದಸ್ಯರ ಆರ್ಥಿಕ ಭಾಗಸ್ವಾಮ್ಯ

ಈಗ ರೂಪಿಸಿರುವ ಆರ್ಥಿಕ ಭಾಗಸ್ವಾಮ್ಯದ ಸೂತ್ರವನ್ನು ಹಿಂದೆ ಎರಡು ಭಿನ್ನ ಸೂತ್ರಗಳಾಗಿ ನಮೂದಿಸಲಾಗಿತ್ತು. ಬಂಡವಾಳದ ಮೇಲೆ ಕೊಡುವ ಬಡ್ಡಿ/ ಲಾಭಾಂಶದ ಮೇಲೆ ಪರಿಮಿತಿ ಒಂದಾಗಿದ್ದರೆ, 'ಉಳಿಕೆ'ಯನ್ನು ವ್ಯಾಪಾರದ ಆಧಾರದ ಮೇಲೆ ಹಂಚಿಕೊಳ್ಳುವುದು ಎರಡನೆಯದಾಗಿತ್ತು. ಈಗಿನ 1995ರ ಸೂತ್ರದಲ್ಲಿ ಸಾಮೂಹಿಕ ಆಸ್ತಿಗಳನ್ನು ನಿರ್ಮಿಸುವುದು, ಯಾರಿಗೂ ಸಲ್ಲದಂತಹ ನಿಕ್ಷೇಪ ನಿಧಿಗಳನ್ನು ಏರ್ಪಾಟು ಮಾಡುವುದನ್ನು ಸೇರಿಸಲಾಗಿದೆ. ಮೊದಲಿಗೆ ಬಂಡವಾಳ ಅಷ್ಟೇನೂ ಮುಖ್ಯವಾಗಿರದ ಗ್ರಾಹಕ ಕ್ಷೇತ್ರದಲ್ಲಿ ಸಹಕಾರ ಕೇಂದ್ರೀಕೃತವಾಗಿದ್ದರಿಂದ ಬಂಡವಾಳ, ನಿಕ್ಷೇಪಗಳಿಗೆ ಪ್ರಾಮುಖ್ಯತೆಯಿರಲಿಲ್ಲ. ಆದರೆ ಈಗ ಸಹಕಾರ ಸಂಸ್ಥೆಗಳು ಹೈನುಗಾರಿಕೆ, ಸಕ್ಕರೆ ಕಾರ್ಖಾನೆಗಳಂತಹ ಭಿನ್ನ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವುದರಿಂದ ಹೂಡಿಕೆಯೂ – ಬಂಡವಾಳವೂ ಮುಖ್ಯವಾಗುತ್ತದೆ. ಹೀಗಾಗಿ ಹೂಡಿಕೆ – ಬಂಡವಾಳ ಕೇಂದ್ರಿತ ಕ್ಷೇತ್ರಗಳಲ್ಲಿನ ಸಹಕಾರೀ ಸಂಸ್ಥೆಗಳಿಗೆ ತಮ್ಮದೇ ಆದ ಸವಾಲುಗಳಿವೆ. ಸೂತ್ರಗಳೇನೋ ಸಾಮೂಹಿಕ ಉಪಯೋಗಕ್ಕಾಗುವ ಆಸ್ತಿ, ನಿಕ್ಷೇಪ ನಿಧಿಗಳ ಬಗ್ಗೆ ಮಾತನಾಡುತ್ತದಾದರೂ ಸ್ವತಃ ಈ ರೀತಿಯ ಹೂಡಿಕೆಗೆ ಸಹಕಾರವು ಏರ್ಪಾಟಾಗಿರುವ ರೀತಿಯಲ್ಲಿ ಯಾವುದೇ ಆಮಿಷ – ಪ್ರೋತ್ಸಾಹದಾಯಕವಾದ ಅಂಶಗಳಿಲ್ಲ. ಯಾಕೆಂದರೆ ಲಾಭಾಂಶವನ್ನು ವ್ಯಾಪಾರ ಸೂತ್ರದನುಸಾರವಾಗಿ ಹಂಚದೇ ಹೆಚ್ಚೆಚ್ಚು ಮರುಹೂಡಿಕೆ ಮಾಡಿದರೆ ಅದರಿಂದಾಗುವ ಅಧಿಕ ಉತ್ಪಾದಕತೆಯ ಲಾಭವನ್ನು ಹೊಸ ಸದಸ್ಯರು ಹಳೆಬರಿಗಿಂತ ಹೆಚ್ಚಾಗಿ ಪಡೆಯುತ್ತಾರೆ. ಹಳೆಬರು ತಮ್ಮ ಲಾಭಾಂಶವನ್ನು ತ್ಯಾಗ ಮಾಡುವುದಲ್ಲದೇ, ಹೊಸಬರು ಯಾವುದೇ ಹೆಚ್ಚಿನ ಮೊಬಲಗನ್ನು ನೀಡದೆಯೇ ಸದಸ್ಯರಾಗುವುದನ್ನೂ ನೋಡಬೇಕಾಗಿದೆ. ಸಂಸ್ಥೆ ಮುಚ್ಚಿದಾಗ ಅಥವಾ ಸದಸ್ಯತ್ವವನ್ನು ತ್ಯಜಿಸಿದಾಗ ಅವರಿಗೆ ತ್ಯಾಗಮಾಡಿದ ಲಾಭಾಂಶದ ಯಾವುದೇ ಭಾಗವೂ ದಕ್ಕುವುದಿಲ್ಲ. ಹೀಗಾಗಿ ಸಹಕಾರ ಸಂಘಗಳಲ್ಲಿ ಯಾವ ವರ್ಷದಲ್ಲಿ ಆರ್ಜಿಸಿದ



'ಉಳಿಕೆ'ಯನ್ನು ಆ ವರ್ಷವೇ, ತಕ್ಷಣವೇ ಸದಸ್ಯರು ತೆಗೆದುಹಂಚುವ ಉತ್ಸಾಹವನ್ನು ತೋರುವುದರಲ್ಲಿ ಆಶ್ಚರ್ಯದ ಮಾತೇನೂ ಇರುವುದಿಲ್ಲ. ಸಹಕಾರಿ ಸಂಸ್ಥೆಗಳ ಬೆಳವಣಿಗೆಗೆ ಹೂಡಿಕೆಯನ್ನು ಕಲೆಹಾಕುವುದೇ ಸಹಕಾರ ಸಂಸ್ಥೆಗಳ ಅತೀ ದೊಡ್ಡ ಸವಾಲಾಗುತ್ತದೆ.

## 4. ಸ್ವಾಯತ್ತತೆ ಮತ್ತು ಸ್ವಾತಂತ್ರ

ನಾಲ್ಕನೆಯ ಸೂತ್ರವಾದ ಸ್ವಾಯತ್ತತೆ ಮತ್ತು ಸ್ವಾತಂತ್ರವನ್ನು 1995ರ ಪರಾಮರ್ಶೆಯಲ್ಲಿ ಅಳವಡಿಸಲಾಯಿತು. ಬಹುಶಃ ವಿಶ್ವದಾದ್ಯಂತ ಸಹಕಾರ ಸಂಸ್ಥೆಗಳು ಎದುರಿಸುತ್ತಿರುವ ಸವಾಲುಗಳನ್ನು ಪರಿಗಣನೆಗೆ ತೆಗೆದುಕೊಂಡು ಈ ಸೂತ್ರವನ್ನು ಅಳವಡಿಸಿರಲಿಕ್ಕೆ ಸಾಕು. ಸಹಕಾರಿ ಸಂಸ್ಥೆಗಳು ಪ್ರಜಾಸ್ವಾಮ್ಯ ಪದ್ಧತಿಯನ್ನು ಪಾಲಿಸುವುದರಿಂದ ಅವುಗಳು ಇದೇ ಸೂತ್ರದ ಮೇಲೆ ನಡೆಯುವ ಮಿಕ್ಕ ರಾಜಕೀಯ ಸಂಸ್ಥೆಗಳೊಂದಿಗೆ ಕೊಂಡಿಹಾಕಿಕೊಂಡಿವೆ. ನಮ್ಮ ದೇಶದಲ್ಲಿಯೂ ಸರಕಾರಗಳು ಮಿಕ್ಕ ವ್ಯಾಪಾರಿ ಸಂಸ್ಥೆಗಳಿಗಿಂತ ಹೆಚ್ಚು ಸಹಕಾರ ರಂಗದ ಬಗ್ಗೆ ವಿಶೇಷ ಕಾಳಜಿ ಮತ್ತು ಆಸ್ಥೆಯನ್ನು ತೋರುವುದನ್ನು ಕಂಡಿದ್ದೇವೆ. ಹೆಚ್ಚಿನಂಶ ಸಹಕಾರಿ ಸಂಸ್ಥೆಗಳನ್ನು ಸರಕಾರಿ ಸಂಸ್ಥೆಗಳಾಗಿ ಪರಿಗಣಿಸುವ ಪ್ರಕ್ರಿಯೆಯೂ ಕಂಡುಬರುತ್ತದೆ. ಹೀಗಾಗಿಯೇ ಸಹಕಾರೀ ಸ್ವಾಯತ್ತತೆ ಮತ್ತು ಸ್ವಾತಂತ್ರದ ಬಗ್ಗೆ ವಿಶೇಷ ಟಿಪ್ಪಣಿಯನ್ನು, ಪ್ರತ್ಯೇಕ ಸೂತ್ರವನ್ನೂ ನೀಡಬೇಕೆಂದು ಇದನ್ನು ಪರಾಮರ್ಶೆ ಮಾಡಿದವರಿಗೆ ಅನ್ನಿಸಿರಬೇಕು. ಸಹಕಾರಿ ಸಂಸ್ಥೆಗಳು ನಿಜಕ್ಕೂ ವ್ಯಾಪಾರೀ ಸಂಸ್ಥೆಗಳು. ಪರಸ್ಪರತೆಯ ಸೂತ್ರದ ಆಧಾರದ ಮೇಲೆ ವ್ಯಾಪಾರವನ್ನು ನಡೆಸುವ ಈ ಸಂಸ್ಥೆಗಳು ವಿಕಾಸದ ಕ್ಷೇತ್ರದಲ್ಲಿ ಕೆಲಸಮಾಡುವ ಸ್ವಯಂಸೇವಾ ಸಂಸ್ಥೆಗಳಲ್ಲ. ವ್ಯಾಪಾರಿ ಸಂಸ್ಥೆಗಳು ಬಂಡವಾಳದ ಮೇಲೆ 'ಉಳಿಕೆ'ಯನ್ನು ಹೆಚ್ಚಿಸುವತ್ತ ಶ್ರಮ ವಹಿಸುವಂತೆಯೇ ಸಹಕಾರೀ ಸಂಸ್ಥೆಗಳು ವ್ಯಾಪಾರದ ಮೇಲೆ 'ಉಳಿಕೆ'ಯನ್ನು ಹೆಚ್ಚಿಸುವ ಸೂತ್ರ ಹಿಡಿದು ವ್ಯಾಪಾರ ಮಾಡುತ್ತವೆ, ಅಷ್ಟೇ. ಸಹಕಾರೀ ಸಂಸ್ಥೆಗಳು ಯಾವುದಾದರೂ ಸಾಮಾಜಿಕ ಕಾರ್ಯವನ್ನು ಕೈಗೊಂಡರೆ, ಅದನ್ನು ಯಾವುದೇ ವ್ಯಾಪಾರೀ ಸಂಸ್ಥೆ ಕೈಗೊಳ್ಳುವ ಸಾಮಾಜಿಕ ಕಾರ್ಯದ ದೃಕ್ಪಥದಿಂದಲೇ ನೋಡಬೇಕಾಗುತ್ತದೆಯೇ ಹೊರತು, ಅದಕ್ಕೆ ವಿಶೇಷ ಅರ್ಥ ಹಚ್ಚುವುದು ಸಮರ್ಪಕವಲ್ಲ.

## 5. ವಿದ್ಯೆ, ತರಬೇತಿ, ಮಾಹಿತಿ.

ಈ ಐದನೆಯ ಸೂತ್ರವೂ ಕಾರ್ಮಿಕ ಸಂಘಟನೆಯ ಹಿನ್ನೆಲೆಯಿಂದಲೇ ಬಂದದ್ದು. ಬಂಡವಾಳಕೇಂದ್ರಿತವಲ್ಲದ ಈ ಸಂಸ್ಥೆಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಹಂಚಿಕೊಳ್ಳುವ ನಿಟ್ಟಿನಲ್ಲಿ ಈ ಸೂತ್ರವಿದೆ. ಈ ಬಗ್ಗೆ ಉದ್ಯೋಗಿಗಳಲ್ಲಿ ಮಾತ್ರವಲ್ಲದೆ

ಪಾಲಕವರ್ಗದವರಲ್ಲೂ ಮಹಾಜನತೆಯಲ್ಲೂ ಮತ್ತು ಸರಕಾರಕ್ಕೂ ಸ್ಪಷ್ಟ ತಿಳುವಳಿಕೆಯಿದ್ದಾಗ ಮಾತ್ರ ಸರಿಯಾದ ನೀತಿಗಳು, ಸಮರ್ಪಕವಾದ ವ್ಯಾಪಾರಿ ಸಂಬಂಧಗಳು ಸಾಧ್ಯ.

### 6. ಸಹಕಾರ ಸಂಸ್ಥೆಗಳ ನಡುವೆ ಸಹಕಾರ

ಈ ಸೂತ್ರದಿಂದ ವ್ಯಾಪಾರಕ್ಕೆ ಮಹತ್ವದ ಕೊಡುಗೆಯಾಗಲೀ ತಲೆನೋವಾಗಲೀ ಸೃಷ್ಟಿಯಾಗಿಲ್ಲ. ಪ್ರತೀ ಪರಾಮರ್ಶೆಯಲ್ಲೂ ಈ ಸೂತ್ರ ಉಳಿದು ಒಟ್ಟಾರೆ ಸಹಕಾರದ ಆಶಯವನ್ನು ವ್ಯಕ್ತಪಡಿಸುವಲ್ಲಿ ಸಹಾಯಕವಾಗಿದೆ.

### 7. ಸಮುದಾಯದ ಬಗ್ಗೆ ಕಾಳಜಿ

ಈ ಏಳನೆಯ ಸೂತ್ರವು ಮೂರನೆಯ ಸೂತ್ರದ ಮುಂದುವರೆದ ಭಾಗವಾಗಿದೆ. ಸಾಮಾನ್ಯವಾಗಿ 'ಉಳಿಕೆ'ಯನ್ನು ಹೆಚ್ಚಿಸುವ ಲಾಭ ಗಳಿಸುವ ಸೂತ್ರಗಳನ್ನೇ ಪ್ರತಿಪಾದಿಸುವಾಗ ನಮ್ಮ ಸುತ್ತಲಿರುವ ಸಮುದಾಯವನ್ನು ನಿರ್ಲಕ್ಷಿಸುವ ಅಪಾಯವಿದೆ. ಹೀಗಾಗಿ ಇದನ್ನೂ ಒಂದು ಸೂತ್ರವನ್ನಾಗಿಸಿರುವುದರಿಂದ ವ್ಯಾಪಾರಕ್ಕೂ ಒಂದು ಮಾನವೀಯ ಮುಖವನ್ನು ನೀಡಿದಂತಾಗುತ್ತದೆ.

ಇತ್ತೀಚೆಗೆ ನಿಧನರಾದ
ನೀನಾಸಮ್ ಸದಸ್ಯರಾಗಿದ್ದ
**ಶ್ರೀ ಸಿ.ಎನ್. ಶ್ರೀಧರ**
ರಂಗಶಿಕ್ಷಣ ಕೇಂದ್ರದ ಹಳೆಯ ವಿದ್ಯಾರ್ಥಿಯಾಗಿದ್ದ
**ಶ್ರೀ ಎಸ್. ಸುಬ್ರಹ್ಮಣ್ಯ**
ಸಾಹಿತಿಗಳಾದ
**ಶ್ರೀ ಗ.ಸು. ಭಟ್ಟ ಬೆತ್ತಗೇರಿ**
ಮತ್ತು
**ಶ್ರೀ ರಾಮಚಂದ್ರದೇವ**
ಇವರಿಗೆ ನೀನಾಸಮ್‌ನ ಶ್ರದ್ಧಾಂಜಲಿ

## ಕಳಚಿದ ಕೊಂಡಿಗಳು

**ಅಕ್ಷರ ಕೆ.ವಿ.**

ನಾನು ಇಷ್ಟಪಟ್ಟು ಗೌರವಿಸುತ್ತಿದ್ದ ಇಬ್ಬರು ಮಹನೀಯರು ಇಲ್ಲವಾಗಿದ್ದಾರೆ; ಅವರ ನೆನಪು ಈ ಬರಹಕ್ಕೆ ನನ್ನನ್ನು ತೊಡಗಿಸಿದೆ. ಮೊದಲನೆಯವರು ಇದೇ ೨೦೧೩ ಫೆಬ್ರವರಿ ೭ರಂದು ೮೩ ವರ್ಷಗಳನ್ನು ಕಳೆದು ವೃದ್ಧಾಪ್ಯದಿಂದ ಕಾಲವಾದ ನೀ.ನಾ. ಮಧ್ಯಸ್ಥರು. ಎರಡನೆಯವರು ಇದೇ ಆಗಸ್ಟ್ ೭ರಂದು ನಲವತ್ತೆರಡರ ಎಳವೆಯಲ್ಲೇ ತಮ್ಮ ಜೀವವನ್ನು ಕೊನೆಗೊಳಿಸಿಕೊಂಡ ಯುವ ಕವಿ ಗ.ಸು. ಭಟ್ಟ ಬೆತ್ತಗೇರಿ ಅವರು. ಈ ಇಬ್ಬರೂ ಕೂಡ ಕನ್ನಡದ ಸಾಹಿತ್ಯ-ಸಂಸ್ಕೃತಿ ಲೋಕದಲ್ಲಿ ತಮ್ಮದೇ ಮಿತವಾದ ರೀತಿಯಲ್ಲಿ ತೊಡಗಿಕೊಂಡವರು. ಆದರೆ ಇವರಿಬ್ಬರೂ ವ್ಯಾಪಕವಾಗಿ ಪರಿಚಿತರೇನೂ ಅಲ್ಲವಾದ್ದರಿಂದ, ಅವರ ಬದುಕಿನ ಸಾಧನೆಗಳಂತೆಯೇ ಅವರ ಸಾವಿನ ಸುದ್ದಿಯೂ ಹೆಚ್ಚೆಂದರೆ ಸ್ಥಳೀಯ ಪತ್ರಿಕೆಗಳ ಮೂಲೆಯಲ್ಲಿ ಮಾತ್ರ ಕಾಣಿಸಿಕೊಂಡಿತು. ಇವರು ಪ್ರಸಿದ್ಧರಾಗದೆ ಉಳಿದಿದ್ದಕ್ಕೆ ಇನ್ನೊಂದು ಸಮಾನ ಕಾರಣವೂ ಇದೆ – ಅವರಿಬ್ಬರೂ ಸಣ್ಣ ಸಣ್ಣ ಊರುಗಳಲ್ಲಿ ಶಾಲಾಮಾಸ್ತರರಾಗಿ ಬದುಕಿದ್ದರು. ಮಾತ್ರವಲ್ಲ, ಅವರಿಬ್ಬರೂ ಇವತ್ತು ಚಾಲ್ತಿಯಲ್ಲಿರುವ ತಥಾಕಥಿತ 'ಆಧುನಿಕ' ಸಂವೇದನೆಯ ವಕ್ತಾರರಾಗಿರಲಿಲ್ಲ; ಬದಲು, 'ಸಂಪ್ರದಾಯ'ವೆಂದು ನಾವು ನೇತ್ಯಾತ್ಮಕವಾಗಿ ಕಾಣಲು ರೂಢಿ ಮಾಡಿಕೊಂಡಿರುವ ವಲಯದೊಳಗೆ ಸೇರಿಕೊಂಡವರಾಗಿದ್ದರು. ಹಾಗಾಗಿ ಇವರಿಬ್ಬರ ಸಾವಿನ ಘಟನೆಯೂ ನನಗೆ ಆಯಾ ವ್ಯಕ್ತಿಗಳ ಸಂಬಂಧದ ಕೊಂಡಿ ಕಳಚಿದಂತೆಯೇ, ನಮ್ಮನ್ನು ನಮ್ಮದೇ ಗತಕಾಲಗಳೊಂದಿಗೆ ಬೆಸೆಯುವ ಸಂಪ್ರದಾಯದ ಕೊಂಡಿಗಳೆರಡು ಕಳಚಿಕೊಂಡ ಹಾಗೆಯೂ ಕಾಣುತ್ತದೆ. ಹಾಗಾಗಿ ಈ ಬರಹವು ಅವರಿಬ್ಬರಿಗೆ ಶ್ರದ್ಧಾಂಜಲಿ ಹೇಳುವ ಕೆಲಸವನ್ನು ಮಾತ್ರ ಮಾಡದೆ, ಅವರಿಬ್ಬರು ಪ್ರತಿನಿಧಿಸುತ್ತಿದ್ದ ಲೋಕಾಕಾರದ ಬಗ್ಗೆಯೂ ಕೆಲವು ಮಾತುಗಳನ್ನಾಡಲಿದೆ.

••• ••• •••

ನೀ(ರ್ಚಾಲು) ನಾ(ರಾಯಣ) ಮಧ್ಯಸ್ಥರು ಹುಟ್ಟಿದ್ದು ಕಾಸರಗೋಡು ಜಿಲ್ಲೆಯ ಹವ್ಯಕ ಕುಟುಂಬವೊಂದರಲ್ಲಿ; ೧೯೩೦ನೆಯ ಇಸವಿಯಲ್ಲಿ. ಆಗಿನ ಕಾಲದಲ್ಲಿ ಅವರು ತಮ್ಮೂರಿನಲ್ಲಿಯೇ ಇದ್ದ ಮಹಾಜನ ಸಂಸ್ಕೃತ ವಿದ್ಯಾಲಯದಲ್ಲಿ ಪ್ರಾರಂಭದಿಂದ ತೊಡಗಿ ವಿದ್ವಾನ್ ಪದವಿಯವರೆಗೂ ಓದಿದರು. ಜತೆಗೆ ಕನ್ನಡ ಪಂಡಿತ ಮತ್ತು ಹಿಂದಿ ರಾಷ್ಟ್ರಭಾಷಾ ಪದವಿಗಳನ್ನೂ ಪಡೆದುಕೊಂಡರು. ಕುಟುಂಬದ ಹಿನ್ನೆಲೆಯಿಂದ ಅವರು ಅನುಕೂಲಸ್ಥರೂ ಆಗಿರಲಿಲ್ಲ; ಜತೆಗೆ, ಅವರ ಹಳೆಗಾಲದ ಆ ಪದವಿಯಿಂದ ಆಧುನಿಕ ಶಿಕ್ಷಣದ ಮಾರುಕಟ್ಟೆಯಲ್ಲಿ ಅವರಿಗೆ ದೊಡ್ಡ ಕೆಲಸ ಸಿಗುವ ಸಂಭವವೂ ಇರಲಿಲ್ಲ. ಹಾಗಾಗಿ ಅವರು ಊರಿನ ಸಮೀಪದ ಒಂದು ಪ್ರಾಥಮಿಕ ಶಾಲೆಯಲ್ಲಿ ಮಾಸ್ತರರಾಗಿ ದುಡಿದರು; ಮುಂದೆ ಕೆಲವು ಕಾಲ ಮದ್ರಾಸಿನ ಒಂದು ಕಛೇರಿಯಲ್ಲಿಯೂ ಕೆಲಸ ಮಾಡಿದರು. ಹೀಗೆ ಊರಿಂದೂರಿಗೆ ಅಲೆಯುತ್ತ ಸಣ್ಣಪುಟ್ಟ ಶಿಕ್ಷಕೋದ್ಯೋಗ ಮಾಡುತ್ತ ಬಂದ ಅವರನ್ನು ವಿಧಿ ದೂರದ ಘಟ್ಟದ ಮೇಲಿನ ಸಾಗರಕ್ಕೆ ಎಳೆದು ತಂದಿತು. ಇಲ್ಲಿ ಅವರು ನಿರ್ಮಲಾ ಪ್ರೌಢಶಾಲೆಯಲ್ಲಿ ತುಂಬ ಜನಪ್ರಿಯ ಅಧ್ಯಾಪಕರಾಗಿ ಕೆಲಸ ಮಾಡುತ್ತ ಊರವರಿಗೆಲ್ಲ ಬೇಕಾದವರಾಗಿ ಬದುಕಿ ನಿವೃತ್ತರಾದರು. ನಿವೃತ್ತರಾದ ಬಳಿಕವೂ ಬಹುಕಾಲ ಅವರು ಸಾಗರ ಪರಿಸರದ ನಾನಾ ಬಗೆಯ ಸಭೆ-ಸಮಾರಂಭಗಳಲ್ಲಿ ಖಾಯಂ ಕಾಣಿಸಿಕೊಳ್ಳುವ ವ್ಯಕ್ತಿಯೂ ಆಗಿದ್ದರು.

ಹೀಗೆ ಕಥಿಸಿದರೆ ತುಂಬ ಸಾಧಾರಣವೆಂದು ಕಾಣಬಹುದಾದ ಬದುಕಿನ ಒಳಗೇ ಮಧ್ಯಸ್ಥರ ಅಸಾಧಾರಣ ವ್ಯಕ್ತಿತ್ವ ರೂಪುಗೊಂಡಿತೆನ್ನುವುದು ವಿಸ್ಮಯದ ವಿಚಾರ. ಅವರು ತಮ್ಮ ಕೆಲಸವನ್ನಷ್ಟೇ ಚೆನ್ನಾಗಿ ಮಾಡಿ ಮುಗಿಸಿದ ಉಪಾಧ್ಯಾಯ ಮಾತ್ರರಾಗಿರಲಿಲ್ಲ; ಇದ್ದಷ್ಟು ದಿನವೂ ಮಕ್ಕಳ ಬೆನ್ನುಹತ್ತಿ ಅವರಿಂದ ತಾವೇ ಬರೆದ ಕವನ-ನಾಟಕಗಳನ್ನು ಶಾಲೆಯ ಆವರಣದಲ್ಲೇ ಪ್ರಸ್ತುತಪಡಿಸುವ ಸಾಂಸ್ಕೃತಿಕ ತುಡಿತ ಅವರಿಗಿತ್ತು. ಶಾಲೆಯೊಳಗೆ ಮಾತ್ರವಲ್ಲ, ಊರಿನ ನಾನಾ ಕೆಲಸಗಳಿಗೂ ಅವರು ಅನಿವಾರ್ಯರಾಗಿ ಬೆಳೆದವರು. ಯಕ್ಷಗಾನದ ಪ್ರಸಂಗಗಳ ಕರ್ತೃವಾಗಿ, ತಾಳಮದ್ದಲೆಯಲ್ಲಿ ಅರ್ಥಧಾರಿಯಾಗಿ, ಗಮಕ ವ್ಯಾಖ್ಯಾನಕಾರರಾಗಿ, ಭಾಷಣಕಾರರಾಗಿ ಮತ್ತು ಹೆಚ್ಚಿನ ಸಂದರ್ಭಗಳಲ್ಲಿ ಸ್ವತಃ ಈ ಎಲ್ಲ ಚಟುವಟಿಕೆಗಳ ಸಂಘಟಕರೂ ಆಗಿ ಅವರು ಬಗೆಬಗೆಯ ಕೆಲಸ ಮಾಡಿದರು. ಸಾಗರ ತಾಲ್ಲೂಕಿನಲ್ಲಿ ಸಾಹಿತ್ಯ ಪರಿಷತ್ತು ಮೊದಲಾದ ಹಲವು ಸಂಘಟನೆಗಳು ಬೆಳೆದದ್ದೇ ಮಧ್ಯಸ್ಥರ ಕ್ರಿಯಾಶೀಲ ತೊಡಗುವಿಕೆಯ ಪರಿಣಾಮದಿಂದ. ತನ್ನ ಸುತ್ತ ಒಂದು ಪುಟ್ಟ ಸಾಂಸ್ಕೃತಿಕ ವರ್ತುಲವನ್ನು ನಿರ್ಮಿಸಿಕೊಂಡರೆ ಎಂಥ ಸಾಮಾನ್ಯ ಬದುಕೂ ಕೂಡ ಹೇಗೆ ಊರಿಗೆ



ಉಪಯುಕ್ತವಾಗಿ ರೂಪಾಂತರಗೊಳ್ಳುತ್ತದೆ – ಎಂಬುದಕ್ಕೆ ಮಧ್ಯಸ್ಥರ ಜೀವನವೇ ಒಂದು ಒಳ್ಳೆಯ ಉದಾಹರಣೆ.

ಮಧ್ಯಸ್ಥರ ಇಂಥ ವ್ಯಕ್ತಿತ್ವವನ್ನು ದೂರದಿಂದಲೇ ನೋಡುತ್ತ ಬಂದಿದ್ದ ನನಗೆ, ಅವರ ಪಾಂಡಿತ್ಯದ ವಿಸ್ತಾರವು ಪರಿಚಿತವಾಗಿದ್ದೇ ಅವರ ಕಡೆಗಾಲದಲ್ಲಿ. ೧೯೯೦ರ ದಶಕದ ತುದಿಯಲ್ಲಿ ಒಮ್ಮೆ, ನೀನಾಸಮ್‌ನಲ್ಲಿ ನಾವು ಕೆಲವರು ಆಯ್ದ ಕಾವ್ಯ-ನಾಟಕಗಳನ್ನು ಸಂಸ್ಕೃತ ಮತ್ತು ಹಳಗನ್ನಡದಲ್ಲಿಯೇ ಓದಿ ಸುಖಿಸಬೇಕೆಂದು ಯೋಜಿಸಿಕೊಂಡು, ಹಾಗೆ ಓದಿ ವ್ಯಾಖ್ಯಾನ ಮಾಡಲು ಸಿಗಬಹುದಾದ ವ್ಯಕ್ತಿಯೊಬ್ಬರಿಗಾಗಿ ಹುಡುಕುತ್ತಿದ್ದೆವು. ಆಗ ನಮಗೆ ಒದಗಿಬಂದವರು ಮಧ್ಯಸ್ಥರು. ಆಮೇಲಿನ ಸುಮಾರು ಐದು ವರ್ಷಗಳ ಅವಧಿಯಲ್ಲಿ ನಾವು ಮಧ್ಯಸ್ಥರನ್ನು ಕೇಂದ್ರವಾಗಿಟ್ಟುಕೊಂಡು ನನಗೆ ನೆನಪಿರುವಂತೆ ಆರು ಕೃತಿಗಳನ್ನು ಓದಿದೆವು – ಹಳಗನ್ನಡದಲ್ಲಿ ರನ್ನನ 'ಗದಾಯುದ್ಧ', ಸಂಸ್ಕೃತದಲ್ಲಿ 'ಶಾಕುಂತಲ', 'ಉತ್ತರರಾಮಚರಿತ' ನಾಟಕಗಳು ಮತ್ತು 'ರಘುವಂಶ' ಕಾವ್ಯ, ಹಾಗೂ ಹೊಸಗನ್ನಡದಲ್ಲಿ ಸಂಸರ 'ಮಂತ್ರಶಕ್ತಿ' ಮತ್ತು ಪುತಿನರ 'ಸತ್ಯಾಯನ ಹರಿಶ್ಚಂದ್ರ'. ಹತ್ತಾರು ದಿನ, ದಿನಕ್ಕೆ ನಾಲ್ಕಾರು ಗಂಟೆಗಳ ಕಾಲ, ನಿಧಾನಗತಿಯಲ್ಲಿ ಸಾಗಿದ ಈ ಓದಿನ ಪ್ರಕ್ರಿಯೆ ತುಂಬ ಸರಳವಾದದ್ದಾಗಿತ್ತು; ಅಷ್ಟೇ ಅಪೂರ್ವವೂ ಆಗಿತ್ತು. ಮಧ್ಯಸ್ಥರು ನಮಗೆಲ್ಲ ಮಧ್ಯಸ್ಥರಾಗಿ ಕೂತು ಈ ಕೃತಿಗಳನ್ನು ಓದಿ ಅರ್ಥ ಹೇಳುತ್ತಿದ್ದರು; ಆದರೆ ಹಾಗೆ ಅರ್ಥ ಹೇಳುವ ಜತೆಗೆ, ಒಂದೊಂದು ಶಬ್ದವನ್ನೂ ಹಿಡಿದು ಅದರ ವ್ಯಾಕರಣದ ವ್ಯುತ್ಪತ್ತಿಯನ್ನೂ ಆ ಶಬ್ದಕ್ಕಿರುವ ಅರ್ಥಬಾಹುಳ್ಯಗಳನ್ನೂ ವಿವರಿಸುತ್ತಿದ್ದರು. ಆಗಾಗ, ಆಯಾ ಪುರಾಣಪಾತ್ರಗಳ ಪೂರ್ವಾಪರಗಳನ್ನು – ಆಯಾ ವ್ಯಕ್ತಿಯ ಜನ್ಮಾಂತರಗಳ ಕಥೆಗಳ ಸಮೇತ – ಆಮೂಲಾಗ್ರ ವರ್ಣಿಸುತ್ತಿದ್ದರು; ಮತ್ತು, ಒಂದೇ ಸನ್ನಿವೇಶವು ಸಂಸ್ಕೃತ ಮತ್ತು ಕನ್ನಡದ ಬೇರೆಬೇರೆ ಕವಿಗಳಲ್ಲಿ ಹೇಗೆ ವಿಭಿನ್ನವಾಗಿ ಚಿತ್ರಿತವಾಗಿದೆ ಎಂಬುದಕ್ಕೆ ಉದಾಹರಣೆ ಕೊಡುತ್ತಿದ್ದರು. ಅಪರೂಪಕ್ಕೆ ನಾವೆಲ್ಲಾದರೂ ಆಯಾ ಸನ್ನಿವೇಶಕ್ಕೆ ಆಧುನಿಕ ಮತ್ತು ಆಧುನಿಕೋತ್ತರ ವ್ಯಾಖ್ಯಾನ ಮಾಡುವ ಅಧಿಕಪ್ರಸಂಗ ಮಾಡಿದರೆ, ಅವರು ಸುಮ್ಮನೆ ಕೂತು ಕೇಳುತ್ತಿದ್ದರು; ನಮ್ಮ ಮಾತು ಮುಗಿದೊಡನೆ, 'ಮುಂದೆ ಹೋಗೋಣವಾ ?' ಎಂದು ಮುಗುಳ್ನಕ್ಕು ಮುಂದುವರೆಸುತ್ತಿದ್ದರು. ಸುಮಾರು ಐದು ವರ್ಷಗಳ ಆ ಓದಿನಲ್ಲಿ ಒಂದು ದಿನವೂ ಮಧ್ಯಸ್ಥರು ಪಠ್ಯವೊಂದನ್ನು ಬಿಟ್ಟು ಬೇರೆ ಯಾವ ಪೂರಕ ಪುಸ್ತಕವನ್ನೂ ಬಳಸಿದ್ದಿಲ್ಲ. ಒಂದೋ ಎರಡೋ ಬಾರಿ ಮಾತ್ರ, 'ಈ ಶಬ್ದಕ್ಕೆ ಇನ್ನೂ ಏನೋ ಅರ್ಥವಿರುವಂತೆ ಕಾಣುತ್ತದೆ; ನಾಳೆ ನೋಡಿ ಹೇಳುತ್ತೇನೆ' ಎಂದಿದ್ದು ಬಿಟ್ಟರೆ, ಅವರು

ಯಾವತ್ತೂ ನಿಘಂಟನ್ನು ಕೂಡ ಬಳಸಲಿಲ್ಲವೆಂಬುದು ನಮಗೆ ಅಚ್ಚರಿಯ ಸಂಗತಿಯಾಗಿ ಕಂಡಿತ್ತು.

ಈ ಓದಿನ ಸರಣಿಯು ಮಧ್ಯಸ್ಥರ ವಿದ್ವತ್ತನ್ನು ಕಾಣಿಸಿದ ಜತೆಗೆ, ಒಂದು ಹೊಸ ಬಗೆಯ ಓದುವ ಕ್ರಮವನ್ನೂ ನಮಗೆಲ್ಲ ಪರಿಚಯ ಮಾಡಿಸಿತು ಎಂಬುದನ್ನು ನಾನಿಲ್ಲಿ ನೆನಪಿಸಿಕೊಳ್ಳಬೇಕು. ಮೊದಲನೆಯದಾಗಿ, ಓದು ಮುಗಿಯುವ ಮೊದಲೇ ವ್ಯಾಖ್ಯಾನವನ್ನು ಮಾಡಲು ಹೊರಡುವ ಆಧುನಿಕ ಮನಸ್ಸುಗಳ ಅವಸರಕ್ಕೆ ಮಧ್ಯಸ್ಥರ ಈ ಓದು ಒಂದು ಹೊಸ ಬಗೆಯ ಸಂಯಮವನ್ನು ಕಲಿಸಿಕೊಟ್ಟಿತು. ಎರಡನೆಯದಾಗಿ, ಸಾಹಿತ್ಯವೆಂದರೆ ಅದು ಮಾರುವೇಷದಲ್ಲಿ ಅಡಗಿ ಕೂತಿರುವ ಸಿದ್ಧಾಂತವೆಂದೂ, ಸಾಹಿತ್ಯವನ್ನು ಅದರ ಪರ್ಯಾವರಣದಿಂದ ಭೇದಿಸಿದಾಗ ಮಾತ್ರವೇ ಅದರೊಳಗಿನ ಅರ್ಥಗಳು ನಿರಚನೆಗೊಳ್ಳುತ್ತವೆಂದೂ ನಾವು ಭಾವಿಸಲು ತೊಡಗಿದ್ದ ಆ ಆಧುನಿಕೋತ್ತರ ಹವಾಮಾನದಲ್ಲಿ, ಮಧ್ಯಸ್ಥರ ಈ ಓದುವ ವಿಧಾನವು ನಮಗೆಲ್ಲ ಚಿಕಿತ್ಸೆಯಾಗಿ ಕೆಲಸ ಮಾಡಿತು; ಸಾಹಿತ್ಯ-ಕಲೆಗಳಿಗಿರುವ ವಿಶಿಷ್ಟವಾದ ಅ-ಲೌಕಿಕತೆಯ ಪ್ರಭೆಯನ್ನೂ, ಮೀಮಾಂಸೆಯ ಮಾತಲ್ಲಿ ಹೇಳುವುದಾದರೆ ಘನವಾದೊಂದು ನಿರುದ್ದಿಶ್ಯ ರಸಸೃಷ್ಟಿಯ ಪ್ರಕ್ರಿಯೆಯನ್ನೂ, ಮೂರ್ತ ಅನುಭವವಾಗಿ ತೆರೆದು ತೋರಿಸಿತು. ಅರ್ಥಾತ್, ಒಂದು ಪಠ್ಯವನ್ನು ಸಂಪೂರ್ಣ ಸಿದ್ಧತೆಯ ಸಮೇತ, ಸಹೃದಯ ರಸಜಾಗೃತಿಯೊಂದಿಗೆ ಓದಿದರೆ ಸಾಕು, ಅದರೊಳಗಿನ ಅರ್ಥಗಳು ತಾವಾಗಿಯೇ ಹರಡಿಕೊಳ್ಳುತ್ತ ನಮ್ಮ ಮನಸ್ಸಿನಲ್ಲಿ ವ್ಯಾಖ್ಯಾನಗಳಾಗಿ ಬೆಳೆಯುತ್ತವೆ ಎಂಬುದನ್ನೂ ಮತ್ತು ಹಲವೊಮ್ಮೆ ವಿಮರ್ಶೆಯ ಒತ್ತಡವೇ ಆಯಾ ಕೃತಿಯ ರಸಾಸ್ವಾದಕ್ಕೆ ತೊಡಕು ಎಂಬುದನ್ನೂ – ಈ ಯಾವ ಮಾತುಗಳನ್ನೂ ಹೇಳದೆಯೇ – ಮಧ್ಯಸ್ಥರು ನಮಗೆ ಹೇಳಿಕೊಟ್ಟರು. ಮಧ್ಯಸ್ಥರ ಓದಿನಿಂದ ನಮಗೆಲ್ಲ ಸಿಕ್ಕ ಪಾಠ ಇಂಥದು.

ಇದೆಲ್ಲ ನಡೆದಿದ್ದು ಕೇವಲ ಐದಾರು ವರ್ಷ ಮಾತ್ರ. ಆಮೇಲೆ ಕುಟುಂಬ ಮತ್ತು ಆರೋಗ್ಯದ ಕಾರಣಗಳಿಂದ ಮಧ್ಯಸ್ಥರು ಸಾಗರವನ್ನೇ ಬಿಟ್ಟಿದ್ದರಿಂದ, ಅವರ ಸಂಪರ್ಕ ನಮಗೆ ದುಸ್ತರವಾಗುತ್ತಹೋಯಿತು. ಎಷ್ಟರಮಟ್ಟಿಗೆಂದರೆ, ಅವರ ಸಾವಿನ ಸುದ್ದಿ ಕೂಡ ನಮಗೆ ತಲುಪಿದ್ದು ಹಲವು ವಾರಗಳ ಬಳಿಕ; ಯಾರದೋ ಲೋಕಾಭಿರಾಮದ ಮಾತಿನ ನಡುವೆ. ಆದರೆ, ಇವತ್ತಿಗೂ ಆಧುನಿಕ ಪೂರ್ವದ ಒಂದು ಪಠ್ಯವನ್ನು ಎದುರಾಗುವ ವೇಳೆಗಳಲ್ಲಿ ಅವರು ನನಗೆ ನೆನಪಾಗುತ್ತಾರೆ; ಕೈಯಲ್ಲಿ ಕಷಾಯದ ಬಟ್ಟಲು ತಿರುಗಿಸುತ್ತ, ತಾಳಮದ್ದಲೆಯ ಅರ್ಥಗಾರಿಕೆಯ ಶೈಲಿಯಲ್ಲಿ, ಕೃಶಶರೀರದ ಕೀಚಲು ಕಂಠದ ಮಧ್ಯಸ್ಥರು ಕಾವ್ಯಗಳನ್ನು ಓದುವ ಚಿತ್ರ ನನ್ನ ಕಣ್ಣಿನೊಳಗೆ ಮರಮರಳಿ ಮೂಡುತ್ತದೆ.



••• ••• •••

ನೀ.ನಾ. ಮಧ್ಯಸ್ಥರಿಗೆ ಹೋಲಿಸಿದರೆ, ಗ.ಸು. ಭಟ್ಟ ಬೆತ್ತಗೇರಿ ಅವರು ನನಗೆ ಇನ್ನೂ ದೂರದವರು. ಕುಮಟಾ ಸಮೀಪದ ಹಳ್ಳಿಯೊಂದರಲ್ಲಿ ಹುಟ್ಟಿ ಕೆಲವು ವರ್ಷಗಳಿಂದ ಯಲ್ಲಾಪುರ ಸಮೀಪದ ಒಂದು ಶಾಲೆಯಲ್ಲಿ ಮಾಸ್ತರರಾಗಿದ್ದರು – ಎಂಬುದಷ್ಟನ್ನು ಬಿಟ್ಟರೆ, ಅವರ ಬದುಕಿನ ಹೆಚ್ಚೇನೂ ವಿವರ ನನಗೆ ಗೊತ್ತಿಲ್ಲ. ನನಗೆ ಹಾಗಿರಲಿ, ಯಲ್ಲಾಪುರ ತಾಲ್ಲೂಕಿನಲ್ಲೇ ಇರುವ ಬಹುತೇಕ ನನ್ನ ಬಂಧುಮಿತ್ರರಿಗೂ ಅವರ ಪರಿಚಯ ಇರಲಿಲ್ಲ. ಭೌತಿಕವಾಗಿ ಅವರನ್ನು ನಾನು ನೋಡಿದ್ದು ಮೂರೋ ನಾಲ್ಕೋ ಬಾರಿ ಮಾತ್ರ; ಅದೂ ಕೇವಲ ಕೆಲವು ತಾಸುಗಳ ಮಟ್ಟಿಗೆ. ಆದರೆ ಮಾನಸಿಕವಾಗಿ ನನ್ನನ್ನು ಅವರಿಗೆ ಸಮೀಪವಾಗಿಸಿದ್ದು ಅವರ ಕಾವ್ಯ ಮತ್ತು ಇನ್ನಿತರ ಬರಹಗಳು.

೧೯೬೦ರ ದಶಕದ ಮಧ್ಯಭಾಗದಲ್ಲಿ ಒಮ್ಮೆ, ಅಚಾನಕವಾಗಿ ಅಂಚೆಯ ಮೂಲಕ ಬಂದ ಒಂದು ವಿಶಿಷ್ಟ ಕಾವ್ಯಕೃತಿ ಗ.ಸು. ಭಟ್ಟರೆಂಬ ಈ ಕವಿಯನ್ನು ನನಗೆ ಪರಿಚಯ ಮಾಡಿಸಿತು. ಸಾಹಿತ್ಯ ಕೃತಿಗಳ ಯಾವುದೇ ಬಗೆಯ ಕ್ರಮಬದ್ಧವಾದ ಓದು ಮತ್ತು ವಿಮರ್ಶೆ ಎರಡನ್ನೂ ನಾನು ಮಾಡುತ್ತ ಬಂದವನಲ್ಲವಾದದ್ದರಿಂದ, ಅವರು ಆಗ ಕಳಿಸಿದ 'ನಳದಮಯಂತಿ' ಎಂಬ ಸುಮಾರು ೨೫೦೦ಕ್ಕೂ ಮಿಕ್ಕಿ ಛಂದೋಬದ್ಧ ಪದ್ಯಗಳಿರುವ ಪುಸ್ತಕವನ್ನು ನಾನು ಸರಿಯಾಗಿ ಓದಿರಲೂ ಇಲ್ಲ. ಅದಾಗಿ ಕೆಲವು ಕಾಲದ ಬಳಿಕ ಅವರು 'ಬೇಲೆಯ ಲೀಲೆ' ಎಂಬ ಹೆಸರಿನ ತಮ್ಮ ಇನ್ನೊಂದು ಕಾವ್ಯವನ್ನು ಕಳಿಸಿಕೊಟ್ಟರು; ಅದನ್ನು ನಾನು ಅಷ್ಟಿಷ್ಟು ತಿರುವಿಹಾಕಿದಾಗ, ಈಗಿನ ಕಾಲದಲ್ಲಿಯೂ ಛಂದಸ್ಸನ್ನು ಇಷ್ಟು ಹಠದಿಂದ ಪ್ರಯೋಗ ಮಾಡುತ್ತಿರುವ ಈ ವ್ಯಕ್ತಿಯು ಹೊಸಗಾಲದ ಸಂಪರ್ಕವೇ ಇಲ್ಲದ ಪಳೆಯುಳಿಕೆಯಂತಿದ್ದಾನು – ಎಂಬ ಭಾವನೆ ನನ್ನೊಳಗೆ ಹುಟ್ಟಿತ್ತು. ಈ ನಡುವೆ ಒಂದು ದಿನ, ಯಾವುದೋ ಒಂದು ನಾಟಕ ರಚನಾ ಕಮ್ಮಟದಲ್ಲಿ ಇವರು ನನಗೆ ಹಠಾತ್ತನೆ ಎದುರಾಗಿ ತಮ್ಮ ಪರಿಚಯ ಹೇಳಿಕೊಂಡಾಗ, ಉಡಾಳ ಹೈಸ್ಕೂಲು ಹುಡುಗನಂತೆ ಟೆನ್ನಿಸ್ ಕ್ಯಾಪ್ ಹಾಕಿದ್ದ ಈ ವ್ಯಕ್ತಿಯನ್ನು ಹಿಂದೆ ಓದಿದ್ದ ಛಂದೋಬದ್ಧ ಕಾವ್ಯದ ಜತೆಗೆ ಜೋಡಿಸಲಾರದೆ ನಾನು ಕಸಿವಿಸಿಗೊಂಡಿದ್ದೆ. ಅದೇ ಭೇಟಿಯಲ್ಲಿ ಅವರು ನನಗೆ 'ಕವಿ ವಾಲ್ಮೀಕಿಗಾದ ಅನ್ಯಾಯ' ಎಂಬ ಒಂದು ಕಿರುಹೊತ್ತಿಗೆಯನ್ನು ಕೊಟ್ಟರು. ರಾಮಾಯಣದ ಪಾತ್ರಗಳನ್ನು ಕುರಿತು ತುಂಬ ಹೊಸರೀತಿಯ ಯೋಚನೆಗಳನ್ನು ಎದುರಿಗಿಟ್ಟು ಪ್ರಖರವಾಗಿ ವಿಶ್ಲೇಷಿಸಿದ ಆ ಪುಸ್ತಕವು ಒಮ್ಮೆಲೇ ನನ್ನನ್ನು ಎಚ್ಚರಿಸಿ ಮತ್ತೆ ಅವರ ಹಳೆಯ ಕಾವ್ಯಗಳನ್ನೆಲ್ಲ ಓದುವ ಹಾಗೆ ಮಾಡಿತು; ಆಗ ಹೊಸ ಬೆಳಕಿನಲ್ಲೇ ಅವರ ಬರಹಗಳು ನನಗೆ ಕಾಣತೊಡಗಿದವು.

ಗ.ಸು.ಭಟ್ಟರ ಕಾವ್ಯದಲ್ಲಿ, ನನಗೆ ಕಂಡ ಹಾಗೆ, ಸಂಪ್ರದಾಯವು ಇನ್ನೊಂದು ಬಗೆಯ ಅವತಾರವನ್ನು ಎತ್ತಿದೆ. ನೀ.ನಾ. ಮಧ್ಯಸ್ಥರಂಥ ಪಂಡಿತರಲ್ಲಿ ಸಂಪ್ರದಾಯವು ಆಧುನಿಕತೆಯ ವಿಶೇಷ ಪರಿವೆಯಿಲ್ಲದೆ, ತನ್ನ ಪಾಡಿಗೆ ತಾನು ಹಾಯಾಗಿ ಬದುಕುತ್ತಿದ್ದರೆ, ಗ.ಸು. ಭಟ್ಟರಲ್ಲಿ ಸಂಪ್ರದಾಯವು ಆಧುನಿಕತೆಯ ಇರವನ್ನೂ ಗಮನಿಸಿಕೊಂಡು, ಅದಕ್ಕೆ ಪರೋಕ್ಷ ಪ್ರತಿಸ್ಪಂದನೆಯೋ ಎಂಬಂತೆ, ತನ್ನೊಳಗೇ ಸಾಧ್ಯವಿರುವ ಹೊಸ ಆಧುನಿಕತೆಯೊಂದನ್ನು ಹುಡುಕಲು ಹವಣಿಸಿದೆ. ಆಧುನಿಕತೆಯ ಕಣ್ಣಿನಿಂದ ಸಂಪ್ರದಾಯವನ್ನು ನೋಡುವುದಕ್ಕೂ ಮತ್ತು ಸಂಪ್ರದಾಯವೇ ತನಗೆ ಬೇಕಾದ ಆಧುನಿಕತೆಯೊಂದನ್ನು ಆವಿಷ್ಕರಿಸಿಕೊಳ್ಳುವುದಕ್ಕೂ ನಡುವೆ ಅಜಗಜಾಂತರ ವ್ಯತ್ಯಾಸ ಇದೆ – ಎಂಬ ಮಹತ್ವದ ಹೊಳಹೊಂದು ನನ್ನೊಳಗೆ ಮೂಡುತ್ತ ಬಂದಿದ್ದಕ್ಕೆ ಭಟ್ಟರ ಈ ಕಾವ್ಯದ ಓದೂ ಒಂದು ಕಾರಣವಾಗಿದೆ.

ಈ ಪ್ರಸ್ತಾಪವನ್ನು ವಿವರಿಸಲಿಕ್ಕೆ ಈ ಬರಹದಲ್ಲಿ ವ್ಯವಧಾನವಿಲ್ಲವಾದರೂ ಚುಟುಕಾಗಿ ಹೇಳುತ್ತೇನೆ -- ಕನ್ನಡ ಬರಹದ ಲೋಕದಲ್ಲಿ ಆಧುನಿಕತೆಯ ಮನೋಭೂಮಿಕೆಯಿಂದ ಸಂಪ್ರದಾಯವನ್ನು ನೋಡುವ ಒಂದು ಕ್ರಮವೇ ಬಗೆಬಗೆಯ ವೈವಿಧ್ಯಗಳ ಸಮೇತ ಕಾಣಿಸಿಕೊಂಡಿದೆ. ಈ ವೈವಿಧ್ಯಗಳಲ್ಲಿ ಸ್ಥೂಲವಾಗಿ, ಸಂಪ್ರದಾಯವನ್ನು ನೇತ್ಯಾತ್ಮಕ ಮತ್ತು ಇತ್ಯಾತ್ಮಕ ಕಣ್ಣುಗಳಿಂದ ನೋಡುವ ಎರಡು ಪಂಗಡಗಳಿವೆ. ಆದರೆ, ಪರಸ್ಪರ ಎದುರಾಳಿಗಳಂತೆ ಕಾಣುವ ಈ ಎರಡು ಪಂಗಡಗಳ ನಡುವೆ ಒಂದು ವಿಚಿತ್ರವಾದ ಹೋಲಿಕೆಯೂ ಇದೆ – ಇವರಿಬ್ಬರಿಗೂ ಸಂಪ್ರದಾಯವು ತನ್ನನ್ನು ತಾನೇ ವಿವರಿಸಿಕೊಳ್ಳಬಲ್ಲದು ಎಂಬ ನಂಬಿಕೆಯಿಲ್ಲ; ಆಧುನಿಕತೆಯ ಕಣ್ಣಿನಿಂದ ಅದನ್ನು ವ್ಯಾಖ್ಯಾನಿಸಿಯೇ ನಾವಿವತ್ತು ಅದನ್ನು ಅರ್ಥೈಸಬೇಕು – ಎಂದವರು ತಿಳಿಯುತ್ತಾರೆ. ಇದಕ್ಕಿಂತ ಭಿನ್ನವಾಗಿ ಕನ್ನಡದ ಸಂಸ್ಕೃತಿ ಲೋಕದಲ್ಲಿ ಸಂಪ್ರದಾಯದ ಇನ್ನೊಂದು ಬಗೆಯ ಅವತರಣಿಕೆಯೂ ಇದೆಯೆಂದು ನಾನು ತಿಳಿಯುತ್ತೇನೆ. ಅಲ್ಲಿ ಸಂಪ್ರದಾಯವು ಆಧುನಿಕತೆಯನ್ನು ತನ್ನ ಪ್ರತಿದ್ವಂದ್ವಿಯೆಂದೇ ಭಾವಿಸದೆ, ಅದನ್ನೂ ಕೆಲಮಟ್ಟಿಗೆ ಒಳಗೊಂಡು ತನ್ನನ್ನು ವಿಸ್ತರಿಸಿಕೊಳ್ಳುತ್ತಿದೆ. ಗ.ಸು. ಭಟ್ಟರ ಬರಹಗಳಲ್ಲಿ ನಾನು ಕಂಡ ಧೋರಣೆ ಈ ಬಗೆಯದು. ಅದೇ ರೀತಿ, ತಾಳಮದ್ದಲೆಯಂಥ ಸಂಪ್ರದಾಯವೊಂದು ಇಂದು ಜೀವಂತವಾಗಿ ಉಳಿದಿರುವುದಕ್ಕೆ ಆ ಮಾಧ್ಯಮಕ್ಕಿರುವ ಇಂಥ ವಿಸ್ತರಣ ಶಕ್ತಿಯೇ ಕಾರಣ – ಎಂಬುದನ್ನು ಕುರಿತು ನಾನು ಈಗಾಗಲೇ ಬರೆದಿದ್ದೇನೆ (ನೋಡಿ – ತಾಳಮದ್ದಲೆ ಕಟ್ಟುವ ಸಂಸ್ಕೃತಿ: ಅಂತಃಪಠ್ಯ ಮತ್ತು ಇತರ ಪ್ರಬಂಧಗಳು: ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೧೧).

ಸಂಪ್ರದಾಯದ ಇಂಥ ವಿಸ್ತರಣೆಯ ಸ್ವರೂಪಕ್ಕೆ ಗ.ಸು. ಭಟ್ಟರ ಕಾವ್ಯದಿಂದ



ಹಲವು ಉಲ್ಲೇಖಗಳನ್ನು ಕೊಡಬಹುದು. ಉದಾಹರಣೆಗೆ, ೨೦೦೬ರಲ್ಲಿ ಪ್ರಕಟವಾದ ಅವರ 'ಜ್ವಾಲೆ' ಎಂಬ ಖಂಡಕಾವ್ಯದ ಧೋರಣೆಯನ್ನೇ ನೋಡಿ. 'ಜೈಮಿನಿಭಾರತ' ದಲ್ಲಿ ಒಂದು ಕಿರು ಉಲ್ಲೇಖವಾಗಿ ಬರುವ ಒಬ್ಬ ರಾಜನ ಹೆಂಡತಿಯ ಕಥೆಯನ್ನು ಕೇಂದ್ರವಾಗಿಟ್ಟುಕೊಂಡು ಹೊರಡುವ ಈ ಕಾವ್ಯದಲ್ಲಿ ಜ್ವಾಲೆಯೆಂಬ ಆ ರಾಣಿಯು ತನ್ನ ಗಂಡನಿಂದಲೂ ಅನ್ಯಾಯಕ್ಕೊಳಗಾಗಿ, ಕಡೆಗೆ ತನ್ನನ್ನೇ ತಾನು ದಹಿಸಿಕೊಳ್ಳುವ ಮೂಲಕ ಅರ್ಜುನನ ವಿರುದ್ಧ ಸೇಡು ತೀರಿಸಿಕೊಳ್ಳಲು ಮುಂದಾಗುತ್ತಾಳೆ. ಆದರೆ, ನಮ್ಮ ಹಲವು ಆಧುನಿಕರು ಅಂಬೆಯ ಕಥೆಯನ್ನು ನೋಡುವ ಬಂಡಾಯದ ವಿಧಾನಕ್ಕೆ ಹೋಲಿಸಿದರೆ, ಅದಕ್ಕೂ ಮತ್ತು ಗ.ಸು. ಭಟ್ಟರ ಕಾವ್ಯವು ಅಂಥದೇ ಸನ್ನಿವೇಶದ ಚಿತ್ರಣ ಮಾಡಿರುವುದಕ್ಕೂ ನಡುವೆ ಮಹತ್ವದ ವ್ಯತ್ಯಾಸಗಳು ಗೋಚರಿಸುತ್ತವೆ. ಆ ಹೆಣ್ಣು ಇಲ್ಲಿ ಸಾಯುವಾಗ 'ಸಾಯುತ್ತಿಲ್ಲವೊ ಅತ್ತೆ, ಹುಟ್ಟುತಿರುವಳು ಮತ್ತೆ / ಸಾವ ಹೂವಿಗೆ ಹುಟ್ಟು ಬೀಜದಲ್ಲಿದೆ ಗೊತ್ತೆ ?' ಎಂದು ಪ್ರಶ್ನಿಸುತ್ತಾಳೆ; ಮತ್ತು ಆ ಮೂಲಕ 'ಪುರುಷಾಂಗ ಸಂಗವುದ ಹಂಗಿರದ ಮರುಹುಟ್ಟು' ತನ್ನದಾಗಲಿ ಎಂದು ಬಯಸುತ್ತಾಳೆ. ಅದನ್ನು ಪುಷ್ಟೀಕರಿಸುತ್ತ ಈ ಕೃತಿಯ ಮುನ್ನುಡಿಯಲ್ಲಿಯೇ ಲೇಖಕರು ಹೇಳಿದ್ದಾರೆ – 'ಇದನ್ನು ಕೇವಲ ಸ್ತ್ರೀಸಂವೇದನೆಯ ದೃಷ್ಟಿಕೋನದಿಂದ ಗ್ರಹಿಸುವ ಬದಲು ಪ್ರಕೃತಿ ಸ್ವಭಾವಗಳ ವೈವಿಧ್ಯದ ದೃಷ್ಟಿಯಿಂದ ಗ್ರಹಿಸಿದರೆ ಕೃತಿ ಹೆಚ್ಚು ಅರ್ಥವಾದೀತು'. ಸಂಪ್ರದಾಯದೊಳಗೆಯೇ ಹುಟ್ಟುವ ಬಂಡಾಯಕ್ಕೂ ಮತ್ತು ಸಂಪ್ರದಾಯವನ್ನು ಆಧುನಿಕತೆಯು ಬಂಡಾಯದ ಪರಿಭಾಷೆಯಲ್ಲಿ ಕಾಣುವುದಕ್ಕೂ ನಡುವೆ ಇರುವ ವ್ಯತ್ಯಾಸಕ್ಕೆ ಇಂಥ ಉದಾಹರಣೆಗಳು ಸಾಕ್ಷಿಯೆಂದು ನನ್ನ ಭಾವನೆ.

ಹೀಗೆ, ಒಟ್ಟೊಟ್ಟಿಗೇ ಸಾಂಪ್ರದಾಯಿಕ ಮತ್ತು ಆಧುನಿಕ – ಎರಡೂ ಆಗಿರಬಲ್ಲ ವಿಶಿಷ್ಟ ಕಾವ್ಯಕ್ರಮಕ್ಕೆ ಅವರ 'ಯಃಕಶ್ಚಿತ್ ಹುಳದ ಕಥೆ' ಎಂಬ ಇನ್ನೊಂದು ಕಥನ ಕವನವೂ ಕೂಡ ಒಳ್ಳೆಯ ಉದಾಹರಣೆ. ಕಾಫ್ಕಾನ ಪ್ರಸಿದ್ಧ ಕಾದಂಬರಿಯನ್ನು ನೆನಪಿಸುವಂತೆ ಈ ಕಥನದ ನಾಯಕನೇ ಒಂದು ಹುಳು; ಆ ನಾಯಕನ ಸ್ವಗತವೇ ಈ ಕವನ. ಮರದ ಆಲಂಕಾರಿಕ ಕೊಂಬೆಯೊಂದರ ಮೂಲಕ ಈ ಹುಳು ಪಟ್ಟಣಕ್ಕೆ ಸೇರಿ ಅಲ್ಲಿ ಪಡೆಯುವ ಅನುಭವಗಳು, ಮತ್ತು ಅದಕ್ಕೆ ಸಮಾನಾಂತರವಾಗಿ ಈ ಹುಳುವಿನೊಂದಿಗೆ ಮಹಾನಗರಕ್ಕೆ ಹೋಗುವ ಹುಡುಗಿಯ ಕಥೆ ಇವೆರಡೂ ಬಿಂಬಪ್ರತಿಬಿಂಬಗಳಾಗಿ ಈ ಕಥನದಲ್ಲಿ ಕೂಡಿಕೊಳ್ಳುತ್ತವೆ. ಹಾಗೆಯೇ ಕಾಫ್ಕಾ ಮತ್ತು ಕಥಾಸರಿತ್ಸಾಗರದ ಕಥನಕ್ರಮಗಳೆರಡೂ ಇಲ್ಲಿ ವಿಚಿತ್ರವಾಗಿ ಸಂಗಮಿಸುತ್ತವೆ. ಅಂಥದೇ ಇನ್ನೊಂದು ಹುಡುಗಿಯ ಕಥೆಯನ್ನು ಅವರು ತಮ್ಮ 'ನವ್ಲು' ಕವಿತೆಯಲ್ಲಿ ಕಟ್ಟಿದ್ದಾರೆ; ಆಡುಮಾತು ಮತ್ತು ಛಂದಸ್ಸು ಎರಡನ್ನೂ ಸೊಗಸಾಗಿ ಹೆಣೆಯುವ

ವಿಶೇಷ ಪ್ರತಿಭೆಯನ್ನೊಳಗೊಂಡ ಆ ಕಾವ್ಯದ ಬಗ್ಗೆ ನಾನು ಈಗಾಗಲೇ ಬರೆದಿದ್ದೇನೆ (ನೋಡಿ – ಬದುಕು, ಭಾಷೆ ಮತ್ತು ಅರ್ಥಗಳ ಅನುವರ್ತನೆ: ಅಂತಃಪಠ್ಯ ಮತ್ತು ಇತರ ಪ್ರಬಂಧಗಳು: ಅಕ್ಷರ ಪ್ರಕಾಶನ, ಹೆಗ್ಗೋಡು, ೨೦೧೧).

ಇಂಥ ಉದಾಹರಣೆಗಳ ಉಲ್ಲೇಖದ ಮೂಲಕ ಗ.ಸು. ಭಟ್ಟರ ಕವಿತೆಗಳನ್ನು ನಮ್ಮ ಕಾಲದ ಮೇರುಕೃತಿಗಳೆಂದು ಅಟ್ಟಕ್ಕೇರಿಸುವುದು ನನ್ನ ಇರಾದೆಯಲ್ಲ. ಆದರೆ, ನಮ್ಮ ಸಮಕಾಲೀನ ಕಾವ್ಯಲೋಕದಲ್ಲಿ ತುಂಬ ಅಪರೂಪ ಎನ್ನಿಸಬಹುದಾದ ಯೋಚನಾಕ್ರಮ ಹಾಗೂ ಭಾಷೆ-ಛಂದಸ್ಸುಗಳ ವಿಶೇಷಗಳು ಇವರ ಕಾವ್ಯದಲ್ಲಿ ಕೆಲಸ ಮಾಡಿವೆ – ಎಂಬುದಷ್ಟನ್ನು ಮಾತ್ರ ನಾನಿಲ್ಲಿ ಗುರುತಿಸುತ್ತಿದ್ದೇನೆ. ನನ್ನ ಮತ್ತು ಈ ಗ.ಸು. ಭಟ್ಟರ ಸೀಮಿತ ಪರಿಚಯದಿಂದಷ್ಟೇ ಹೇಳುವುದಾದರೆ, ಸ್ವತಃ ಈ ಭಟ್ಟರಿಗೂ ಅಂಥ ಹೆಗ್ಗಳಿಕೆಗಳೇನೂ ಇರಲಿಲ್ಲ; ಸಮಕಾಲೀನ ಕನ್ನಡ ಕಾವ್ಯಲೋಕದೊಡನೆ ಪೈಪೋಟಿ ಮಾಡಿ ಪ್ರಸಿದ್ಧನಾಗುವ ಉಮೇದೂ ಅವರೊಳಗೆ ಇದ್ದಂತೆ ನನಗೆ ಕಾಣಲಿಲ್ಲ. ಬದಲು, ಸಾಂಪ್ರದಾಯಿಕ ಕವಿಗಳ ಮಾದರಿಯಲ್ಲಿಯೇ – 'ವಾಣಿಯೇ ನೀನು ತಾಯಿ, ನಾನು ಹಸುಳೆ' – ಎಂಬ ವಿನಯದ ಮಾತನ್ನು ಅವರು ತಮ್ಮೊಂದು ಮುನ್ನುಡಿಯಲ್ಲಿ ಆಡಿದ್ದಾರೆ. ಆಗೀಗ, ಅವರನ್ನು ಸಾಹಿತ್ಯ ಗೋಷ್ಠಿಗಳಿಗೆ ಆಹ್ವಾನಿಸಿದಾಗ, 'ಅದೆಲ್ಲ ಯಾತಕ್ಕೆ?' ಎಂಬ, ಇವತ್ತಿನ ಕಾಲಕ್ಕೆ ಅಪರೂಪವಾಗಿರುವ ಸಂಕೋಚವನ್ನು ಅವರು ತೋರಿದ್ದನ್ನು ಕೂಡ ನಾನು ಕಂಡಿದ್ದೇನೆ. ಈ ಎಲ್ಲ ಬಗೆಗಳಲ್ಲಿ ಅಪರೂಪದ ಲೇಖಕನಾಗಿದ್ದರೆಂಬ ಕಾರಣಕ್ಕೇ, ವೈಯಕ್ತಿಕ ನೆಲೆಯಲ್ಲಿ ನನಗೆ ಅಷ್ಟೇನೂ ಆಪ್ತರಾಗಿರದಿದ್ದ ಈ ಕವಿಯ ಸಾವು ನನ್ನೊಳಗೆ ವಿಚಿತ್ರವಾದ ಒಂದು ವಿಷಾದವನ್ನು ಸೃಷ್ಟಿಸಿದೆ.

••• ••• •••

ಮೇಲಿನ ಎರಡು ವ್ಯಕ್ತಿತ್ವಗಳ ನಡುವೆ ಸಮಾನ ವಿಶೇಷವೊಂದು ಇದೆಯೆಂಬ ಉಲ್ಲೇಖವನ್ನು ನಾನು ಆರಂಭದಲ್ಲಿಯೇ ಮಾಡಿದ್ದೇನೆ. ಅಂಥ ಸಾಮ್ಯದ ಸಾಮಾಜಿಕ-ಸಾಂಸ್ಕೃತಿಕ ಆಯಾಮವನ್ನು ಕುರಿತು ನಾನೀಗ ಕೆಲವು ಮಾತುಗಳನ್ನಾಡಬೇಕು. ಆಧುನಿಕ ಮತ್ತು ಸಂಪ್ರದಾಯ ಎಂಬ ಶಬ್ದಗಳನ್ನು ಸದ್ಯ ಚಲಾವಣೆಯಲ್ಲಿರುವ ರೂಢಿಗತ ಅರ್ಥದಲ್ಲೇ ಬಳಸಿ ಮಾತಾಡುವುದಾದರೆ, ಇವರಿಬ್ಬರೂ ಆಧುನಿಕ ಭಾರತದಲ್ಲಿ ಬದುಕಿದ್ದೂ ಭಾರತಕ್ಕೆ ಹೊಸತಾಗಿ ಪ್ರವೇಶ ಮಾಡಿದ ಆಧುನಿಕತೆಗೆ ಸಂಪೂರ್ಣ ಶರಣಾಗದವರು. ಹಾಗಂತ, ಅದು ಅವರ ಧೀರತನ ಎಂದೇನೂ ನಾವು ವೈಭವಿಸಬೇಕಿಲ್ಲ; ಬದಲು, ಅದು ಅವರಿಗೆ ಸಹಜವಾಗಿ



ಒದಗಿದ ಒಂದು ಮಾರ್ಗ ಮಾತ್ರ. ವಿಶಾಲವಾಗಿ ನೋಡಿದರೆ, ಈ ಧೋರಣೆಯಲ್ಲಿ ಇವರು ಅಪರೂಪದವರು ಕೂಡಾ ಅಲ್ಲ. ಇವತ್ತಿನ ಕಾಲದಲ್ಲಿಯೇ, ಯಕ್ಷಗಾನದಿಂದ ತೊಡಗಿ ಆಧುನಿಕ ನಾಟಕದವರೆಗೂ ಹಾಗೂ ಗೊಂಬೆಯಾಟದಿಂದ ತೊಡಗಿ ಆಧುನಿಕ ಚಿತ್ರಕಲಾವಿದರವರೆಗೂ ಹರಡಿಕೊಂಡಿರುವ ಈ ನಮ್ಮ ನಾಡಿನ ಸಂಸ್ಕೃತಿ ಮಹನೀಯರನ್ನೆಲ್ಲ ಒಟ್ಟಯಿಸಿ ನೋಡುವುದಾದರೆ, ಪ್ರಾಯಶಃ ಈ ಬಗೆಯ 'ಸಾಂಪ್ರದಾಯಿಕ'ರೇ ಪಾಶ್ಚಾತ್ಯ ಯೋಚನಾಕ್ರಮಗಳಿಂದ ಪ್ರಭಾವಿತಗೊಂಡ 'ಆಧುನಿಕ'ರಿಗಿಂತ ಬಹುಸಂಖ್ಯಾತರು. ಆದರೆ, ಬೌದ್ಧಿಕ ಮಾರುಕಟ್ಟೆಯ ಲೆಕ್ಕದಲ್ಲಿ ಇವರಿಗೆ ಚಲಾವಣೆ ಕಡಿಮೆ. ಆದ್ದರಿಂದಲೇ, ಉದಾಹರಣೆಗೆ, ಈ ಆಧುನಿಕ ಕಾಲದಲ್ಲೂ ಬದುಕಿರುವ ನಮ್ಮ ನಾಡಿನ ಸಾಂಪ್ರದಾಯಿಕ 'ಪಂಡಿತ'ರಿಗೆ ಹೊಸಗಾಲದ ಆಧುನಿಕ 'ಪ್ರೊಫೆಸರ'ರಿಗೆ ಸಿಕ್ಕ ನೂರರಲ್ಲೊಂದು ಪ್ರಮಾಣ ಮನ್ನಣೆಯೂ ದೊರಕಿಲ್ಲ; ಬದಲು, ಅವರು ಹೊಸಗಾಲದ ಜ್ಞಾನನಿರ್ಮಾಣಕ್ಕೆ ಅನುಪಯುಕ್ತರು ಎಂಬ ತಾತ್ಸಾರವೇ ಸಿಕ್ಕಿದೆ. ಜತೆಗೆ, ಈ ಪಂಡಿತರು ಮತ್ತು ಪ್ರೊಫೆಸರರು ಇವತ್ತಿನವರೆಗೂ ತಮ್ಮ ತಮ್ಮದೇ ವಲಯಗಳಲ್ಲಿ ಒಟ್ಟೊಟ್ಟಿಗೇ ಓದು-ವ್ಯಾಖ್ಯಾನ ಮಾಡುತ್ತ ಬಂದಿದ್ದಾರಾದರೂ, ಅವೆರಡು ಗುಂಪುಗಳ ನಡುವೆ ಕೊಡುಕೊಳ್ಳುವ ಚಿಂತನ-ಮಂಥನ ನಡೆದಿರುವುದು ತುಂಬ ಅಪರೂಪವೇ.

ಯಾತಕ್ಕೆ ಹೀಗೆ – ಎಂಬ ಪ್ರಶ್ನೆಗೂ ಈಗಾಗಲೇ ಕೆಲವರು ಉತ್ತರ ಹೇಳಿದ್ದಾರೆ. ಉದಾಹರಣೆಗೆ, 'ಕೊನೆಯ ಬ್ರಾಹ್ಮಣ' ಎಂಬ ತೆಲುಗು ಆತ್ಮಕಥನವನ್ನು (ಹೆಗ್ಗೋಡು: ಅಕ್ಷರ ಪ್ರಕಾಶನ, ೨೦೦೬) ಅನುವಾದ ಮಾಡಿರುವ ಡಿ. ವೆಂಕಟ ರಾವ್ ಅವರು ತಮ್ಮ ಮುನ್ನುಡಿಯಲ್ಲಿ ೧೯ನೆಯ ಶತಮಾನದ ಸುಮಾರಿಗೆ ಭಾರತಾದ್ಯಂತ ಇಂಥ ಪಂಡಿತ ಪರಂಪರೆಗೆ ಒದಗಿದ ಪಲ್ಲಟವನ್ನು ಗುರುತಿಸಿ ಕಾಣಿಸಿದ್ದಾರೆ. ಆ ಮುನ್ನುಡಿಯು ವಿವರಿಸಿರುವ ಹಾಗೆ, ಸುಮಾರು ೧೯ನೆಯ ಶತಮಾನದವರೆಗೂ ಭಾರತದಲ್ಲಿ ತುಂಬ ಕ್ರಿಯಾಶೀಲವಾಗಿದ್ದ ಭಾರತದ ಪಂಡಿತ ಪರಂಪರೆಯೊಂದು ಅಲ್ಲಿಂದ ಮುಂದೆ ಓರಿಯೆಂಟಲಿಸ್ಟ್ ಅಧ್ಯಯನದ ಪರಿಣಾಮದಿಂದ ಆ ಕ್ಷೇತ್ರದ ಮೇಲಿನ ತನ್ನ ವಾರಸುದಾರಿಕೆಯನ್ನು ಕಳೆದುಕೊಳ್ಳಲು ಆರಂಭಿಸಿದೆ. ಆ ಮುನ್ನುಡಿಯ ಮಾತುಗಳನ್ನೇ ಆಡುವುದಾದರೆ, ಸಂಸ್ಕೃತ ಅಧ್ಯಯನವೆಂಬುದು ಇಂಡಾಲಜಿಯಾಗಿ ಬದಲಾದ ಬಳಿಕ ಆ ಕ್ಷೇತ್ರವು 'ಜೋನ್ಸ್, ವಿಲ್ಸನ್, ಮ್ಯಾಕ್ಸ್‌ಮುಲ್ಲರ್, ಮೆಕ್ಡೊನೆಲ್, ಕೀಲ್‌ಹಾರ್ನ್, ಕ್ಯಾಲಂಡ್, ಕೀತ್ ಮುಂತಾದ ಹಲವು ಹೆಸರುಗಳಿಂದ ತುಂಬಿಹೋಗಿದ್ದು, ಯಾವನೇ ಒಬ್ಬ ಶಾಸ್ತ್ರಿ ಅಥವಾ ಶರ್ಮರು ಅಲ್ಲಿ ಕಾಣಸಿಗುವುದಿಲ್ಲ'. ಈ ಪಲ್ಲಟದಿಂದ ಆದ ಪರಿಣಾಮಗಳು ಹಲವು; ಅವು

ಸಾಹಿತ್ಯ-ಕಲೆಗಳನ್ನೂ ಮೀರಿ ನಮ್ಮ ಎಲ್ಲ ಜ್ಞಾನನಿರ್ಮಾಣಕ್ಷೇತ್ರಗಳಿಗೂ ವಿಸ್ತರಿಸಿವೆ. ಸದ್ಯಕ್ಕೆ, ಸಾಹಿತ್ಯ-ಕಲೆಗಳ ಒಂದು ದೃಷ್ಟಾಂತವನ್ನು ಮಾತ್ರ ಉಲ್ಲೇಖಿಸುವುದಾದರೆ, ಈ ಪಲ್ಲಟದ ಬಳಿಕ, ನಮಗೆ ನಮ್ಮದೇ ಸಾಂಪ್ರದಾಯಿಕ ಪಠ್ಯಗಳನ್ನು ಓದುವ ಶಕ್ತಿ ಮತ್ತು ಅವನ್ನು ವ್ಯಾಖ್ಯಾನಿಸುವ ಸಾಮರ್ಥ್ಯಗಳೆರಡೂ ಹಲವು ರೀತಿಗಳಿಂದ ಕುಂಠಿತಗೊಂಡಿವೆ. ಜತೆಗೆ, ಈ ಪಲ್ಲಟದ ಬಳಿಕ ನಾವು, ಶಾಕುಂತಲದಿಂದ ಆರಂಭಿಸಿ ಕವಿರಾಜಮಾರ್ಗದವರೆಗಿನ ನಮ್ಮ ಬಹುತೇಕ ಆಧುನಿಕಪೂರ್ವ ಪಠ್ಯಗಳನ್ನು ಅವುಗಳ ಇಂಗ್ಲಿಷ್ ಅನುವಾದ ಮತ್ತು ಪಾಶ್ಚಾತ್ಯ ವಿಮರ್ಶೆಗಳ ಬೆಂಬಲದಿಂದಲೇ ಅರ್ಥೈಸಿಕೊಳ್ಳುವುದನ್ನು ರೂಢಿ ಮಾಡಿಕೊಂಡಿದ್ದೇವೆ.

ಇಂಥ ರೂಢಿಯಿಂದ ನಮಗೆ ನಿಜವಾಗಿಯೂ ನಷ್ಟವಾಗಿರುವುದೇನು ಎಂಬ ಸಂಗತಿಯು ಮೂರ್ತ ಅನುಭವದ ರೂಪದಲ್ಲಿ ನನಗೆ ಅರಿವಾದದ್ದು, ನೀ.ನಾ. ಮಧ್ಯಸ್ಥರಂಥ ಒಬ್ಬ ಪಂಡಿತರ ಮಧ್ಯಸ್ಥಿಕೆಯಲ್ಲಿ ಆಧುನಿಕಪೂರ್ವ ಪಠ್ಯಗಳನ್ನು ಓದತೊಡಗಿದಾಗ – ಎಂಬ ಕಾರಣದಿಂದಲೇ, ಮೇಲೆ ಹೇಳಿದ ವಸಾಹತೋತ್ತರ ಚಿಂತನೆಯ ಉಲ್ಲೇಖವನ್ನು ನಾನಿಲ್ಲಿ ತಂದಿದ್ದು. ಉದಾಹರಣೆಗೆ, ಶಾಕುಂತಲ ಮತ್ತು ಉತ್ತರರಾಮಚರಿತ ನಾಟಕಗಳನ್ನು ಸಂಸ್ಕೃತದಲ್ಲಿಯೇ ಓದಿದಾಗ ನನಗಾದ ಅನುಭವವು, ಅದರ ದುರ್ಬಲ ಇಂಗ್ಲಿಷ್ ಅನುವಾದಗಳಲ್ಲಿ ಹಾಗಿರಲಿ, ಅದರ ಕನ್ನಡ ಅನುವಾದವನ್ನು ಓದಿದಾಗಲೂ ಆಗಿರಲಿಲ್ಲ. ಅಥವಾ, ಶಾಕುಂತಲದಂಥ ಒಂದು ಪಠ್ಯವು ನಮ್ಮ ಪ್ರಸಿದ್ಧ ಇತಿಹಾಸಕಾರ್ತಿ ರೋಮಿಲ್ಲಾ ಥಾಪರ್ ಅವರಿಗೆ ಸಾಮ್ರಾಜ್ಯಶಾಹಿ-ಪರ ದಾಖಲೆಯಾಗಿ ಕಂಡಿದ್ದಕ್ಕೆ ಕಾರಣ, ಅವರು ಆ ಕೃತಿಯನ್ನು ಬಾರ್ಬರಾ ಸ್ಟೋಲರ್ ಮಿಲ್ಲರ್ ಅವರ 'ಓರಿಯೆಂಟಲಿಸ್ಟ್' ಅನುವಾದದಿಂದ ಮಾತ್ರವೇ ಗ್ರಹಿಸಿದ್ದರಿಂದ – ಎಂಬ ವಾಗೀಶ್ ಶುಕ್ಲಾ ಅವರ ಟೀಕೆಯು ಎಷ್ಟು ಸತ್ಯವೆಂದು ನನಗೆ ಅರ್ಥವಾಗಿದ್ದು ಕೂಡಾ ಇಂಥ ಓದಿನ ಮೂಲಕವೇ (ನೋಡಿ – ರೋಮಿಲ್ಲಾ ಥಾಪರ್, ಶಾಕುಂತಲ: ಟೆಕ್ಸ್ಟ್ಸ್, ರೀಡಿಂಗ್ಸ್, ಹಿಸ್ಟರೀಸ್, ನ್ಯೂಡೆಲ್ಲಿ: ಕಾಳಿ ಫಾರ್ ವಿಮೆನ್, ೧೯೯೯; ಮತ್ತು ಅದಕ್ಕೆ ಪ್ರತಿಯಾಗಿ – ವಾಗೀಶ್ ಶುಕ್ಲಾ, 'ರೋಮಿಲ್ಲಾ ಥಾಪರ್ ಆನ್ ಶಾಕುಂತಲ', ಪುಟ ೨೧೯-೫೫, ಸ್ಯಾನ್ಸ್ಕ್ರಿಟ್ ಸ್ಟಡೀಸ್ ವಾಲ್ಯೂಮ್ ೨: ನ್ಯೂಡೆಲ್ಲಿ: ಡಿ.ಕೆ. ಪ್ರಿಂಟ್‌ವರ್ಲ್ಡ್, ೨೦೦೬-೦೭). ಇಷ್ಟು ಹೇಳಿದ ಮಾತ್ರಕ್ಕೆ, ಇಂಥ ಸಾಂಪ್ರದಾಯಿಕ ಪಂಡಿತರು ಮಾತ್ರವೇ ಆಧುನಿಕಪೂರ್ವ ಪಠ್ಯಗಳನ್ನು ವಿವರಿಸಬಲ್ಲರು ಎಂದಾಗಲೀ, ಅಥವಾ ಅವರ ಮಾತೇ ನಿರ್ಣಾಯಕ ಎಂದಾಗಲೀ ನನ್ನ ವಾದವಲ್ಲ. ಬದಲು, ಅಂಥ ಸಾಂಪ್ರದಾಯಿಕ ಪಂಡಿತರ ಜತೆಗೆ, ನಮ್ಮ ಆಧುನಿಕರು ಕ್ರಿಯಾಶೀಲ ಸಂಭಾಷಣೆಯಲ್ಲಿ ತೊಡಗಿದ್ದರೆ, ಆಗ ಆಧುನಿಕಪೂರ್ವ



ಪಠ್ಯಗಳ ಕುರಿತು ಹುಟ್ಟಬಹುದಾಗಿದ್ದ ಜಿಜ್ಞಾಸೆಗಳೇ ತುಂಬ ಶ್ರೀಮಂತವಾಗಿರುತ್ತಿದ್ದವು; ಮತ್ತು ಅಂಥ ಕೊಡುಕೊಳ್ಳುವಿಕೆ ಸಾಕಷ್ಟು ನಡೆಯದಿರುವುದರಿಂದ ನಮ್ಮ ಆಧುನಿಕತೆಯೇ ಬಡವಾಗಿದೆ – ಎಂಬುದಷ್ಟೇ ನನ್ನ ಸೂಚನೆ.

ಗ.ಸು. ಭಟ್ಟರ ಕಾವ್ಯವೂ ಕೂಡಾ, ಇದೇ ಬಗೆಯಲ್ಲಿ ಇಂದು ಅಲ್ಪಸಂಖ್ಯಾತವಾಗಿರುವ ಒಂದು ಮಾರ್ಗದ ಪ್ರತಿನಿಧಿ. ಕಾವ್ಯವೆಂಬ ಪ್ರಕಾರದ ಮೂಲಗುಣವೇ ಲಯ; ಮತ್ತು ಛಂದಸ್ಸು ಎಂಬುದು ಅಂಥ ಲಯವನ್ನು ಮೂರ್ತೀಕರಿಸುವ ಒಂದು ಸಾಧನ – ಎಂಬ ನಂಬಿಕೆಯು ನಮ್ಮ ಸಾಂಪ್ರದಾಯಿಕ ಕಾವ್ಯದಲ್ಲಿ ಅಂತರ್ಗತವಾಗಿದೆ. ಆದರೆ, ನವ್ಯದ ಕಾಲದಲ್ಲಿ, ಆ ಕಾಲದ ಕಣ್ಣಿಗೆ ದೌರ್ಬಲ್ಯಗಳಾಗಿ ಕಂಡ ಸಾಂಪ್ರದಾಯಿಕ ಕಾವ್ಯದ ಕೆಲವು ಲಕ್ಷಣಗಳನ್ನು ವಿರೋಧಿಸುವ ಭರಾಟೆಯಲ್ಲಿ ಕಾವ್ಯಕ್ಕೆ ಮೂಲವಾಗಿದ್ದ ಛಂದಸ್ಸನ್ನೇ ಬಿಡಬೇಕೆಂಬ ನಿರ್ಣಯ ಮೂಡಿದ್ದು, ಕಾಲಾಂತರದಲ್ಲಿ ಹಲವು ಅಡ್ಡಪರಿಣಾಮಗಳಿಗೆ ಕಾರಣವಾಯಿತೆಂದು ನಾನು ಭಾವಿಸಿದ್ದೇನೆ. ೨೦ನೆಯ ಶತಮಾನದ ಮಹತ್ತ್ವದ ಕನ್ನಡ ಕವಿಗಳೆಲ್ಲರೂ ಛಂದಸ್ಸನ್ನು ಬಿಟ್ಟರೂ ಲಯವನ್ನು ಬಿಡದೆ, ಅಥವಾ ಪ್ರಚ್ಛನ್ನ ರೂಪದಲ್ಲಿ ಛಂದಸ್ಸನ್ನೇ ಉಳಿಸಿಕೊಂಡು, ಈ ಅಡ್ಡಪರಿಣಾಮಗಳಿಗೆ ಸಿಲುಕದೆ ಗೆದ್ದರು. ಆದರೆ, ದುರ್ಬಲ ಕವಿಗಳಿಗೆ ಛಂದಸ್ಸನ್ನು ಬಿಟ್ಟಿದ್ದು ಕಾವ್ಯವೆನ್ನುವ ಕಸುಬನ್ನು ಸುಲಭ ಮಾಡಿಕೊಟ್ಟಂತಾಯಿತು. ಫಲವಾಗಿ, ಇವತ್ತು ಬರೆಯುತ್ತಿರುವ ಶೇಕಡಾ ತೊಂಬತ್ತಕ್ಕೂ ಹೆಚ್ಚಿನ ಹೊಸ ಕವಿಗಳಲ್ಲಿ ಛಂದಸ್ಸು ಹೋಗಲಿ, ಲಯವೇ ಕಾಣೆಯಾಗಿರುವುದರಿಂದ ಅವು ಕತ್ತರಿಸಿಟ್ಟ ಗದ್ಯದ ಸಾಲುಗಳ ಹಾಗೆ ಕಾಣುತ್ತವೆ. ನನ್ನ ಓದಿನ ಮಿತಿಯಲ್ಲಿ ಕಂಡಂತೆ, ಇವತ್ತಿನ ಕಾವ್ಯದಲ್ಲಿ ಓದುತ್ತಿದ್ದಂತೆ ಮನಸ್ಸಲ್ಲಿ ಗುನುಗುನಿಸಿ ನೆನಪಿನಲ್ಲುಳಿಯುವ ಒಂದು ಸಾಲೂ ಕಾಣಸಿಗುವುದು ಅಪರೂಪ. ಇಷ್ಟರ ಮೇಲೆ, ಕಾವ್ಯವು ಸಾಮಾಜಿಕ ಕಳಕಳಿಯ ಮುಖವಾಣಿಯಾಗಬೇಕು, ಮತ್ತು ವರ್ತಮಾನ ವಾಸ್ತವಗಳ ಪ್ರತಿಬಿಂಬವಾಗಬೇಕು – ಎಂಬ ಅರೆಬೆಂದ ತಿಳುವಳಿಕೆಗಳು ಕಲಸುಮೇಲೋಗರಗೊಂಡು ಇವತ್ತು, ಕಾವ್ಯವೆಂಬುದು ಲಯಬದ್ಧ ಭಾಷೆಯಲ್ಲಿ ಸಂಭವಿಸುವ ಒಂದು ಪ್ರಕ್ರಿಯೆಯೆಂಬುದೂ, ಅದು ಚಿಂತನೆಯ ಅನುವಾದ ವಲ್ಲವೆಂಬುದೂ ಮರೆತುಹೋದ ಸ್ಥಿತಿಯಲ್ಲಿ ನಾವಿದ್ದೇವೆ.

ಇಂಥ ಅನೇಕ ಕಾರಣಗಳಿಂದಾಗಿ, ಈ ಲೇಖನದಲ್ಲಿ ನಾನು ಉಲ್ಲೇಖಿಸುತ್ತಿರುವ ಇಬ್ಬರು ಮಹನೀಯರು ನನಗೆ ಮುಖ್ಯರಾಗಿ ಕಾಣುತ್ತಾರೆ – ಬಿಡಿ ವ್ಯಕ್ತಿಗಳಾಗಿ ಅಲ್ಲ; ಅವರು ಪ್ರತಿನಿಧಿಸುತ್ತಿದ್ದ ಪರಂಪರೆಯ ಮಾರ್ಗಕ್ಕಾಗಿ. ಇವತ್ತಿನ ಕಾಲದಲ್ಲಿ, ವ್ಯಕ್ತಿಗಳನ್ನು 'ವೈಯಕ್ತಿಕ' ಸಾಧನೆಗಳಿಗಾಗಿ ಪುರಸ್ಕರಿಸುವ ರೂಢಿ ಹೆಚ್ಚಾಗಿದೆ;

ಸಮಕಾಲೀನ ಜಗತ್ತಿನ ಬಗೆಬಗೆಯ  ಮನ್ನಣೆಗಳೆಲ್ಲ ಇಂಥ ವ್ಯಕ್ತಿಗತ ಸಾಧನೆಗಳ ಸಂಭ್ರಮಾಚರಣೆಯೇ.   ಇಂಥ ಆಚರಣೆಗಳಿಂದ ಒಂದು ಸಮಾಜದ ಕೆಲವು ಲೇಖಕರು-ಚಿಂತಕರು ಸೆಲೆಬ್ರಿಟಿಗಳಾಗಿ ಪರಿವರ್ತನೆಗೊಳ್ಳುತ್ತಾರೆ; ಅವರ ಕೃತಿಗಳು ಓದದೆಯೂ ಹೆಮ್ಮೆ ಪಡಬಹುದಾದ ಆಸ್ತಿಗಳಾಗಿ ರೂಪಾಂತರಗೊಳ್ಳುತ್ತವೆ. ಕೆಲವರ್ಷಗಳ ಹಿಂದೆ, ಜೈಪುರ ಸಾಹಿತ್ಯೋತ್ಸವ ಕುರಿತು ಅಮಿತಾವ್ ಘೋಷ್ ಮಾಡಿದ ಟೀಕೆಯನ್ನು ನಾನು ಇದೇ ಅರ್ಥದಲ್ಲಿ ಗ್ರಹಿಸುತ್ತೇನೆ.  ಈ ಯಾವ ಬೆಳವಣಿಗೆಯೂ ಒಂದು ಸಂಸ್ಕೃತಿ ಪರಂಪರೆಯ ಆರೋಗ್ಯವಂತ ಮುಂದುವರಿಕೆಗೆ ಉಪಯುಕ್ತವಲ್ಲ ಎಂಬುದು ನನ್ನ ನಂಬಿಕೆ.

••• ••• •••

ನೀ.ನಾ. ಮಧ್ಯಸ್ಥರು ಎಂಟು ದಶಕ ಬದುಕಿ ಇಲ್ಲವಾಗಿದ್ದಾರೆ; ಗ.ಸು. ಭಟ್ಟರು ಇದ್ದಷ್ಟೇ ದಿನ ತಮಗೆ ಸರಿಕಂಡಿದ್ದನ್ನು ಬರೆದು ತಮ್ಮ ಬದುಕನ್ನು ಇಲ್ಲವಾಗಿಸಿಕೊಂಡಿದ್ದಾರೆ – ಅದು ಅವರನ್ನು ಬಲ್ಲವರಿಗೆಲ್ಲ ವಿಷಾದದ ವಿಷಯ.  ಆದರೆ, ಒಮ್ಮೊಮ್ಮೆ ನೋಡಿದರೆ, ಅವರು ಪ್ರತಿನಿಧಿಸುತ್ತಿದ್ದ ದಾರಿಗಳೇ ಇಂದು ಅವಸಾನದತ್ತ ಸಾಗುವಂತೆ ಕಾಣುತ್ತಿದೆಯಲ್ಲ, ಅದು ಇನ್ನೂ ವಿಶಾಲವಾದ ವಿಷಾದದ ಸಂಗತಿ.  ಅಥವಾ, ಇನ್ನೊಂದು ರೀತಿಯಿಂದ ನೋಡಿದರೆ, ಅಂಥ ವಿಶಾಲ ವಿಷಾದಕ್ಕೆ ಕಾರಣವಿಲ್ಲ.  ಕಳೆದ ಆರೆಂಟು ವರ್ಷಗಳ ಈಚೆಗೆ, ತಾಳಮದ್ದಲೆಯ ಕಲಾವಲಯದ ಜತೆಗೆ ಅಷ್ಟಿಷ್ಟು ಒಡನಾಡುತ್ತಿರುವ ನನ್ನ ಪರಿಮಿತ ಅನುಭವದಲ್ಲಿಯೇ ಕಾಣುತ್ತಿರುವ ಹಾಗೆ, ಮಧ್ಯಸ್ಥರಂಥ ಪಂಡಿತರು ಮತ್ತು ಭಟ್ಟರಂಥ ಕವಿಗಳು ನಮ್ಮ ಯುವಜನರ ನಡುವೆ ಇನ್ನೂ ಹುಟ್ಟುತ್ತಲೇ ಇದ್ದಾರೆ; ಅವರ ಸಂತತಿ ಬೆಳೆಯುತ್ತಲೂ ಇದೆ.  ಅಂಥವರನ್ನು ಕಾಣುವ ಕಣ್ಣುಗಳು ಮಾತ್ರ ನಮ್ಮ ತಥಾಕಥಿತ ಶಿಕ್ಷಿತ ವರ್ಗದಲ್ಲಿ ಇನ್ನೂ ಅಲ್ಪಸಂಖ್ಯಾತ, ಅಷ್ಟೇ.

•••



## ನೀನಾಸಮ್ ವರದಿಗಳು

**ನೀನಾಸಮ್ ರಂಗಶಿಕ್ಷಣ ಕೇಂದ್ರ:** ೧೫ ಜುಲೈ ೨೦೧೩ಕ್ಕೆ ರಂಗಶಿಕ್ಷಣ ಕೇಂದ್ರವು ೩೪ನೆಯ ಶೈಕ್ಷಣಿಕ ವರ್ಷಕ್ಕೆ ಕಾಲಿಟ್ಟಿತು.  ಜುಲೈ ೩೧ ಮತ್ತು ಆಗಸ್ಟ್ ೧ರಂದು ತಾಳಮದ್ದಲೆ ಕಮ್ಮಟ ನಡೆಸಲಾಯಿತು.  ಶ್ರೀಯುತರಾದ ಬಲಿಪ ನಾರಾಯಣ ಭಾಗವತರು, ಡಾ.ಎಂ.ಪ್ರಭಾಕರ ಜೋಶಿ, ಉಮಾಕಾಂತ ಭಟ್, ರಾಧಾಕೃಷ್ಣ ಕಲ್ಚಾರ್, ವಾಸುದೇವರಂಗ ಭಟ್, ಸುಣ್ಣಂಗಳ ವಿಶ್ವನಾಥ ಮೊದಲಾದ ಕಲಾವಿದರು ಪ್ರಸಂಗ ಮತ್ತು ಪ್ರಾತ್ಯಕ್ಷಿಕೆಗಳನ್ನು ನಡೆಸಿಕೊಟ್ಟರು.  ಶ್ರೀ ಪ್ರಶಾಂತ ಮಧ್ಯಸ್ಥರು ವಿದ್ಯಾರ್ಥಿಗಳಿಗೆ ತಾಳಮದ್ದಲೆಯ ತರಬೇತಿ ನೀಡಿ ಜುಲೈ ೧೭ರಂದು ಎರಡು ಆಖ್ಯಾನಗಳ ಪ್ರಸ್ತುತಿ ಮಾಡಿಸಿದರು.  ವಿದ್ಯಾರ್ಥಿಗಳು ಶ್ರೀ ವಿ.ಎಸ್. ಮೂರ್ತಿಯವರ ನಿರ್ದೇಶನದಲ್ಲಿ 'ಪಂಚವಟಿ' ಯಕ್ಷಗಾನವನ್ನು ಕಲಿತು ಆಗಸ್ಟ್ ೨೨ರಂದು ಪ್ರದರ್ಶನ ನೀಡಿದರು.  ಸದ್ಯ ಶ್ರೀ ಮಂಜು ಕೊಡಗು ಅವರ ನಿರ್ದೇಶನದಲ್ಲಿ ಭಾಸನ 'ದೂತ ಘಟೋತ್ಕಚ'ದ ತಾಲೀಮು ನಡೆಸುತ್ತಿದ್ದಾರೆ.

**ನೀನಾಸಮ್ ತಿರುಗಾಟ ೨೦೧೩:** ಈ ಸಾಲಿನ ನಾಟಕಗಳು: 'ಸೀತಾಸ್ವಯಂವರ' (ರಚನೆ: ಎಂ.ಎಲ್. ಶ್ರೀಕಂಠೇಶ ಗೌಡ; ನಿರ್ದೇಶನ: ಮಂಜುನಾಥ ಎಲ್. ಬಡಿಗೇರ) ಮತ್ತು 'ಗಾಂಧಿ ವಿರುದ್ಧ ಗಾಂಧಿ' (ಅಜಿತ ದಳವಿಯವರ ಮರಾಠಿ ನಾಟಕದ ಅನುವಾದ: ಡಿ.ಎಸ್. ಚೌಗಲೆ; ನಿರ್ದೇಶನ: ಗಣೇಶ ಎಂ).  ಅಕ್ಟೋಬರ್ ೧೩ ಮತ್ತು ೧೪ ರಂದು ನೀನಾಸಮ್ ಸಂಸ್ಕೃತಿ ಶಿಬಿರದಲ್ಲಿ ಮೊದಲ ಪ್ರದರ್ಶನಗಳು ನಡೆಯಲಿವೆ.

**ನೀನಾಸಮ್ ನಾಟಕ:** ನೀನಾಸಮ್ ತಂಡದ ಈ ಸಾಲಿನ ನಾಟಕ ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ ಕಾದಂಬರಿಯನ್ನು ಆಧರಿಸಿದ 'ಜುಗಾರಿ ಕ್ರಾಸ್' (ರಂಗರೂಪ ಮತ್ತು ನಿರ್ದೇಶನ: ನಟರಾಜ ಹೊನ್ನವಳ್ಳಿ).  ಜುಲೈ ೧೬ರಂದು ಕೆ.ವಿ.ಸುಬ್ಬಣ್ಣನವರ ನೆನಪಿನ ಕಾರ್ಯಕ್ರಮದ ಅಂಗವಾಗಿ ಇದರ ಮೊದಲ ಪ್ರದರ್ಶನ ನಡೆಯಿತು.

**ಕೆ.ವಿ. ಸುಬ್ಬಣ್ಣ ನೆನಪಿನ ಕಾರ್ಯಕ್ರಮ:** ಜುಲೈ ೧೬ರಂದು ಡಾ.ಎಂ.ಎಸ್. ಶ್ರೀರಾಮ್ ಅವರಿಂದ 'ಸಹಕಾರಿ ಚಳವಳಿ: ಹಿಂದೆ-ಇಂದು-ಮುಂದೆ' ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು.  ಮೊದಲಿಗೆ ಸುಬ್ಬಣ್ಣನವರ ಆತ್ಮೀಯ ಸ್ನೇಹಿತರಾಗಿದ್ದ ತೀರ್ಥಹಳ್ಳಿಯ ಶ್ರೀ ಕೆ. ಗಂಗಾಧರ ಅವರು ಸುಬ್ಬಣ್ಣನವರೊಂದಿಗಿನ ತಮ್ಮ ಒಡನಾಟದ ನೆನಪುಗಳನ್ನು ಹಂಚಿಕೊಂಡರು.

**ಮಾತುಕತೆ ೧೦೭**

ನೀನಾಸಮ್ ಹೆಗ್ಗೋಡು (ಸಾಗರ) ಕರ್ನಾಟಕ ೫೭೭ ೪೧೭

ದೂರವಾಣಿ: ೦೮೧೮೩-೨೬೫೬೪೬

www.ninasam.org

ಖಾಸಗಿ ಪ್ರಸಾರದ ತ್ರೈಮಾಸಿಕ ಸಂಪರ್ಕಪತ್ರ

(ಫೆಬ್ರವರಿ-ಮೇ-ಆಗಸ್ಟ್-ನವೆಂಬರ್)

ಸಂಪಾದಕ: ಬಿ.ಆರ್. ವೆಂಕಟರಮಣ ಐತಾಳ

ಸಂಪಾದಕ ಮಂಡಳಿ: ಟಿ.ಪಿ.ಅಶೋಕ, ಜಶವಂತ ಜಾಧವ್

ವಾರ್ಷಿಕ ವರ್ಗಣಿ: ಎಂಬತ್ತು ರೂಪಾಯಿ

ಅಕ್ಷರ ಜೋಡಣೆ: ಅಕ್ಷರ ಗಣಕ, ಹೆಗ್ಗೋಡು,

ಮುದ್ರಣ: ಸ್ವಾಪ್ ಪ್ರಿಂಟರ್ಸ್, ಬೆಂಗಳೂರು


---

**ಆಗಸ್ಟ್ ೨೦೧೩ ವರ್ಷ ಇಪ್ಪತ್ತೇಳು ಸಂಚಿಕೆ ಮೂರು**

---


| | | |
|---|---|---|
| ೧. | **ಕೆ.ವಿ. ಸುಬ್ಬಣ್ಣ ಸ್ಮರಣೆ** | |
| | - ಗಂಗಾಧರ್ ಕಲ್ಲಹಳ್ಳ | ಪುಟ ೧ |
| ೧. | **ಸಹಕಾರ ಚಳವಳಿ : ಹಿಂದೆ-ಇಂದು- ಮುಂದು** | |
| | - ಎಂ.ಎಸ್. ಶ್ರೀರಾಮ್ | ಪುಟ ೯ |
| ೨. | **ಸಹಕಾರ ಚಳವಳಿ : ಒಂದು ಪರಿಚಯ** | |
| | - ಎಂ.ಎಸ್. ಶ್ರೀರಾಮ್ | ಪುಟ ೨೪ |
| ೩. | **ಕಳಚಿದ ಕೊಂಡಿಗಳು** | |
| | - ಅಕ್ಷರ ಕೆ.ವಿ. | ಪುಟ ೪೪ |
| ೫. | **ನೀನಾಸಮ್ ವರದಿಗಳು** | ಪುಟ ೫೬ |


second cover ←


**MAATHUKATHE** AUG 2013 (YEAR 27 ISSUE 3)
NINASAM QUARTERLY NEWSLETTER
PUBLISHED EVERY FEB;MAY;AUG;NOV.
ANNUAL SUBSCRIPTION: Rs.80 (EIGHTY ONLY)
FOR PRIVATE CIRCULATION
**NINASAM HEGGODU (SAGAR) KARNATAKA 577 417**


Third cover →


**ಅಕ್ಷರ ಪ್ರಕಾಶನ**

ಹೆಗ್ಗೋಡು (ಸಾಗರ) ಕರ್ನಾಟಕ - ೫೭೭ ೪೧೭

**ಈಚಿನ ಪ್ರಕಟಣೆಗಳು**

| | |
|---|---|
| **ನಾಟ್ಯಶಾಸ್ತ್ರ** (ಕನ್ನಡ ಅನುವಾದ) ಅನು: ಆದ್ಯ ರಂಗಾಚಾರ್ಯ | ರೂ. ೪೦೦ |
| **ರಂಗಪ್ರಯೋಗ** (ರಂಗ ಅಭಿನಯ, ರಂಗತಂತ್ರಗಳು ಮತ್ತು ರಂಗಸಿದ್ಧತೆಯ ಪರಿಚಯ) ಅಕ್ಷರ ಕೆ.ವಿ. | ರೂ. ೨೧೦ |
| **ಅನುಕ್ತ** (ದೃಶ್ಯಕಲೆಗಳ ರಸಗ್ರಹಣ ಕುರಿತ ಬರಹಗಳು - ರವಿಕುಮಾರ್ ಕಾಶಿ) | ರೂ. ೩೨೫ |
| **ಕಣ್ಣೆಲೆ** (ದೃಶ್ಯಕಲೆ ಕುರಿತ ಬರಹಗಳು - ರವಿಕುಮಾರ್ ಕಾಶಿ) | ರೂ. ೧೧೫ |
| **ಹರಿವ ನೀರು** (ಪ್ರಬಂಧಗಳು - ವೈದೇಹಿ) | ರೂ. ೧೫೫ |
| **ಹುಡುಕಾಟವನ್ನು ನಿಲ್ಲಿಸದಿರೋಣ** (ಎಸ್. ಎನ್. ಬಾಲಗಂಗಾಧರ - ಕನ್ನಡಕ್ಕೆ: ಜೆ.ಎಸ್. ಸದಾನಂದ) | ರೂ. ೧೧೫ |
| **ಭಾರತೀಯ ದರ್ಶನಗಳು ಮತ್ತು ಭಾಷೆ** (ಎಂ.ಎ. ಹೆಗಡೆ) | ರೂ. ೧೧೫ |
| **ಕಾಲದಲೆಯ ಮೇಲೆ** (ಕವನ ಸಂಕಲನ - ಕೆ.ಎಸ್. ಪೂರ್ಣಿಮಾ) | ರೂ. ೬೦ |
| **ಸುರಗಿ** (ಯು.ಆರ್. ಅನಂತಮೂರ್ತಿಯವರ ಆತ್ಮಕಥನ - ನಿರೂಪಣೆ ಮತ್ತು ಸಂಯೋಜನೆ: ಜ.ನಾ. ತೇಜಶ್ರೀ | ರೂ. ೨೫೦ |
| **ಫಾಚರ್ ಫೋಚರ್** (ಕಥಾ ಸಂಕಲನ - ವಿವೇಕ ಶಾನಭಾಗ) | ರೂ. ೯೫ |
| **ಭಾರತ ಯಾತ್ರೆ** (ನಾಟಕ - ಅಕ್ಷರ ಕೆ.ವಿ.) | ರೂ. ೭೦ |
| **ಶಕ್ತಿಶಾರದೆಯ ಮೇಳ** (ಆಧುನಿಕ ಕನ್ನಡ ಕಾವ್ಯದ ಅಧ್ಯಯನ - ಮರುಮುದ್ರಣ - ಡಿ.ಆರ್. ನಾಗರಾಜ್) | ರೂ. ೨೨೦ |
| **ಸಮ್ಮುಖದಲ್ಲಿ ಸ್ವಗತ** (ಸಮಾಜ-ಸಂಸ್ಕೃತಿ ಕುರಿತ ಕಿರುಬರಹಗಳು - ಮರುಮುದ್ರಣ - ಅಕ್ಷರ ಕೆ.ವಿ.) | ರೂ. ೧೧೫ |
| **ಚೂರಿಕಟ್ಟೆ ಅರ್ಥಾತ್ ಕಲ್ಯಾಣಪುರ** (ನಾಟಕ - ಮರುಮುದ್ರಣ - ಅಕ್ಷರ ಕೆ.ವಿ.) | ರೂ. ೬೦ |
| **ಕಥನ ಪ್ರೀತಿ** (ಒಂದು ನೂರು ಕನ್ನಡ ಸಣ್ಣಕತೆಗಳ ವಿಶ್ಲೇಷಣೆ - ಟಿ.ಪಿ. ಅಶೋಕ) | ರೂ. ೨೬೦ |
| **ಕಾವ್ಯ ಪ್ರೀತಿ** (ಕನ್ನಡ ಕವಿತೆಗಳನ್ನು ಕುರಿತ ೫೦ ಲೇಖನಗಳ ಸಂಕಲನ - ಟಿ.ಪಿ. ಅಶೋಕ) | ರೂ. ೧೫೫ |
| **ಮಾಗಿಕಾಲದ ಸಾಲುಗಳು** (ಕವಿತೆಗಳು - ಜ.ನಾ. ತೇಜಶ್ರೀ) | ರೂ. ೫೦ |

**ಹೊಸತಾಗಿ ಆರಂಭಗೊಂಡಿರುವ ನಮ್ಮ ಅಂತರ್ಜಾಲದ ಪುಸ್ತಕದಂಗಡಿ**

**www.aksharaprakashana.com**

**ಇಲ್ಲಿಗೆ ಭೇಟಿಕೊಡಿ**